# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ನವೆಂಬರ್ ೪ನೇ ವಾರ**

24-11-2025 TO 29-11-2025

## ಶ್ರೀಲಂಕಾದಲ್ಲಿ ಭಾರಿ ಮಳೆ ‘ದಿತ್ವಾ’ ಚಂಡಮಾರುತ

- ನೀತಾ ಅಂಬಾನಿಗೆ ‘ಜಾಗತಿಕ ಶಾಂತಿ ಗೌರವ’
- ಪಿಎಲ್‌ಎ: ಪ್ಲಾಸ್ಟಿಕ್ಕೆ ಪರ್ಯಾಯ
- ವಿರಳ ಲೋಹಕ್ಕೆ ಉತ್ತೇಜನ
- ಸಿಎನ್‌ಆರ್ ರಾವ್ಗೆ ಶಿವಶ್ರೀ ಪ್ರಶಸ್ತಿ



ಭಾರತ 'ಕಣ್ಮಣಿ'ಗಳಿಗೆ ವಿಶ್ವ ಕಿರೀಟ

ಕೊಲಂಬೊ(ಪಿಟಿಐ): ಭಾರತ ಅಂಧ ಮಹಿಳಾ ಕ್ರಿಕೆಟ್ ತಂಡವು ಭಾನುವಾರ ಚೊಚ್ಚಲ ಟಿ20 ವಿಶ್ವಕಪ್ ಜಯಿಸಿತು.

ಫೈನಲ್ ಸ್ಕೋರ್

ನೇಪಾಳ 5ಕ್ಕೆ 114 (20 ಓವರ್‌ಗಳಲ್ಲಿ)

ಭಾರತ 3ಕ್ಕೆ 117 (12 ಓವರ್‌ಗಳಲ್ಲಿ)

ಫಲಿತಾಂಶ: ಭಾರತ ತಂಡಕ್ಕೆ 7 ವಿಕೆಟ್‌ಗಳ ಜಯ.

ಪ್ರಮುಖ ಅಂಶಗಳು

- ಇದೇ ಮೊದಲ ಬಾರಿಗೆ ನಡೆದ ಅಂಧ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್
- ಸ್ಪರ್ಧಾಕಣದಲ್ಲಿದ್ದ ಭಾರತ, ಆಸ್ಟ್ರೇಲಿಯಾ, ಶ್ರೀಲಂಕಾ, ಪಾಕಿಸ್ತಾನ, ನೇಪಾಳ ಮತ್ತು ಅಮೆರಿಕ ತಂಡಗಳು
- ಭಾರತ ತಂಡಕ್ಕೆ ತುಮಕೂರು ಜಿಲ್ಲೆಯ ದೀಪಿಕಾ ಟಿ.ಸಿ. ನಾಯಕತ್ವ

10

ಮೂರು ಬಗೆಯ ಅಂಧತ್ವ

- ಬಿ1; ಪೂರ್ಣ ಅಂಧತ್ವ ಇರುವ ಆಟಗಾರ್ತಿಯರು
- ಬಿ2: ಸುಮಾರು 2 ಮೀಟರ್ ದೂರ ನೋಡಬಲ್ಲರು
- ಬಿ3: 6 ರಿಂದ 8 ಮೀಟರ್‌ಗಳವರೆಗೆ ದೃಷ್ಟಿ ಹಾಯಿಸಬಲ್ಲರು.

ನಿಯಮದ ಪ್ರಕಾರ ಈ ಮೂರು ಬಗೆಯ ಆಟಗಾರ್ತಿಯರೂ ತಂಡದಲ್ಲಿರಬೇಕು. ಭಾಗಶಃ ಅಂಧತ್ವ ಇರುವವರು ಪೂರ್ಣ ಅಂಧರಿಗೆ ಸಹಾಯ ಮಾಡುತ್ತ ಪರಸ್ಪರ ತಂಡವಾಗಿ ರೂಪುಗೊಳ್ಳುವ ಬಗ್ಗೆ ಅಪ್ಪವಾದುದು. ಅವರಿಗೆ ಅರಿವಿಲ್ಲದೇ ಪರಸ್ಪರ ಉತ್ತಮ ಸ್ನೇಹಿತರಾಗಿ, ಜೀವನ ಮತ್ತು ವ್ಯಕ್ತಿತ್ವವನ್ನು ಕ್ರಿಕೆಟ್ ಮೂಲಕ ಕಟ್ಟಿಕೊಳ್ಳುತ್ತಾರೆ.

## ❖ ಸಿಜೆಐ ಆಗಿ ನ್ಯಾ. ಸೂರ್ಯ ಕಾಂತ್ ಇಂದು ಪ್ರಮಾಣ

**ಸಂದರ್ಭ: ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸುಪ್ರೀಂ ಕೋರ್ಟ್‌ನ 53ನೇ ಮುಖ್ಯ ನ್ಯಾಯಮೂರ್ತಿ ಯಾಗಿ (ಸಿಜೆಐ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಹಾಲಿ ಸಿಜೆಐ ಬಿ.ಆರ್. ಗವಾಯಿ ಅವರು ನಿವೃತ್ತರಾದರು. ಸೂರ್ಯ ಕಾಂತ್ ಅವರನ್ನು ಮುಂದಿನ ಸಿಜೆಐ ಆಗಿ, ಅ.30 ರಂದು ನೇಮಕ ಮಾಡಲಾಯಿತು. 15 ತಿಂಗಳು ಈ ಹುದ್ದೆಯಲ್ಲಿರುವ ಇವರು, 65 ವರ್ಷ ವಯಸ್ಸು ತಲುಪಿದ ಬಳಿಕ 2027ರ ಫೆ.9ರಂದು ನಿವೃತ್ತರಾಗಲಿದ್ದಾರೆ.**

- ಹರಿಯಾಣದ ಹಿಸ್ಸಾರ್‌ನಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ ಸೂರ್ಯ ಕಾಂತ್ ಅವರು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಯಾಗಿ ಹಾಗೂ ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕೆಲಸ ಮಾಡಿದ್ದಾರೆ. ಬಳಿಕ ಸುಪ್ರೀಂ ಕೋರ್ಟ್ ನ್ಯಾಯ ಮೂರ್ತಿಯಾಗಿ ನೇಮಕಗೊಂಡರು.
- **ಸಂವಿಧಾನದ 370ನೇ ವಿಧಿ** ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದು ಹಾಗೂ ಬಿಹಾರದಲ್ಲಿ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ ಕುರಿತ ಪ್ರಕರಣ ಸೇರಿದಂತೆ ಹಲವು ಮಹತ್ವದ ತೀರ್ಪು ನೀಡಿದ ಪೀಠಗಳಲ್ಲಿ ಸೂರ್ಯ ಕಾಂತ್ ಇದ್ದರು.

## ❖ ಆಡಳಿತಾಧಿಕಾರಿ: ಪಂಜಾಬ್ ವಿರೋಧ

**ಸಂದರ್ಭ: ಕೇಂದ್ರಾಡಳಿತ ಪ್ರದೇಶವಾಗಿರುವ ಚಂಡೀಗಢವನ್ನು ಸಂವಿಧಾನದ 240ನೇ ವಿಧಿಯಡಿ ಸೇರಿಸಿ, ಅಲ್ಲಿಗೆ ರಾಷ್ಟ್ರಪತಿಯವರ ಮೂಲಕ ಪ್ರತ್ಯೇಕ ಆಡಳಿತಾಧಿಕಾರಿ ಯನ್ನು ನೇಮಿಸುವ ಮಸೂದೆ ಜಾರಿಗೆ ತರುವ ಎನ್‌ಡಿಎ ಪ್ರಸ್ತಾವಕ್ಕೆ ಆಡಳಿತಾರೂಢ ಎಎಪಿ, ಕಾಂಗ್ರೆಸ್, ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ತೀವ್ರ ವಿರೋಧ ವ್ಯಕ್ತಪಡಿಸಿವೆ.**

- **ಪಂಜಾಬ್ ಮತ್ತು ಹರಿಯಾಣ ರಾಜ್ಯ ಗಳಿಗೆ ಚಂಡೀಗಢ ರಾಜಧಾನಿಯಾಗಿದೆ.** ಡಿಸೆಂಬರ್ 1ರಿಂದ ಪ್ರಾರಂಭವಾಗಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲು ಪಟ್ಟಿ ಮಾಡಲಾದ 10 ಮಸೂದೆಗಳಲ್ಲಿ, ಸಂವಿಧಾನದ (131ನೇ ತಿದ್ದುಪಡಿ) ಮಸೂದೆ –2025 ಸೇರಿದೆ ಎಂದು ಲೋಕಸಭೆ ಮತ್ತು ರಾಜ್ಯಸಭೆಯು ಪ್ರಕಟಣೆ ತಿಳಿಸಿತ್ತು.
- **ಸದ್ಯ ಚಂಡೀಗಢದಲ್ಲಿ ಪಂಜಾಬ್ ರಾಜ್ಯಪಾಲರೇ ಆಡಳಿತ ನಡೆಸುತ್ತಿದ್ದಾರೆ.** ಪ್ರಸ್ತಾವಿತ ಮಸೂದೆಗೆ ಅನುಮೋದನೆ ಲಭಿಸಿದರೆ ಚಂಡೀಗಢಕ್ಕೆ ಈ ಹಿಂದೆ ಸ್ವತಂತ್ರ ಮುಖ್ಯ ಕಾರ್ಯದರ್ಶಿ ಇದ್ದಂತೆ ಸ್ವತಂತ್ರ ಆಡಳಿತಾಧಿಕಾರಿ ನೇಮಕ ಗೊಳ್ಳುತ್ತಾರೆ. ಪಂಜಾಬ್ ಹಾಗೂ ಹರಿಯಾಣದ ಜಂಟಿ ರಾಜಧಾನಿಯಾಗಿ ಚಂಡೀಗಢ ಮುಂದೆಯೂ ಕಾರ್ಯನಿರ್ವಹಿಸಲಿದೆ.
- **1966ರಲ್ಲಿ ಪಂಜಾಬ್ ಪುನರ್ ವಿಂಗಡಣೆಯಾದ ಬಳಿಕ ಚಂಡೀಗಢದಲ್ಲಿ ಮುಖ್ಯ ಕಾರ್ಯದರ್ಶಿ ಸ್ವತಂತ್ರವಾಗಿ ಆಡಳಿತ ನಡೆಸುತ್ತಿದ್ದರು. 1984ರ ಜೂನ್ 1ರಿಂದ ಅಲ್ಲಿ ಪಂಜಾಬ್‌ನ ರಾಜ್ಯಪಾಲರು ಆಡಳಿತ ನಡೆಸುತ್ತಿದ್ದಾರೆ. ರಾಜ್ಯಪಾಲರ ಆಡಳಿತದ ನಂತರ ಮುಖ್ಯ ಕಾರ್ಯದರ್ಶಿಯ ಹುದ್ದೆಯನ್ನು ಚಂಡೀಗಢದ ಆಡಳಿ ತಾಧಿಕಾರಿಯ ಸಲಹೆಗಾರ ಹುದ್ದೆಯಾಗಿ ಪರಿವರ್ತಿಸಲಾಗಿದೆ.**
- 2016ರಲ್ಲಿ ಚಂಡೀಗಢಕ್ಕೆ ಮಾಜಿ ಐಎಎಸ್ ಅಧಿಕಾರಿ ಕೆ.ಜೆ. ಅಲ್ಫೋನ್ಸ್ ಅವರನ್ನು ನೇಮಿಸುವ ಮೂಲಕ ಕೇಂದ್ರ ಸರ್ಕಾರವು, ಸ್ವತಂತ್ರ ಆಡಳಿತಾಧಿಕಾರಿ ನೇಮಿಸುವ ಹಳೆಯ ಪದ್ಧತಿಯನ್ನೇ ಮರು ಸ್ಥಾಪಿಸಲು ಪ್ರಯತ್ನಿಸಿತು. ಆದರೆ, ಆಗಿನ ಪಂಜಾಬ್ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ಅವರ ತೀವ್ರ ವಿರೋಧದಿಂದ ಈ ನೇಮಕವನ್ನು ವಾಪಸ್ ಪಡೆಯಲಾಗಿತ್ತು.

**<u>ರಾಷ್ಟ್ರಪತಿಗೆ ಅಧಿಕಾರ</u>**


- **ಸಂವಿಧಾನದ 240ನೇ ವಿಧಿಯು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಾಂತಿ– ಪ್ರಗತಿ ಮತ್ತು ಸುಸ್ಥಿರ ಆಡಳಿತಕ್ಕಾಗಿ ನೇರವಾಗಿ ನಿಯಮಗಳನ್ನು ರೂಪಿಸಲು ರಾಷ್ಟ್ರಪತಿಯವರಿಗೆ ಅಧಿಕಾರ ಕಲ್ಪಿಸುತ್ತದೆ.**
- **ಸದ್ಯ ಈ ವಿಧಿಯಡಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ದಾದ್ರಾ ಮತ್ತು ನಗರ್ ಹವೇಲಿ, ದಿಯು ಮತ್ತು ದಮನ್, ಪುದುಚೇರಿ (ವಿಧಾನಸಭೆ ಅಸ್ತಿತ್ವದಲ್ಲಿ ಇಲ್ಲದಾಗ) ಸೇರ್ಪಡೆಗೊಂಡಿವೆ.**
- ಚಂಡೀಗಢವನ್ನೂ ಇದರ ವ್ಯಾಪ್ತಿಗೆ ತರುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ಚಳಿಗಾಲದ ಅಧಿವೇಶನದಲ್ಲಿ ಜಾರಿಗೆ ತರಲು ಉದ್ದೇಶಿಸಿರುವ 10 ಮಸೂದೆಗಳ ತಾತ್ಕಾಲಿಕ ಪಟ್ಟಿಯಲ್ಲಿ ಈ ಮಸೂದೆಯೂ ಸೇರಿದೆ.

## ❖ ನೀತಾ ಅಂಬಾನಿಗೆ 'ಜಾಗತಿಕ ಶಾಂತಿ ಗೌರವ'

**ಸಂದರ್ಭ: ರಿಲಯನ್ಸ್ ಫೌಂಡೇಶನ್‌ನ ಅಧ್ಯಕ್ಷೆ ನೀತಾ ಅಂಬಾನಿ ಅವರನ್ನು 'ಜಾಗತಿಕ ಶಾಂತಿ ಗೌರವ' ಕಾರ್ಯಕ್ರಮದಲ್ಲಿ ಗೌರವಿಸ ಲಾಗಿದೆ ಎಂದು ರಿಲಯನ್ಸ್ ಫೌಂಡೇಷನ್‌ನ ಪ್ರಕಟಣೆ ತಿಳಿಸಿದೆ.**

- ಮುಂಬೈ ಮೇಲೆ ನಡೆದ ಭಯೋತ್ಪಾದಕರ ದಾಳಿಯ ಸ್ಮರಣಾರ್ಥ 'ಗೇಟ್ ವೇ ಆಫ್ ಇಂಡಿಯಾ'ದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.
- ಗೌರವ ಸ್ವೀಕರಿಸಿ ಮಾತನಾಡಿದ ನೀತಾ ಅವರು, 'ನನ್ನ ಸ್ಫೂರ್ತಿ ಭಾರತ ಮತ್ತು ಭಾರತೀಯರು. ಇಲ್ಲಿರುವ ಪ್ರೀತಿ, ಗೌರವ ಮತ್ತು ನಮ್ರತನ ಬೇರೆಲ್ಲೂ ಇಲ್ಲ. ಸುಭದ್ರ, ಸುರಕ್ಷಿತ ನಾಳೆಗಾಗಿ ದೇಶಕ್ಕಾಗಿ ಬಲಿದಾನ ಮಾಡಿದವರು ಮತ್ತು ಅವರ ಕುಟುಂಬದವರಿಗೆ ನಾನು ನಮಿಸುತ್ತೇನೆ' ಎಂದು ಹೇಳಿದ್ದಾರೆ.
- ಬಾಲಿವುಡ್ ನಟರಾದ ಶಾರೂಖ್ ಖಾನ್, ರಣವೀರ್ ಸಿಂಗ್, ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ, ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಪಾಲ್ಗೊಂಡಿದ್ದರು.

## ❖ ಕುಂದೀತೇ ತೇಜಸ್ಸು?



# ಕುಂದೀತೇ ತೇಜಸ್ಸು?

• ಸೂರ್ಯನಾರಾಯಣ ವಿ.

ಸ್ವದೇಶಿ ತಂತ್ರಜ್ಞಾನದಲ್ಲಿ ಭಾರತದಲ್ಲೇ ನಿರ್ಮಿಸಲಾದ ತೇಜಸ್ ಹಗುರ ಯುದ್ಧ ವಿಮಾನವು ದುಬೈ ಏರ್ ಶೋನ ಕೊನೆಯ ದಿನ ಕಸರತ್ತು ನಡೆಸುತ್ತಿದ್ದ ಸಂದರ್ಭದಲ್ಲೇ ಪತನಗೊಂಡಿದ್ದು ಮಾತ್ರವಲ್ಲದೇ, ವಿಮಾನದ ಪೈಲಟ್ ವಿಂಗ್ ಕಮಾಂಡರ್ ನಮಾಂಶ್ ಸ್ಯಾಲ್ ಅವರು ಮೃತಪಟ್ಟಿರುವುದು ದೇಶದ ರಕ್ಷಣಾ ವಲಯದಲ್ಲಿ ಆಘಾತ ಉಂಟು ಮಾಡಿದೆ.

ದೇಶದ ರಕ್ಷಣಾ ಕ್ಷೇತ್ರಕ್ಕೆ ಹೊಸ ದಿಕ್ಕು ತೋರುವ ಸಾಮರ್ಥ್ಯವಿರುವ ತೇಜಸ್ ಯುದ್ಧವಿಮಾನವು ಜಾಗತಿಕ ಮಟ್ಟದಲ್ಲಿ ಈಗಾಗಲೇ ಪ್ರವರ್ಧಮಾನಕ್ಕೆ ಬರುತ್ತಿದೆ. ರಕ್ಷಣಾ ವಲಯದಲ್ಲಿ ಸ್ವಾವಲಂಬನೆ ಸಾಧಿಸುವ ಮಹತ್ವಾಕಾಂಕ್ಷೆ ಹೊಂದಿರುವ ಕೇಂದ್ರ ಸರ್ಕಾರವು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನಿರ್ಮಿತ ಈ ಯುದ್ಧವಿಮಾನಗಳನ್ನು ದೊಡ್ಡ ಸಂಖ್ಯೆಯಲ್ಲಿ ವಾಯುಪಡೆ ಮತ್ತು ನೌಕಾ ಪಡೆಗಳಿಗೆ ಸೇರ್ಪಡೆಗೊಳಿಸಲು ನಿರ್ಧರಿಸಿದೆ. ಅಲ್ಲದೇ, ಬೇರೆ ದೇಶಗಳಿಗೂ ಈ ವಿಮಾನಗಳನ್ನು ರಫ್ತು ಮಾಡುವ ಯೋಜನೆಯನ್ನೂ ಹೊಂದಿದೆ. ಇಂತಹ ಸನ್ನಿವೇಶದಲ್ಲಿ ಜಾಗತಿಕವಾಗಿ ನಡೆಯುವ ಪ್ರತಿಷ್ಠಿತ ಏರ್‌ಶೋಗಳಲ್ಲಿ ಒಂದಾದ ದುಬೈ ವಾಯುಪ್ರದರ್ಶನದಲ್ಲಿ ವಿಮಾನ ಅಪಘಾತಕ್ಕೀಡಾಗಿರುವುದು, ಜಗತ್ತಿನ ಮುಂದೆ ಸ್ವದೇಶಿ ನಿರ್ಮಿತ ತಂತ್ರಜ್ಞಾನವನ್ನು ತೆರೆದಿಡುವ ಮತ್ತು ಹೊರದೇಶಗಳಿಗೆ ಈ ವಿಮಾನವನ್ನು ಮಾರಾಟ ಮಾಡುವ ಭಾರತದ ಯತ್ನಕ್ಕೆ ಕೊಂಚ ಹಿನ್ನಡೆ ಉಂಟು ಮಾಡಿದೆ ಎಂದು ಹೇಳಲಾಗುತ್ತಿದೆ.

### ಅಪಪ್ರಚಾರ

### ಹೇಗಿದೆ ತೇಜಸ್ ಯುದ್ಧ ವಿಮಾನ?

4.5 ಪೀಳಿಗೆಯ, ಎಂತಹುದೇ ಹವಾಮಾನ ಪರಿಸ್ಥಿತಿಯಲ್ಲಿ ಕಾರ್ಯಾಚರಿಸಬಲ್ಲ, ಬಹುಪಾತ್ರ ನಿರ್ವಹಿಸುವ ಸಾಮರ್ಥ್ಯವಿರುವ ಸ್ವದೇಶಿ ತಂತ್ರಜ್ಞಾನದಲ್ಲಿ ನಿರ್ಮಿಸಿರುವ ಯುದ್ಧ ವಿಮಾನ. ಈ ಶ್ರೇಣಿಯಲ್ಲೇ ಸಣ್ಣ ಮತ್ತು ಹಗುರ ಯುದ್ಧ ವಿಮಾನ ಎಂಬ ಹೆಗ್ಗಳಿಕೆ ಇದಕ್ಕಿದೆ

₹650 ಕೋಟಿ ಅಂದಾಜು ಬೆಲೆ

1 ಮತ್ತು 2* ಆಸನ ಸಾಮರ್ಥ್ಯಗಳು

* ತರಬೇತಿ ಉದ್ದೇಶದ ಯುದ್ಧವಿಮಾನಗಳು ಎರಡು ಆಸನ ಹೊಂದಿರುತ್ತವೆ

13.2 ಮೀಟರ್ ಉದ್ದ

8.2 ಮೀಟರ್ ಅಗಲ

4.4 ಮೀಟರ್ ಎತ್ತರ

13,500 ಕೆಜಿ ಗರಿಷ್ಠ ತೂಕ (ಟೇಕ್‌ಆಫ್ ಸಂದರ್ಭ)

4,000 ಕೆ.ಜಿ. ತೂಕ ಹೊರುವ ಗರಿಷ್ಠ ಸಾಮರ್ಥ್ಯ

ಜಿಇ ಎಫ್404–ಐಎನ್20 ಎಂಜಿನ್ (ಒಂದು)

1,975.68 ಕಿ.ಮೀ/ಪ್ರತಿ ಗಂಟೆಗೆ (1.6 ಮಾಕ್) ಗರಿಷ್ಠ ವೇಗ

50 ಸಾವಿರ ಅಡಿ ಗರಿಷ್ಠ ಹಾರಾಟ ಸಾಮರ್ಥ್ಯ (ಎತ್ತರ)

### ಎಲ್‌ಸಿಎ ಎಂಕೆ1ಎ

### ಏರ್‌ಶೋ: ಪ್ರಮುಖ ದುರಂತಗಳು

### ವಿಳಂಬಿತ ಯೋಜನೆ

### ಪದಬಂಧ

## ❖ ಸರ್ಕಾರಿ ವಿಮಾ ಕಂಪನಿಗಳ ವಿಲೀನ: ಪ್ರಸ್ತಾವ ಮರುಪರಿಶೀಲನೆ

**ಸಂದರ್ಭ: ಮುಂದಡಿ ಇರಿಸಿದ ಕೇಂದ್ರ ಹಣಕಾಸು ಸಚಿವಾಲಯ: ಸರ್ಕಾರಿ ಸ್ವಾಮ್ಯದ ಮೂರು ವಿಮಾ ಕಂಪನಿ ಗಳನ್ನು ವಿಲೀನಗೊಳಿಸಿ, ಒಂದೇ ಕಂಪನಿ ಯನ್ನಾಗಿ ಮಾಡುವ ಪ್ರಸ್ತಾವವನ್ನು ಮರು ಪರಿಶೀಲಿಸಲು ಕೇಂದ್ರ ಹಣಕಾಸು ಸಚಿವಾಲಯವು ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.**

- ಓರಿಯಂಟಲ್ ಇನ್ಶೂರೆನ್ಸ್, ನ್ಯಾಷನಲ್ ಇನ್ಶೂರೆನ್ಸ್ ಮತ್ತು ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಈ ಮೂರು ಕಂಪನಿಗಳು. ಈ ಕಂಪನಿಗಳನ್ನು ಆರ್ಥಿಕ ಸಂಕಷ್ಟದಿಂದ ಹೊರತರಲು 2019–20ರಿಂದ 2021–22ರವರೆಗೆ ಕೇಂದ್ರ ಸರ್ಕಾರವು ₹17,450 ಕೋಟಿ ನೀಡಿದೆ.
- 2018–19ರ ಬಜೆಟ್‌ನಲ್ಲಿ ಅಂದಿನ ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಈ ಮೂರು ಕಂಪನಿಗಳನ್ನು ವಿಲೀನಗೊಳಿಸಿ, ಒಂದೇ ವಿಮಾ ಕಂಪನಿಯಾಗಿ ಮಾಡುವುದಾಗಿ ಹೇಳಿದ್ದರು.
- ಆದರೆ, 2020ರ ಜುಲೈನಲ್ಲಿ ಕೇಂದ್ರ ಸರ್ಕಾರ ಈ ವಿಲೀನ ಆಲೋಚನೆ ಕೈಬಿಟ್ಟು, ಈ ಮೂರು ಕಂಪನಿಗಳಿಗೆ ₹12,450 ಕೋಟಿ ನೀಡಲು ಒಪ್ಪಿಗೆ ನೀಡಿತ್ತು.
- ಈ ಆರ್ಥಿಕ ನೆರವಿನಿಂದ ಕಂಪನಿಗಳ ಆರ್ಥಿಕ ಸ್ಥಿತಿ ಸುಧಾರಣೆಗೊಂಡಿದೆ. ಈಗ ಅವುಗಳ ದಕ್ಷತೆಯನ್ನು ಸುಧಾರಿಸುವ ಉದ್ದೇಶದಿಂದ ಕೇಂದ್ರ ಹಣಕಾಸು ಸಚಿವಾಲಯವು ವಿಲೀನ ಕುರಿತು ಪ್ರಾಥಮಿಕ ಮೌಲ್ಯಮಾಪನ ನಡೆಸುತ್ತಿದೆ ಎಂದು ಗೊತ್ತಾಗಿದೆ.
- ಜೊತೆಗೆ, ಒಂದು ವಿಮಾ ಕಂಪನಿಯನ್ನು ಖಾಸಗೀಕರಣ ಮಾಡುವ ಬಗ್ಗೆಯೂ ಕೇಂದ್ರವು ಆಲೋಚಿಸುತ್ತಿದೆ. ಆದರೆ ಯಾವುದೂ ತೀರ್ಮಾನ ಆಗಿಲ್ಲ ಎಂದು ಗೊತ್ತಾಗಿದೆ.
- 2021-22ರ ಬಜೆಟ್‌ನಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಎರಡು ಸರ್ಕಾರಿ ಬ್ಯಾಂಕ್ ಮತ್ತು ಒಂದು ವಿಮಾ ಕಂಪನಿಯನ್ನು ಖಾಸಗೀಕರಣ ಮಾಡುವುದಾಗಿ ಹೇಳಿದ್ದರು.
- ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಖಾಸಗೀಕರಣಕ್ಕೆ ಒಪ್ಪಿಗೆ ನೀಡುವ ವಿಮಾ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ಕಾಯ್ದೆ– 2021ಕ್ಕೆ ಅದೇ ವರ್ಷದ ಆಗಸ್ಟ್‌ನಲ್ಲಿ ಸಂಸತ್ತು ಅಂಗೀಕಾರ ನೀಡಿತ್ತು.
- ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಶೇ 51ಕ್ಕಿಂತ ಹೆಚ್ಚಿನ ಪಾಲು ಸರ್ಕಾರದ ಬಳಿಯೇ ಇರಬೇಕು ಎಂಬ ನಿಯಮ ಈವರೆಗೆ ಇತ್ತು. ಈ ತಿದ್ದುಪಡಿಯಿಂದ ಶೇ 51ರಷ್ಟು ಪಾಲನ್ನು ಸರ್ಕಾರ ಹೊಂದಿರಬೇಕು ಎಂಬ ನಿಬಂಧನೆ ತೆರವುಗೊಂಡಿದೆ. ಈ ತಿದ್ದುಪಡಿಯು ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಖಾಸಗೀಕರಣಕ್ಕೆ ಅನುಮತಿ ನೀಡಿದೆ.

## ❖ ಜಿನೀವಾ: ಮಿತ್ರ ರಾಷ್ಟ್ರಗಳ ಜೊತೆ ಉಕ್ರೇನ್ ನಿಯೋಗ ಸಭೆ

**ಸಂದರ್ಭ: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ನಿಲ್ಲಿಸಿ, ಶಾಂತಿ ಸ್ಥಾಪನೆಗಾಗಿ ಅಮೆರಿಕ ರೂಪಿಸಿರುವ ಯೋಜನೆ ಕುರಿತು ಭಾನುವಾರ ಇಲ್ಲಿ ಆರಂಭವಾಗಿರುವ ಸಭೆಯಲ್ಲಿ ಉಕ್ರೇನ್ ಹಾಗೂ ಅದರ ಮಿತ್ರ ರಾಷ್ಟ್ರಗಳು ಸಮಾಲೋಚನೆಗೆ ಚಾಲನೆ ನೀಡಿವೆ.**

- ‘ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಯ ರಾಷ್ಟ್ರೀಯ ಭದ್ರತಾ ಸಲಹೆಗಾರರೊಂದಿಗೆ ಮೊದಲ ಸಭೆ ನಡೆಸಲಾಯಿತು. ರಷ್ಯಾ ಜೊತೆಗಿನ ಶಾಂತಿ ಒಪ್ಪಂದವನ್ನು ಪರಿಷ್ಕರಿಸುವಂತೆ ಈ ಮಿತ್ರ ರಾಷ್ಟ್ರಗಳು ಉಕ್ರೇನ್‌ಗೆ ಸಲಹೆ ನೀಡಿದವು’ ಎಂದು ಉಕ್ರೇನ್ ನಿಯೋಗದ ಮುಖ್ಯಸ್ಥ ಆ್ಯಂಡ್ರಿ ಯೆರ್‌ಮಾಕ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.
- ‘ಅಮೆರಿಕ ನಿಯೋಗದ ಜೊತೆ ಮುಂದಿನ ಸಭೆ ನಡೆಯಲಿದ್ದು, ಈ ಸಮಾಲೋಚನೆಯು ರಚನಾತ್ಮಕ ವಾಗಿರಲಿದೆ ಎಂಬ ವಿಶ್ವಾಸ ಹೊಂದಿದ್ದೇವೆ. ಉಕ್ರೇನ್‌ನಲ್ಲಿ ಶಾಶ್ವತವಾಗಿ ಶಾಂತಿ ನೆಲಸುವಂತಾಗುವ ದಿಸೆಯಲ್ಲಿ ಎಲ್ಲ ಮಿತ್ರ ರಾಷ್ಟ್ರಗಳೊಂದಿಗೆ ಕಾರ್ಯನಿರ್ವಹಿಸಲಾಗುವುದು’ ಎಂದು ಯೆರ್‌ಮಾಕ್ ಹೇಳಿದ್ದಾರೆ.

- ಮಿತ್ರ ರಾಷ್ಟ್ರಗಳು ಪ್ರತಿಪಾದಿಸುತ್ತಿರುವ ಶಾಂತಿ ಒಪ್ಪಂದದ ಪರಿಷ್ಕರಣೆಯು ರಷ್ಯಾಕ್ಕೆ ಹೆಚ್ಚು ಅನುಕೂಲವಾಗುವಂತಿದೆ ಎಂದು ಹೇಳಲಾಗುತ್ತಿದೆ.
- ರಷ್ಯಾ ಮತ್ತು ಉಕ್ರೇನ್ ನಡುವೆ ನಾಲ್ಕು ವರ್ಷಗಳಿಂದ ಯುದ್ಧ ನಡೆಯುತ್ತಿದೆ. ಇದನ್ನು ಕೊನೆಗಾಣಿಸುವ ಸಲುವಾಗಿ ಅಮೆರಿಕವು 28 ಅಂಶಗಳನ್ನು ಒಳಗೊಂಡ ಶಾಂತಿ ಒಪ್ಪಂದವೊಂದನ್ನು ರೂಪಿಸಿದೆ.

**ರುಬಿಯೊ ಸಭೆ**

- ರಷ್ಯಾ–ಉಕ್ರೇನ್ ನಡುವಿನ ಶಾಂತಿ ಒಪ್ಪಂದ ಕುರಿತಂತೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು, ಉಕ್ರೇನ್ ಹಾಗೂ ಯುರೋಪ್‌ನ ಮಿತ್ರ ರಾಷ್ಟ್ರಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ಆ್ಯಂಡ್ರಿ ಯೆರ್‌ಮಾಕ್, ಅಮೆರಿಕ ಸೇನೆಯ ಕಾರ್ಯದರ್ಶಿ ಡ್ಯಾನ್ ಡ್ರಿಸ್ಕಾಲ್, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ಪ್ರತಿನಿಧಿ ಸ್ಟೀವ್ ವಿಟ್‌ಕಾಫ್ ಹಾಗೂ ಫ್ರಾನ್ಸ್, ಜರ್ಮನಿ ಮತ್ತು ಬ್ರಿಟನ್ ಪ್ರತಿನಿಧಿಗಳು ಕೂಡ ಈ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ಮೂಲಗಳು ಹೇಳಿವೆ.

## ❖ ಟಿಪ್ಪು ವಂಶಸ್ಥೆ, ಗೂಢಚಾರಿಣಿ ನೂರ್ ಅಂಚೆ ಚೀಟಿ ಬಿಡುಗಡೆ

**ಸಂದರ್ಭ: ಫ್ರಾನ್ಸ್ ಸರ್ಕಾರವು ಟಿಪ್ಪು ಸುಲ್ತಾನ್ ವಂಶಸ್ಥೆ ನೂರ್ ಇನಾಯತ್ ಖಾನ್ ಅವರ ಅಂಚೆ ಚೀಟಿ ಬಿಡುಗಡೆ ಮಾಡುವ ಮೂಲಕ ಗೌರವ ಸಲ್ಲಿಸಿದೆ. ಈ ಗೌರವಕ್ಕೆ ಪಾತ್ರರಾದ ಭಾರತ ಮೂಲದ ಏಕೈಕ ಮಹಿಳೆಯಾಗಿದ್ದಾರೆ.**

- ಫ್ರೆಂಚ್ ಅಂಚೆ ಸೇವೆ, ಲಾ ಪೋಸ್ಟೆಯು ನಾಜಿಗಳ ವಿರುದ್ಧ ಹೋರಾಡಿದವರ ಗೌರವಾರ್ಥ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದೆ. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬ್ರಿಟನ್‌ನ ವಿಶೇಷ ಕಾರ್ಯಾಚರಣೆ ವಿಭಾಗದ ರಹಸ್ಯ ಪ್ರತಿನಿಧಿಯಾಗಿ ಫ್ರಾನ್ಸ್ ಪರ ನೂರ್ ಕೆಲಸ ಮಾಡಿದ್ದರು.
- ಎರಡನೇ ಮಹಾಯುದ್ಧದ 80 ವರ್ಷಾಚರಣೆ ಸಂದರ್ಭದಲ್ಲಿ ಈ ತಿಂಗಳು ಬಿಡುಗಡೆ ಮಾಡಿದ ಅಂಚೆ ಚೀಟಿಗಳಿಗೆ ಆಯ್ಕೆಯಾದ 12 ಯುದ್ಧ ವೀರರು ಮತ್ತು ನಾಯಕಿಯರಲ್ಲಿ ನೂರ್ ಸಹ ಒಬ್ಬರು.
- ‘ಫ್ರಾನ್ಸ್ ಸರ್ಕಾರ ನೂರ್ ಇನಾಯತ್ ಖಾನ್ ಅವರ ಅಂಚೆ ಚೀಟಿ ಬಿಡುಗಡೆ ಮೂಲಕ ಗೌರವಿಸಿರುವುದು ಸಂತೋಷ ತಂದಿದೆ’ ಎಂದು ನೂರ್ ಅವರ ಜೀವನ ಚರಿತ್ರೆ ‘ಸ್ಪೈ ಪ್ರಿನ್ಸೆಸ್: ದಿ ಲೈಫ್ ಆಫ್ ನೂರ್ ಇನಾಯತ್ ಖಾನ್’ನ ಲೇಖಕಿ ಶ್ರಬಾನಿ ಬಸು ಹೇಳಿದ್ದಾರೆ.



ನೂರ್ ಇನಾಯತ್ ಖಾನ್

- ‘ನಿರಂಕುಶ ಪ್ರಭುತ್ವದ ವಿರುದ್ಧದ ಹೋರಾಟದಲ್ಲಿ ನೂರ್ ತನ್ನ ಪ್ರಾಣ ತ್ಯಾಗ ಮಾಡಿದ್ದರು. ಫ್ರಾನ್ಸ್‌ನಲ್ಲಿ ಸಾಮಾನ್ಯ ಜನರು ಪೋಸ್ಟ್ ಮಾಡುವ ಅಂಚೆ ಚೀಟಿಯಲ್ಲಿ ಅವರ ಮುಖವನ್ನು ನೋಡುವುದು ಅದ್ಭುತವಾಗಿದೆ’ ಎಂದಿದ್ದಾರೆ.

## ❖ ಭದ್ರತಾ ಮಂಡಳಿ: ಸುಧಾರಣೆ ಅನಿವಾರ್ಯ: ಐಬಿಎಸ್‌ಎ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಪ್ರತಿಪಾದನೆ

**ಸಂದರ್ಭ: ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಆಡಳಿತದಲ್ಲಿ ಸುಧಾರಣೆ ತರುವುದು ಒಂದು ಆಯ್ಕೆಯಾಗಿ ಉಳಿದಿಲ್ಲ, ಅದು ಅನಿವಾರ್ಯವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಲವಾಗಿ ಪ್ರತಿಪಾದಿಸಿದರು.**

- ಭಾರತ–ಬ್ರೆಜಿಲ್–ದಕ್ಷಿಣ ಆಫ್ರಿಕಾ (ಐಬಿಎಸ್‌ಎ) ನಾಯಕರ ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳ ಆಡಳಿತದಲ್ಲಿ ಬದಲಾವಣೆ ತರಬೇಕೆಂಬ ಸ್ಪಷ್ಟ ಸಂದೇಶವನ್ನು ಈ ಮೂರು ದೇಶಗಳು ಇಡೀ ಜಗತ್ತಿಗೆ ರವಾನಿಸಬೇಕು' ಎಂದು ಹೇಳಿದರು.
- ಜಗತ್ತು ಛಿದ್ರವಾದಂತೆ ಮತ್ತು ವಿಭಜನೆಯಾಗಿರುವಂತೆ ಕಂಡುಬರುವ ಈ ಸಮಯದಲ್ಲಿ, ಐಬಿಎಸ್ ಎಯು ಒಗ್ಗಟ್ಟು, ಸಹಕಾರ ಮತ್ತು ಮಾನವೀಯತೆಯ ಸಂದೇಶವನ್ನು ನೀಡಬಲ್ಲದು ಎಂದರು.
- ಮೂರು ದೇಶಗಳ ನಡುವಿನ ಭದ್ರತಾ ಸಹಕಾರವನ್ನು ಇನ್ನಷ್ಟು ಬಲಪಡಿಸಲು ರಾಷ್ಟ್ರೀಯ ಭದ್ರತಾ ಸಲಹೆಗಾರರ ನಡುವಿನ ಸಭೆಗೆ ಸಾಂಸ್ಥಿಕ ರೂಪ ನೀಡಬೇಕು ಎಂಬ ಪ್ರಸ್ತಾವ ವನ್ನು ಪ್ರಧಾನಿ ಮುಂದಿಟ್ಟರು.
- 'ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ, ನಾವು ಪರಸ್ಪರ ಸಮನ್ವಯದಿಂದ ಮುಂದುವರಿಯಬೇಕು. ಇಂತಹ ಗಂಭೀರ ವಿಷಯದ ಬಗ್ಗೆ ದ್ವಂದ್ವ ನಿಲುವುಗಳಿಗೆ ಯಾವುದೇ ಅವಕಾಶವಿಲ್ಲ' ಎಂದು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಮತ್ತು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡ ಸಿಲ್ವಾ ಪಾಲ್ಗೊಂಡಿದ್ದ ಸಭೆಯಲ್ಲಿ ಮೋದಿ ಹೇಳಿದರು.
- ಮಾನವ ಕೇಂದ್ರಿತ ಅಭಿವೃದ್ಧಿಯನ್ನು ಖಾತರಿಪಡಿಸುವಲ್ಲಿ ತಂತ್ರಜ್ಞಾನ ನಿರ್ಣಾಯಕ ಪಾತ್ರ ವಹಿಸಲಿದೆ ಎಂಬುದನ್ನು ತಮ್ಮ ಭಾಷಣದಲ್ಲಿ ಒತ್ತಿ ಹೇಳಿದರು. ಯುಪಿಐನಂತಹ ಡಿಜಿಟಲ್ ಪಾವತಿ ವ್ಯವಸ್ಥೆ, ಕೋವಿನ್‌ನಂತಹ ಆರೋಗ್ಯ ಕ್ಷೇತ್ರಕ್ಕೆ ಸಂಬಂದಿಸಿದ ಇ–ವೇದಿಕೆ ಮತ್ತು ಸೈಬರ್ ಭದ್ರತೆಗೆ ಸಂಬಂಧಿಸಿದ ತಂತ್ರಜ್ಞಾನಗಳನ್ನು ಪರಸ್ಪರ ಹಂಚಿಕೊಳ್ಳಲು ಮೂರೂ ದೇಶಗಳು ಸೇರಿ 'ಐಬಿಎಸ್‌ಎ ಡಿಜಿಟಲ್ ಇನೊವೇಷನ್ ಅಲಯನ್ಸ್' ಸ್ಥಾಪಿಸುವ ಪ್ರಸ್ತಾಪವನ್ನು ಅವರು ಮಂಡಿಸಿದರು.
- ಐಬಿಎಸ್‌ಎ ಎಂಬುದು ಕೇವಲ ಮೂರು ದೇಶಗಳನ್ನು ಒಳಗೊಂಡ ಸಮೂಹ ಅಲ್ಲ. ಬದಲಾಗಿ ಮೂರು ಖಂಡಗಳು, ಮೂರು ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳು ಮತ್ತು ಮೂರು ಪ್ರಮುಖ ಆರ್ಥಿಕತೆಗಳು ಪರಸ್ಪರ ಸಂಪರ್ಕಿಸುವ ಪ್ರಮುಖ ವೇದಿಕೆಯಾಗಿದೆ. ಐಬಿಎಸ್‌ಎ, ಪರಸ್ಪರರ ಅಭಿವೃದ್ಧಿಗೆ ಪೂರಕ ವಾಗಬಹುದು ಮತ್ತು ಸುಸ್ಥಿರ ಬೆಳವಣಿಗೆಗೆ ಅತ್ಯುತ್ತಮ ಉದಾಹರಣೆಯಾಗಬಹುದು ಎಂದರು.
- ಮುಂದಿನ ವರ್ಷ ಭಾರತದಲ್ಲಿ ನಡೆಯಲಿರುವ 'ಎ.ಐ ಇಂಪ್ಯಾಕ್ಟ್' ಶೃಂಗಸಭೆಯಲ್ಲಿ ಪಾಲ್ಗೊಳ್ಳುವಂತೆ ಐಬಿಎಸ್‌ಎ ನಾಯಕರನ್ನು ಮೋದಿ ಅವರು ಆಹ್ವಾನಿಸಿದರು.

**<u>ಎ.ಐ: ಜಾಗತಿಕ ಒಪ್ಪಂದಕ್ಕೆ ಕರೆ</u>**

- ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ದುರುಪಯೋಗವನ್ನು ತಡೆಗಟ್ಟಲು ಜಾಗತಿಕ ಮಟ್ಟದ ಒಪ್ಪಂದಕ್ಕೆ ಪ್ರಧಾನಿ ಮೋದಿ ಅವರು ಕರೆ ನೀಡಿದ್ದು, 'ನಿರ್ಣಾಯಕ ತಂತ್ರಜ್ಞಾನಗಳು ಹಣಕಾಸು ಕೇಂದ್ರಿತವಾಗಿರದೆ ಮಾವನ ಕೇಂದ್ರಿತವಾಗಿರಬೇಕು' ಎಂದು ಪ್ರತಿಪಾದಿಸಿದರು.
- ಜಿ–20 ನಾಯಕರ ಶೃಂಗಸಭೆಯಲ್ಲಿ ಭಾನುವಾರ ಎ.ಐ ಮತ್ತು ವಿರಳ ಲೋಹಗಳ ಕುರಿತು ಮಾತನಾಡಿದ ಅವರು, 'ತಂತ್ರಜ್ಞಾನದ ಅಳವಡಿಕೆಯು ಕೆಲವೇ ರಾಷ್ಟ್ರಗಳಿಗೆ ಸೀಮಿತವಾಗಬಾರದು. ಅದು 'ಜಾಗತಿಕ' ವಾಗಿರಬೇಕು' ಎಂದರು.
- 'ಭಾರತದ ತಂತ್ರಜ್ಞಾನ ಕ್ಷೇತ್ರದಲ್ಲಿ ಇದೇ ನೀತಿಯನ್ನು ಸಂಯೋಜಿಸಲಾಗಿದ್ದು, ಇದರಿಂದ ಬಾಹ್ಯಾಕಾಶ ಕ್ಷೇತ್ರ, ಎ.ಐ ಅಥವಾ ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿ ಗಮನಾರ್ಹ ಪ್ರಯೋಜನಗಳಿಗೆ ಕಾರಣವಾಗಿದೆ' ಎಂದು ಹೇಳಿದರು.

- 'ಎ.ಐ ತಂತ್ರಜ್ಞಾನವು ಜಾಗತಿಕ ಒಳಿತಿಗಾಗಿ ಬಳಕೆಯಾಗುತ್ತಿದೆ ಮತ್ತು ಅದರ ದುರುಪಯೋಗವನ್ನು ತಡೆಯಲಾಗಿದೆ ಎಂಬುದನ್ನು ನಾವೆಲ್ಲರೂ ಖಚಿತಪಡಿಸಿಕೊಳ್ಳಬೇಕು. ಡೀಪ್‌ಫೇಕ್‌ಗಳು, ಅಪರಾಧ ಮತ್ತು ಭಯೋತ್ಪಾದಕ ಚಟುವಟಿಕೆಗಳಲ್ಲಿ ಎ.ಐ ಬಳಕೆಯ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ಹೇರಬೇಕು. ಇದಕ್ಕಾಗಿ ಎ.ಐ ತಂತ್ರಜ್ಞಾನದ ಪ್ರಮುಖ ಅಂಶಗಳಿಗೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಒಪ್ಪಂದ ಮಾಡಿಕೊಳ್ಳಬೇಕು' ಎಂದು ಒತ್ತಾಯಿಸಿದರು.

**<u>ರಾಮಫೋಸಾ ಜತೆ ಮಾತುಕತೆ</u>**

- ಪ್ರಧಾನಿ ನರೇಂದ್ರ ಮೋದಿ ಅವರು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.
- 'ಈ ವೇಳೆ ಇಬ್ಬರೂ ನಾಯಕರು ವ್ಯಾಪಾರ, ಹೂಡಿಕೆ, ಗಣಿಗಾರಿಕೆ, ವಿರಳ ಲೋಹಗಳು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಮತ್ತು ಆಹಾರ ಭದ್ರತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರದ ಕುರಿತು ಚರ್ಚಿಸಿದರು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.
- 'ಜಿ–20 ನಾಯಕರ ಶೃಂಗಸಭೆಯ ಅಧ್ಯಕ್ಷತೆ ವಹಿಸಿ ಯಶಸ್ವಿಯಾಗಿ ಆಯೋಜಿಸಿರುವುದಕ್ಕೆ ರಾಮಫೋಸಾ ಹಾಗೂ ದಕ್ಷಿಣ ಆಫ್ರಿಕಾವನ್ನು ಪ್ರಧಾನಿ ಅಭಿನಂದಿಸಿದರು' ಎಂದಿದ್ದಾರೆ.

## ❖ 'ಸುಪ್ರೀಂ'ನಿಂದ ಸಮತೋಲಿತ ತೀರ್ಪು': ಮಸೂದೆಗಳಿಗೆ ಅಂಕಿತ ಹಾಕುವ ವಿಚಾರ ಕುರಿತು ನಿರ್ಗಮಿತ ಸಿಜೆಐ ಪ್ರತಿಕ್ರಿಯೆ

**ಸಂದರ್ಭ: ಪ್ರಸ್ತುತ ದಿನಗಳಲ್ಲಿ ನ್ಯಾಯಮೂರ್ತಿಯೊಬ್ಬರು ಸರ್ಕಾರದ ವಿರುದ್ಧ ತೀರ್ಪು ನೀಡಿದಾಗ ಮಾತ್ರ ಅವರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನಲಾಗುತ್ತಿದೆ. ಇದು ಸರಿಯಲ್ಲ ಬಿ.ಆರ್.ಗವಾಯಿ ನಿರ್ಗಮಿತ ಸಿಜೆಐ.**

- 'ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರು ಅಂಕಿತ ಹಾಕಲು ಕಾಲಮಿತಿ ನಿಗದಿ ಮಾಡುವ ವಿಚಾರಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಸಮತೋಲಿತ ತೀರ್ಪು ನೀಡಿದೆ' ಎಂದು ನಿರ್ಗಮಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹೇಳಿದ್ದಾರೆ.
- 'ಮಸೂದೆಗಳಿಗೆ ಅಂಕಿತ ಹಾಕುವ ವಿಚಾರದಲ್ಲಿ ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರಿಗೆ ಕಾಲಮಿತಿಯನ್ನು ಸುಪ್ರೀಂ ಕೋರ್ಟ್ ನಿಗದಿ ಮಾಡಿಲ್ಲ. ಇದಕ್ಕೆ ಸಂವಿಧಾನವೂ ಅವಕಾಶ ನೀಡುವುದಿಲ್ಲ. ಅದೇ ರೀತಿ, ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕದೇ ಅನಿರ್ದಿಷ್ಟಾವಧಿ ವರೆಗೆ ಸುಮ್ಮನೆ ಕೂರುವಂತೆಯೂ ಇಲ್ಲ ಎಂಬುದನ್ನು ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ' ಎಂದು ಹೇಳಿದ್ದಾರೆ.
- 'ಸಂವಿಧಾನವು ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ವಿಭಜನೆ ಕುರಿತು ಹೇಳಿದೆ. ಆದರೆ, ಕಾಲಮಿತಿಯನ್ನು ಉಲ್ಲೇಖ ಮಾಡದ ಕಡೆಗಳಲ್ಲಿ, ಅದನ್ನು ಗುರುತಿಸಿ ಜಾರಿಗೊಳಿಸುವುದಕ್ಕೆ ಸಂವಿಧಾನ ಅವಕಾಶ ನೀಡಿಲ್ಲ' ಎಂದು ಅವರು ಹೇಳಿದ್ದಾರೆ.
- 'ರಾಜ್ಯಪಾಲರಿಗೆ ಗಡುವು ವಿಧಿಸುವ ಅವಕಾಶವನ್ನು ಸುಪ್ರೀಂ ಕೋರ್ಟ್ ದುರ್ಬಲಗೊಳಿಸಿದೆ ಎಂಬ ಟೀಕೆಗಳು ವ್ಯಕ್ತವಾಗಿವೆಯಲ್ಲ' ಎಂಬ ಪ್ರಶ್ನೆಗೆ, 'ಕಾಲಮಿತಿ ವಿಧಿಸುವುದಕ್ಕೆ ಸಂವಿಧಾನ ಅವಕಾಶ ನೀಡುವುದಿಲ್ಲ. ಆದರೆ, ರಾಜ್ಯಪಾಲರು ಅಂಕಿತ ಹಾಕುವ ವಿಚಾರದಲ್ಲಿ ಅನಿರ್ದಿಷ್ಟ ಅವಧಿಗೆ ಸುಮ್ಮನೆ ಕೂರುವಂತಿಲ್ಲ ಎಂದು ಹೇಳಿದ್ದೇವೆ. ವಿಪರೀತ ವಿಳಂಬ ಕಂಡುಬಂದ ಸಂದರ್ಭಗಳಲ್ಲಿ ನ್ಯಾಯಾಲಯವು ಪರಿಶೀಲನೆ ನಡೆಸುವುದಕ್ಕೆ ಅವಕಾಶ ಇದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ' ಎಂದು ಉತ್ತರಿಸಿದರು.

**ಕೊಲಿಜಿಯಂ ವ್ಯವಸ್ಥೆಯ ಸಮರ್ಥನೆ**

- ಉನ್ನತ ನ್ಯಾಯಾಲಯಗಳಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಕೊಲಿಜಿಯಂ ವ್ಯವಸ್ಥೆಯನ್ನು ಸುಪ್ರೀಂ ಕೋರ್ಟ್‌ನ ನಿರ್ಗಮಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಸಮರ್ಥಿಸಿಕೊಂಡಿದ್ದಾರೆ.
- ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನ್ಯಾಯಾಂಗವು ಸ್ವತಂತ್ರವಾಗಿ ಕಾರ್ಯ ನಿರ್ವಸುವುದಕ್ಕೆ ಕೊಲಿಜಿಯಂ ವ್ಯವಸ್ಥೆ ನೆರವಾಗುತ್ತದೆ' ಎಂದಿದ್ದಾರೆ.
- 'ಯಾವ ವ್ಯವಸ್ಥೆ ಕೂಡ ಪರಿಪೂರ್ಣವಲ್ಲ. ವಕೀಲರು ನ್ಯಾಯಮೂರ್ತಿಗಳ ಮುಂದೆ ವಾದ ಮಂಡಿಸುತ್ತಾರೆಯೇ ಹೊರತು, ಪ್ರಧಾನಿ ಅಥವಾ ಕಾನೂನು ಸಚಿವರ ಮುಂದೆ ಅಲ್ಲ. ಹೀಗಾಗಿ ನ್ಯಾಯಮೂರ್ತಿಗಳ ನೇಮಕಕ್ಕೆ ಕೊಲಿಜಿಯಂ ವ್ಯವಸ್ಥೆ ಅಗತ್ಯ' ಎಂದರು.
- 'ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಕಲ್ಪಿಸುವ ವೇಳೆ ಕೆನೆಪದರ ನೀತಿಯನ್ನು ಅನ್ವಯಿಸಬೇಕು' ಎಂದು ಪ್ರತಿಪಾದಿಸಿದ ಅವರು, 'ನನ್ನ ಅವಧಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಮಹಿಳಾ ನ್ಯಾಯಮೂರ್ತಿಗಳನ್ನು ನೇಮಕ ಮಾಡದೇ ಇರುವುದಕ್ಕೆ ವಿಷಾದ ಇದೆ' ಎಂದು ಹೇಳಿದರು.
- 'ನಿವೃತ್ತಿ ನಂತರ, ಸರ್ಕಾರ ನೀಡುವ ಯಾವುದೇ ಹುದ್ದೆಯನ್ನು ಸ್ವೀಕರಿಸುವುದಿಲ್ಲ ಎಂದು ಅಧಿಕಾರ ಸ್ವೀಕರಿಸಿದ ದಿನವೇ ನಾನು ಹೇಳಿದ್ದೆ. ಈಗ ನಿವೃತ್ತನಾಗಿರುವೆ. ಮುಂದಿನ 9–10 ದಿನಗಳ ವಿಶ್ರಾಂತಿ ಬಳಿಕ ಹೊಸ ಇನಿಂಗ್ಸ್ ಆರಂಭವಾಗುವುದು' ಎಂದರು.

## ❖ ಬಾಂಗ್ಲಾಕ್ಕೆ ಮರಳುತ್ತಿರುವ 'ಅಕ್ರಮ' ವಲಸಿಗರು

**ಸಂದರ್ಭ: ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಿ, ಇಲ್ಲಿ ಹಲವು ವರ್ಷ ತಂಗಿದ್ದ ಬಾಂಗ್ಲಾದೇಶದ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ದೇಶಕ್ಕೆ ವಾಪಸಾಗುತ್ತಿದ್ದಾರೆ.**

- ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಹಕೀಂಪುರದಲ್ಲಿ ಬಾಂಗ್ಲಾದ ಗಡಿಗೆ ಹೊಂದಿಕೊಂಡಿರುವ ಬಿಎಸ್‌ಎಫ್‌ನ ಗಡಿ ಭದ್ರತಾ ಠಾಣೆಯ ಬಳಿ 'ಅಕ್ರಮ' ವಲಸಿಗರ ಉದ್ದನೆಯ ಸಾಲು ಕಂಡುಬರುತ್ತಿದೆ.
- ಸಣ್ಣ ಬಟ್ಟೆ ಚೀಲಗಳನ್ನು ಹಿಡಿದುಕೊಂಡಿರುವ ಮಹಿಳೆಯರು ಮತ್ತು ಪುರುಷರು, ಕೈಯಲ್ಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಹಿಡಿದುಕೊಂಡಿರುವ ಮಕ್ಕಳು ಸರತಿ ಸಾಲಿನಲ್ಲಿ ಕಾಯುತ್ತಾ, ಬಿಎಸ್‌ಎಫ್ ಸಿಬ್ಬಂದಿಯಲ್ಲಿ, 'ನಮ್ಮನ್ನು ಮನೆಗೆ ತೆರಳಲು ಬಿಡಿ' ಎಂದು ಮನವಿ ಮಾಡುತ್ತಿದ್ದಾರೆ.
- ಬಂಗಾಳದ ದಕ್ಷಿಣ ಭಾಗದ ಗಡಿ ಪ್ರದೇಶಗಳಲ್ಲಿ ತಮ್ಮ ದೇಶಕ್ಕೆ ಮರಳಲು ಪ್ರಯತ್ನಿಸುತ್ತಿರುವ ಬಾಂಗ್ಲಾದ ಪ್ರಜೆಗಳ ಸಂಖ್ಯೆ ನವೆಂಬರ್ ಆರಂಭದಿಂದ ತೀವ್ರಗತಿಯಲ್ಲಿ ಏರಿಕೆಯಾಗಿದೆ ಎಂದು ಇಲ್ಲಿನ ಭದ್ರತಾ ಸಿಬ್ಬಂದಿ ಮತ್ತು ಸ್ಥಳೀಯ ನಿವಾಸಿಗಳು ಹೇಳುತ್ತಾರೆ.
- ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿ ರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್ ) ಪ್ರಕ್ರಿಯೆಗೂ ಈ ಬೆಳವಣಿಗೆಗೂ ಸಂಬಂಧವಿದೆ ಎಂಬುದು ಅಧಿಕಾರಿಗಳ ಹೇಳಿಕೆ. ಬಾಂಗ್ಲಾಕ್ಕೆ ವಾಪಸಾಗಲು ಗಡಿ ಭದ್ರತಾ ಠಾಣೆಯ ಬಳಿ ತನ್ನ ಮಗುವಿನೊಂದಿಗೆ ಕಾಯುತ್ತಿದ್ದ ಶಾಹಿನ್ ಬೀಬಿ, 'ನಾನು ಬಾಂಗ್ಲಾದ ಖುಲ್ನಾ ಜಿಲ್ಲೆಯ ನಿವಾಸಿಯಾಗಿದ್ದು, ಅಲ್ಲಿಗೆ ವಾಪಸಾಗಲು ಬಯಸಿದ್ದೇನೆ' ಎಂದರು.
- 'ನಾವು ಬಡವರಾಗಿದ್ದ ಕಾರಣ ಬಂದಿದ್ದೇವೆ. ಕೋಲ್ಕತ್ತದ ನ್ಯೂಟೌನ್‌ನಲ್ಲಿ ನೆಲಸಿ ಮನೆಕೆಲಸ ಮಾಡಿಕೊಂಡು ತಿಂಗಳಿಗೆ ₹20 ಸಾವಿರ ಸಂಪಾದಿಸುತ್ತಿದ್ದೆ. ನನ್ನ ಬಳಿ ಸೂಕ್ತ ದಾಖಲೆಗಳಿಲ್ಲ. ಆದ್ದರಿಂದ ಈಗ ಖುಲ್ನಾಗೆ ಹಿಂತಿರುಗಲು ಬಯಸುತ್ತೇನೆ' ಎಂದು ಹೇಳಿದರು.

- ಪಶ್ಚಿಮ ಬಂಗಾಳದಲ್ಲಿ ತಂಗಿದ್ದ ಅವಧಿಯಲ್ಲಿ ಮಧ್ಯವರ್ತಿಗಳ ಮೂಲಕ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಮತದಾರರ ಗುರುತಿನ ಚೀಟಿಗಳನ್ನು ಪಡೆದು ಕೊಂಡಿರುವುದಾಗಿ ಸರತಿ ಸಾಲಿನಲ್ಲಿ ನಿಂತಿದ್ದ ಹಲವರು ಒಪ್ಪಿಕೊಂಡಿ ದ್ದಾರೆ. ಎಸ್ಐಆರ್ ವೇಳೆ ಹಳೆಯ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ. ಆದ್ದರಿಂದ ವಿಚಾರಣೆ ಎದುರಿಸುವುದು, ಬಂಧನಕ್ಕೆ ಒಳಗಾಗುವುದನ್ನು ತಪ್ಪಿಸಲು ಸ್ವದೇಶಕ್ಕೆ ವಾಪಸಾಗಲು ಬಯಸುವುದಾಗಿ ಅವರು ಹೇಳುತ್ತಾರೆ.

## ❖ ಪ್ರಶಸ್ತಿ ಬರ ನೀಗಿಸಿದ ಲಕ್ಷ್ಯ ಸೇನ್

**ಸಂದರ್ಭ: ಜಪಾನ್‌ನ ಯುಶಿ ತನಾಕ ಅವರನ್ನು ಫೈನಲ್‌ನಲ್ಲಿ ನೇರ ಆಟಗಳಿಂದ ಸೋಲಿಸಿದ ಭಾರತದ ಲಕ್ಷ್ಯ ಸೇನ್ ಅವರು ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಆ ಮೂಲಕ ಈ ವರ್ಷ ಅವರು ಪ್ರಶಸ್ತಿ ಬರವನ್ನು ನೀಗಿಸಿಕೊಂಡರು.**

- ಉತ್ತರಾಖಂಡದ ಅಲ್ಮೋರಾದವ ರಾದ ಸೇನ್ 21–15, 21–11 ರಿಂದ 26 ವರ್ಷ ವಯಸ್ಸಿನ ತನಾಕ ಅವರನ್ನು ಹಿಮ್ಮೆಟ್ಟಿಸಿದರು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಲಕ್ಷ್ಯ ಸೇನ್ ನಂತರ ಪ್ರಶಸ್ತಿ ಬರ ಎದುರಿಸಿದ್ದರು.
- 38 ನಿಮಿಷಗಳ ಫೈನಲ್ ಗೆದ್ದ ನಂತರ, 24 ವರ್ಷ ವಯಸ್ಸಿನ ಆಟಗಾರ ಬೆರಳುಗಳಿಂದ ಕಿವಿಯನ್ನು ಮುಚ್ಚಿ ಸಂಭ್ರಮ ಆಚರಿಸಿದರು.
- 14ನೇ ಕ್ರಮಾಂಕದ ಲಕ್ಷ್ಯ, ಪಂದ್ಯದ ಹೆಚ್ಚಿನ ಅವಧಿಯಲ್ಲಿ ಹೊಡೆತಗಳಲ್ಲಿ ನಿಯಂತ್ರಣ ಸಾಧಿಸಿದರು. ಅವರ ಪ್ಲೇಸ್‌ಮೆಂಟ್‌ಗಳು ಕರಾರುವಾಕ್ ಆಗಿದ್ದು, ಒಂದೂ ಗೇಮ್ ಬಿಟ್ಟುಕೊಡಲಿಲ್ಲ.
- 'ಈ ಋತುವಿನಲ್ಲಿ ಸಾಕಷ್ಟು ಏಳು ಬೀಳುಗಳನ್ನು ಕಂಡಿದ್ದೆ. ವರುಷದ ಆರಂಭದಲ್ಲಿ ಗಾಯದ ಸಮಸ್ಯೆಗಳೂ ಎದುರಾದವು. ಆದರೆ ನಾನು ಪರಿಶ್ರಮ ಹಾಕಿದೆ. ಪ್ರಶಸ್ತಿಯೊಡನೆ ವರ್ಷ ಮುಗಿಸುತ್ತಿರುವುದು ಸಂತಸ ಮೂಡಿಸಿದೆ' ಎಂದು ₹4.25 ಕೋಟಿ ಬಹುಮಾನ ಮೊತ್ತದ ಟೂರ್ನಿ ಗೆದ್ದ ನಂತರ ಸೇನ್ ಪ್ರತಿಕ್ರಿಯಿಸಿದರು.
- 'ಈ ಯಶಸ್ಸಿನಿಂದ ರೋಮಾಂಚನ ವಾಗಿದ್ದು, ಮುಂದಿನ ಋತು ಎದುರು ನೋಡುತ್ತಿದ್ದೇನೆ. ಇಂದು ಮತ್ತು ಈ ವಾರ ಆಡಿದ ರೀತಿಯಿಂದ ಖುಷಿಯಾಗಿದೆ' ಎಂದೂ ಹೇಳಿದರು.
- 2021ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತರಾದ ಸೇನ್, ಈ ಹಿಂದೆ 2024ರ ಸೈಯದ್ ಮೋದಿ ಅಂತರರಾಷ್ಟ್ರೀಯ ಟೂರ್ನಿಯಲ್ಲಿ (ಸೂಪರ್ 300 ಮಟ್ಟದ್ದು) ಕೊನೆಯ ಸಲ ಪ್ರಶಸ್ತಿ ಗೆದ್ದಿದ್ದರು. ಸೆಪ್ಟೆಂಬರ್‌ನಲ್ಲಿ ಅವರು ಹಾಂಗ್‌ಕಾಂಗ್ ಸೂಪರ್ 500 ಟೂರ್ನಿಯಲ್ಲಿ ಫೈನಲ್ ತಲುಪಿದ್ದರೂ, ಪ್ರಶಸ್ತಿ ಎಟುಕಿರಲಿಲ್ಲ.
- ವಿಶ್ವ ಕ್ರಮಾಂಕದಲ್ಲಿ 26ನೇ ಸ್ಥಾನದಲ್ಲಿರುವ ತನಾಕ ಈ ವರ್ಷ ಎರಡು ಸೂಪರ್ 300 ಮಟ್ಟದ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದ್ದರು.
- ಲಕ್ಷ್ಯ ಅವರು ಈ ವರ್ಷ ಬಿಡಬ್ಲ್ಯುಎಫ್ ಟೂರ್‌ನಲ್ಲಿ ಪ್ರಶಸ್ತಿ ಗೆದ್ದ ಎರಡನೇ ಆಟಗಾರ ಎನಿಸಿದರು. ಕನ್ನಡಿಗ ಆಯುಷ್ ಶೆಟ್ಟಿ ಈ ವರ್ಷದ ಆರಂಭದಲ್ಲಿ ಅಮೆರಿಕ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದರು.

## ❖ ಹೊರಗುತ್ತಿಗೆ ನಿಷೇಧಕ್ಕೆ ಕಾಯ್ದೆ: ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಮಂಡನೆ ಸಂಭವ

**ಸಂದರ್ಭ: ಹೊರಗುತ್ತಿಗೆ ವ್ಯವಸ್ಥೆ ಸಂವಿಧಾನದ ಉಲ್ಲಂಘನೆ. ಹೀಗಾಗಿ, ಹಂತ ಹಂತವಾಗಿ ಹೊರಗುತ್ತಿಗೆ ನೌಕರರ ಸೇವಾ ಭದ್ರತೆಗೆ ಕ್ರಮ ಕೈಗೊಳ್ಳಲಾಗುವುದು.**

- ವಿವಿಧ ಇಲಾಖೆಗಳಲ್ಲಿರುವ ಹೊರಗುತ್ತಿಗೆ ನೇಮಕಾತಿ ವ್ಯವಸ್ಥೆಯನ್ನು 2028ರ ಮಾರ್ಚ್ 31ರ ಒಳಗೆ ಸಂಪೂರ್ಣವಾಗಿ ರದ್ದುಗೊಳಿಸುವ ಉದ್ದೇಶದಿಂದ **'ಸರ್ಕಾರಿ ಸಂಸ್ಥೆಗಳಲ್ಲಿ ಖಾಸಗಿ ಹೊರಗುತ್ತಿಗೆ ನಿಷೇಧ ಮಸೂದೆ– 2025'** ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.
- ಹೊಸ ಕಾಯ್ದೆ ಜಾರಿಯಾದ ಬಳಿಕ, ನಿಯಮ ಉಲ್ಲಂಘಿಸಿ ಹೊರಗುತ್ತಿಗೆಯಡಿ ನೇಮಕಾತಿ ಮಾಡಿದರೆ ಅಥವಾ ನಿಗದಿತ ಅವಧಿಯನ್ನು ಮೀರಿ ಹೊರಗುತ್ತಿಗೆ ಒಪ್ಪಂದ ಮುಂದುವರಿಸಿದರೆ, ಅಂಥ ವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹5 ಲಕ್ಷ ದಂಡ ವಿಧಿಸಲು ಕೂಡಾ ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
- ಮಸೂದೆಯ ಕರಡು ಸಿದ್ಧವಾಗಿದೆ. ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಈ ಮಸೂದೆ ಮಂಡನೆಯಾಗುವ ಸಾಧ್ಯತೆಯಿದೆ.
- ಸರ್ಕಾರದ ವಿವಿಧ ಇಲಾಖೆಗಳು, ಸಾರ್ವಜನಿಕ ವಲಯದ ನಿಗಮಗಳು, ಮಂಡಳಿಗಳು, ಉದ್ದಿಮೆಗಳು, ಪ್ರಾಧಿಕಾರಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಹಾಗೂ ಕಂಪನಿ ಗಳಲ್ಲಿ ಮಂಜೂರಾಗಿರುವ ಮೂರು ಲಕ್ಷಕ್ಕೂ ಹೆಚ್ಚು ಹುದ್ದೆಗಳನ್ನು ಖಾಸಗಿ ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ಮತ್ತು ಇತರ ವಿಧಾನಗಳ ಮುಖಾಂತರ ಭರ್ತಿ ಮಾಡಲಾಗಿದೆ.
- ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ದಿನದಿಂದ ಈ ರೀತಿಯ ಹೊರಗುತ್ತಿಗೆ ಆಧಾರದಲ್ಲಿ ನಡೆಯುವ ಎಲ್ಲ ನೇಮಕಾತಿಗಳು ಸಂಪೂರ್ಣವಾಗಿ ಸ್ಥಗಿತಗೊಳ್ಳಲಿವೆ.
- ಹೊರಗುತ್ತಿಗೆ ನಿಷೇಧ ಕಾಯ್ದೆ ಅನುಷ್ಠಾನಕ್ಕೆ ಬಂದ ನಂತರ ಕೆಪಿಎಸ್‌ಸಿ ಅಥವಾ ಯಾವುದೇ ನೇಮಕಾತಿ ಪ್ರಾಧಿಕಾರವು ವಿವಿಧ ಇಲಾಖೆಗಳಲ್ಲಿನ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನಡೆಸುವ ಎಲ್ಲ ನೇರ ನೇಮಕಾತಿಗಳಲ್ಲಿ, ಹೊರ ಗುತ್ತಿಗೆ ವ್ಯವಸ್ಥೆಯಡಿ ಕೆಲಸ ಮಾಡಿದವರಿಗೆ ಕೃಪಾಂಕ ನೀಡಿ ಮತ್ತು ವಯೋಮಿತಿ ಸಡಿಲಿಸಿ ಅನುಕೂಲ ಮಾಡಿಕೊಡುವ ಪ್ರಸ್ತಾವವೂ ಈ ಮಸೂದೆಯಲ್ಲಿದೆ.
- ಖಾಸಗಿ ಹೊರಗುತ್ತಿಗೆ ಸಂಸ್ಥೆಗಳು, ಗುತ್ತಿಗೆದಾರರು ಅಥವಾ ಯಾವುದೇ ಮೂರನೇ ವ್ಯಕ್ತಿಯ ಮಧ್ಯವರ್ತಿಗಳ ಮೂಲಕ ರಾಜ್ಯ ಸರ್ಕಾರದ ವ್ಯಾಪ್ತಿ ಅಥವಾ ನಿಯಂತ್ರಣ ದಲ್ಲಿರುವ ಇಲಾಖೆಗಳು ಮತ್ತು ಸಂಸ್ಥೆಗಳು ನೇಮಕಾತಿ ಮಾಡಿಕೊಂಡು ಮಾನವ ಸಂಪನ್ಮೂಲ ತೊಡಗಿಸಿಕೊಳ್ಳು ವುದನ್ನು ನಿಷೇಧಿಸಲು ಈ ಮಸೂದೆ ತರಲಾಗುತ್ತಿದೆ. ಅಲ್ಲದೆ, ಈ ರೀತಿ ನೇಮಿಸಿಕೊಂಡು ನಡೆಸುವ ಎಲ್ಲ ರೀತಿಯ ಶೋಷಣೆ ಮತ್ತು ಅಮಾನ ವೀಯ ಪದ್ಧತಿಗಳನ್ನು ಕಾನೂನುಬಾಹಿರ ವೆಂದು ಘೋಷಿಸುವುದು ಕೂಡಾ ಮಸೂದೆಯ ಉದ್ದೇಶಗಳಲ್ಲಿ ಒಂದಾಗಿದೆ.
- ಹೊರಗುತ್ತಿಗೆ ನೌಕರರ ಸೇವಾ ಭದ್ರತೆ ಕುರಿತು ಚರ್ಚಿಸಿ, ಶಿಫಾರಸು ಮಾಡಲು ಕಾನೂನು ಸಚಿವ ಎಚ್.ಕೆ. ಪಾಟೀಲ ನೇತೃತ್ವದಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು ಸರ್ಕಾರ ರಚಿಸಿತ್ತು. ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸುವ ಬಗ್ಗೆ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ಇದೇ ಆಗಸ್ಟ್ 19ರಂದು ನೀಡಿದ್ದ ತೀರ್ಪಿನಲ್ಲಿದ್ದ ಕೆಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಮಸೂದೆಗೆ ರೂಪು ನೀಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ಇಲಾಖೆಯ ಮೂಲಗಳು ತಿಳಿಸಿವೆ.

### ಮಸೂದೆಯಲ್ಲಿ ಏನಿದೆ?

- ಅಸ್ತಿತ್ವದಲ್ಲಿರುವ ಎಲ್ಲ ಖಾಸಗಿ ಹೊರಗುತ್ತಿಗೆ ಒಪ್ಪಂದಗಳನ್ನು ಹಂತ ಹಂತವಾಗಿ ಕೊನೆಗೊಳಿಸಬೇಕು. 2028ರ ಮಾರ್ಚ್ 31ರ ಒಳಗೆ ಹೊರಗುತ್ತಿಗೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ರದ್ದುಗೊಳಿಸುವವರೆಗೆ 'ಬೀದರ್ ಮಾದರಿ' ಯಲ್ಲಿ ಜಿಲ್ಲಾಮಟ್ಟದಲ್ಲಿ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘಗಳ ಮೂಲಕ ಗುತ್ತಿಗೆ ವ್ಯವಸ್ಥೆಯನ್ನು ಮುಂದುವರಿಸಬಹುದು.

- ಅಲ್ಲದೆ, ಹಾಲಿ ಇರುವ ಹೊರಗುತ್ತಿಗೆ ನೌಕರರನ್ನು ಮುಂದುವರಿಸಲು ಕೂಡಾ ಅವಕಾಶ ನೀಡಲಾಗುವುದು. ಜೊತೆಗೆ, ಈ ರೀತಿ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಮೀಸಲಾತಿ ನಿಯಮ ಪಾಲಿಸಲು ಮತ್ತು ಹೀಗೆ ನೇಮಕ ಗೊಂಡವರಿಗೆ ಕಾನೂನು ಪ್ರಕಾರ ಸಿಗಬೇಕಾದ ಎಲ್ಲ ಸವಲತ್ತುಗಳು ಕಡ್ಡಾಯವಾಗಿ ಸಿಗುವಂತೆ ಮಾಡುವ ಪ್ರಸ್ತಾವ ಈ ಮಸೂದೆಯಲ್ಲಿದೆ.
- 'ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಂವಿಧಾನದ ವಿಧಿ 15 ಮತ್ತು 16ರ ಆಶಯಗಳು ಉಲ್ಲಂಘನೆ ಆಗದಂತೆ ಭರ್ತಿ ಮಾಡಬೇಕಿದೆ.
- ಸದ್ಯ ಹೊರಗುತ್ತಿಗೆ, ಒಳಗುತ್ತಿಗೆ, ದಿನಗೂಲಿ ಹಾಗೂ ಇತರೆ ವ್ಯವಸ್ಥೆಗಳ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡು ವುದರಿಂದ ಪ್ರತಿಭಾನ್ವಿತ, ಅರ್ಹ ಅಭ್ಯರ್ಥಿಗಳು ಹುದ್ದೆ ವಂಚಿತರಾಗುತ್ತಿದ್ದಾರೆ. ಜೊತೆಗೆ, ಸಂವಿಧಾನದ ಆಶಯಗಳ ಉಲ್ಲಂಘನೆಯೂ ಆಗುತ್ತಿದೆ.
- ಹೀಗಾಗಿ, ಹೊರಗುತ್ತಿಗೆ ನೌಕರರ ಸೇವೆಯನ್ನು ಖಾಸಗಿ, ಸರ್ಕಾರೇತರ ಸಂಸ್ಥೆಗಳಿಂದ (ಎನ್‌ಜಿಒ) ಪಡೆಯುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ಬಂಧಿಸುವ ಅಗತ್ಯವಿದೆ ಎಂದು ಎಚ್.ಕೆ. ಪಾಟೀಲ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ಶಿಫಾರಸು ಮಾಡಿದೆ' ಎಂದೂ ಮೂಲಗಳು ಹೇಳಿವೆ.

## ❖ ಬಾಲಿವುಡ್ 'ಹೀ ಮ್ಯಾನ್' ಇನ್ನಿಲ್ಲ: 1935–2025

**ಸಂದರ್ಭ: ಹಿಂದಿ ಚಿತ್ರರಂಗದ ಜನಪ್ರಿಯ ನಟ, 'ಹೀ ಮ್ಯಾನ್' ಎಂದೇ ಖ್ಯಾತಿಯಾಗಿದ್ದ ಧರ್ಮೇಂದ್ರ (89) ದೀರ್ಘ ಕಾಲದ ಅಸ್ವಸ್ಥತೆಯ ನಂತರ ನಿಧನರಾದರು.**

- ಆರು ದಶಕಗಳಲ್ಲಿ 250ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದ ಅವರು ಸಾಹಸಪ್ರಧಾನ ಚಿತ್ರಗಳಿಂದ ಜನಮನ ಗೆದ್ದಿದ್ದರು.
- ಪಂಜಾಬ್‌ನಲ್ಲಿ 1935ರಲ್ಲಿ ಜನಿಸಿದ್ದ ಅವರು, ಬಿಜೆಪಿಯಿಂದ ಸ್ಪರ್ಧಿಸಿ ಚುನಾವಣೆಯಲ್ಲಿ ಗೆದ್ದು, ಬೀಕಾನೇರ್‌ನ ಸಂಸದರಾಗಿಯೂ ಕಾರ್ಯನಿರ್ವಹಿಸಿದ್ದರು.
- 'ದಿಲ್ ಭಿ ತೇರಾ ಹಮ್ ಭಿ ತೇರೆ' ಸಿನಿಮಾ ಮೂಲಕ ಅಭಿನಯ ಲೋಕಕ್ಕೆ ಕಾಲಿಟ್ಟ ಅವರು, ನೂತನ್, ಮೀನಾ ಕುಮಾರಿ, ಶರ್ಮಿಳಾ ಟ್ಯಾಗೋರ್ ಅವರಂತಹ ನುರಿತ ನಟಿಯರೊಂದಿಗೆ ತೆರೆ ಹಂಚಿಕೊಂಡರು. ಹೇಮಾ ಮಾಲಿನಿ ಹಾಗೂ ಧರ್ಮೇಂದ್ರ ಜೋಡಿ ಅತಿ ಹೆಚ್ಚು ಜನಪ್ರಿಯವಾಗಿತ್ತು. ಮೊದಲೇ ವಿವಾಹ ಬಂಧನದಲ್ಲಿದ್ದರೂ ಅವರು ಆನಂತರ ಹೇಮಾ ಅವರನ್ನು ಮದುವೆಯಾದರು.
- 'ಬಂದಿನಿ', 'ಅನುಪಮಾ', 'ಚುಪ್ಕೆ ಚುಪ್ಕೆ', 'ಶೋಲೆ', 'ಸೀತಾ ಔರ್ ಗೀತಾ' ಅವರ ಜನಪ್ರಿಯ ಸಿನಿಮಾಗಳ ಸಾಲಿನಲ್ಲಿವೆ. ತಮ್ಮ ಮಕ್ಕಳೊಟ್ಟಿಗೆ 'ಯಮ್ಲಾ ಪಗ್ಲಾ ದೀವಾನಾ' ಎಂಬ ಸರಣಿ ಸಿನಿಮಾಗಳಲ್ಲಿಯೂ ಅವರು ನಟಿಸಿದರು.
- ನಿರ್ಮಾಣ ಸಂಸ್ಥೆಯನ್ನೂ ಕಟ್ಟಿದ್ದ ಅವರಿಗೆ **ಪದ್ಮಭೂಷಣ ಪ್ರಶಸ್ತಿಯೂ ಸಂದಿತ್ತು**. ಅವರ ಪುತ್ರರಾದ ಸನ್ನಿ ಡಿಯೋಲ್ ಹಾಗೂ ಬಾಬಿ ಡಿಯೋಲ್ ಅವರನ್ನು ನಾಯಕರಾಗಿ ಪರಿಚಯಿಸಿದ್ದು ಇದೇ ಸಂಸ್ಥೆಯ ಮೂಲಕ. ಅವರ ಅಭಿನಯದ **ಕೊನೆಯ ಸಿನಿಮಾ 'ಇಕ್ಕೀಸ್'** ಮುಂದಿನ ತಿಂಗಳು ತೆರೆಕಾಣಲಿದೆ.




- ಕಳೆದ ಕೆಲವು ದಿನಗಳಲ್ಲಿ ಅವರು ಪದೇಪದೇ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದರು. ಪವನ್ ಹನ್ಸ್ ಚಿತಾಗಾರದಲ್ಲಿ ಅವರ ಅಂತಿಮ ಸಂಸ್ಕಾರ ನೆರವೇರಿತು.

## ❖ ಐಸಿಡಿಎಸ್ ಪ್ರಚಾರ: ₹1 ಸಾವಿರ ಹೊರೆ

**ಸಂದರ್ಭ: ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಸುವರ್ಣ ಮಹೋತ್ಸವ ಕಾರ್ಯಕ್ರಮದ ಪ್ರಚಾರಕ್ಕೆ ಬ್ಯಾನರ್ ಅಳವಡಿಸಲು ಅಂಗನವಾಡಿಗಳ ನಿರ್ವಹಣೆ ವೆಚ್ಚದಿಂದ ₹1 ಸಾವಿರ ಭರಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ಇಲಾಖೆಯ ಈ ನಡೆಗೆ ಅಂಗನವಾಡಿ ಕಾರ್ಯಕರ್ತೆಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.**

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅಧ್ಯಕ್ಷತೆಯಲ್ಲಿ. ಅ.28ರಂದು ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. 'ಐಸಿಡಿಎಸ್ ಯೋಜನೆಯ ಸುವರ್ಣ ಮಹೋತ್ಸವದ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಬೇಕು. ಇದಕ್ಕಾಗಿ ರಾಜ್ಯದಲ್ಲಿರುವ 69,922 ಅಂಗನವಾಡಿ ಕೇಂದ್ರಗಳಲ್ಲಿ ಬ್ಯಾನರ್ ಅಳವಡಿಸಿ, ಪ್ರಚಾರ ಮಾಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.
- 'ಅಂಗನವಾಡಿ ಕೇಂದ್ರಗಳಿಗೆ ಈಗಾಗಲೇ ಕಟ್ಟಡಗಳ ನಿರ್ವಹಣಾ ವೆಚ್ಚದ ಅನುದಾನ ನೀಡಲಾಗಿದೆ. ಇದರಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಲ್ಲಿ ₹ 1 ಸಾವಿರ ಬಾಕಿ ಉಳಿದಿದೆ? ಎಷ್ಟು ಅಂಗನವಾಡಿ ಕೇಂದ್ರಗಳಲ್ಲಿ ಅನುದಾನ ಇಲ್ಲ? ಅನುದಾನ ಬಾಕಿ ಉಳಿದಿಲ್ಲ ಎಂದಾದರೆ ಯಾವುದಕ್ಕೆ ಖರ್ಚು ಮಾಡಲಾಗಿದೆ ಎಂಬ ಮಾಹಿತಿಯನ್ನು ತಕ್ಷಣ ನೀಡಬೇಕು' ಎಂದು ಅಂಗನವಾಡಿ ಕಾರ್ಯಕರ್ತೆಯರಿಗೆ ಇಲಾಖೆ ಸೂಚಿಸಿದೆ.
- 'ರಾಜ್ಯದಾದ್ಯಂತ ಏಕರೂಪ ಮಾದರಿ ಅನುಸರಿಸುವ ಉದ್ದೇಶದಿಂದ 6 ಅಡಿ ಅಗಲ, 4 ಅಡಿ ಎತ್ತರದ ಬ್ಯಾನರ್ ಮುದ್ರಿಸಿ ಸರಬರಾಜು ಮಾಡಲು ದರ ಪಟ್ಟಿ ಆಹ್ವಾನಿಸ ಲಾಗಿತ್ತು. ಇದರಲ್ಲಿ ಝೇಂಕಾರ್ ಅಡ್ವಟೈರ್ಸಿಂಗ್ ಸಂಸ್ಥೆಯು ಕನಿಷ್ಠ ₹996 ದರ ನಿಗದಿಪಡಿಸಿದೆ. ಅಂಗನ ವಾಡಿಗಳಿಗೆ 2023–24 ಹಾಗೂ 2024–25ನೇ ಸಾಲಿನ ನಿರ್ವಹಣಾ ವೆಚ್ಚವಾಗಿ ಇಲಾಖೆಯು ತಲಾ ₹3 ಸಾವಿರ ಅನುದಾನ ನೀಡಿತ್ತು' ಎಂದು ಆದೇಶದಲ್ಲಿ ಹೇಳಲಾಗಿದೆ.

## ❖ ನ್ಯಾ.ಸೂರ್ಯ ಕಾಂತ್ ಪ್ರಮಾಣ: 'ಸುಪ್ರೀಂ'ನ 53ನೇ ಮುಖ್ಯ ನ್ಯಾಯಮೂರ್ತಿ ರಾಷ್ಟ್ರಪತಿಯಿಂದ ಪ್ರಮಾಣ ಬೋಧನೆ

**ಸಂದರ್ಭ: ನಮ್ಮ ನ್ಯಾಯಾಂಗ ವ್ಯವಸ್ಥೆಯು ನಿರ್ಣಾಯಕ ಘಟ್ಟ ತಲುಪಿರುವಾಗ ನ್ಯಾ. ಸೂರ್ಯ ಕಾಂತ್ ಅವರು 14 ತಿಂಗಳವರೆಗಿನ ತಮ್ಮ ಅಧಿಕಾರಾವಧಿಯನ್ನು ಆರಂಭಿಸುತ್ತಿದ್ದಾರೆ.**

- ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸುಪ್ರೀಂ ಕೋರ್ಟ್‌ನ 53ನೇ ಮುಖ್ಯ ನ್ಯಾಯ ಮೂರ್ತಿಯಾಗಿ (ಸಿಜೆಐ) ಪ್ರಮಾಣ ವಚನ ಸ್ವೀಕರಿಸಿದರು. 2027ರ ಫೆಬ್ರುವರಿ 9ರವರೆಗೆ ಇವರು ಸಿಜೆಐ ಆಗಿ ಮುಂದುವರಿಯಲಿದ್ದಾರೆ.
- ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾ. ಸೂರ್ಯ ಕಾಂತ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಇವರು **ದೇವರ ಹೆಸರಿನಲ್ಲಿ ಹಿಂದಿ ಭಾಷೆಯಲ್ಲಿ ಪ್ರಮಾಣ ಸ್ವೀಕರಿಸಿದರು.**
- ಕೊಲಿಜಿಯಂ ಮುಖ್ಯಸ್ಥ: ನ್ಯಾ. ಗವಾಯಿ ಅವರ ಬಳಿಕ ಐವರು ನ್ಯಾಯಮೂರ್ತಿಗಳ ಕೊಲಿಜಿಯಂಗೆ ಈಗ ಸಿಜೆಐ ಸೂರ್ಯ ಕಾಂತ್ ಅವರು ಮುಖ್ಯಸ್ಥರಾಗಿದ್ದಾರೆ. ಕೊಲಿಜಿಯಂನಲ್ಲಿ ಸದ್ಯ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಬಿ.ವಿ. ನಾಗರತ್ನ, ಜೆ.ಕೆ. ಮಾಹೇಶ್ವರಿ ಮತ್ತು ಎಂ.ಎಂ ಸುಂದರೇಶ್ ಇದ್ದಾರೆ.



## ❖ ನೌಕಾಪಡೆಗೆ 'ಮಾಹೆ' ಸೇರ್ಪಡೆ

**ಸಂದರ್ಭ: ದೇಶಿ ನಿರ್ಮಿತ ಜಲಾಂತರ್ಗಾಮಿ ನಿಗ್ರಹ ಯುದ್ಧನೌಕೆ 'ಐಎನ್‌ಎಸ್ ಮಾಹೆ'ಯು ಭಾರತೀಯ ನೌಕಾಪಡೆಗೆ ಸೇರ್ಪಡೆಗೊಂಡಿತು.**

- ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಹೊಸ ತಲೆಮಾರಿನ ದೇಶೀಯ ಯುದ್ಧ ನೌಕೆಯನ್ನು ನೌಕಾಪಡೆಗೆ ಸೇರ್ಪಡೆ ಮಾಡಿದರು.
- 'ಮಾಹೆ'ಯನ್ನು ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ (ಸಿಎಸ್‌ಎಲ್) ನಿರ್ಮಿಸಿದ್ದು, ನೌಕೆಯ ವಿನ್ಯಾಸ ಹಾಗೂ ನಿರ್ಮಾಣವು ಆತ್ಮನಿರ್ಭರ ಭಾರತ ಉಪಕ್ರಮವನ್ನು ಪ್ರತಿನಿಧಿಸುತ್ತದೆ.
- ಕರಾರುವಾಕ್ಕಾದ ಗುರಿ ಮತ್ತು ಚುರುಕುತನದ ಮೂಲಕ ದೇಶದ ಕರಾವಳಿಯಲ್ಲಿ ಪ್ರಾಬಲ್ಯ ಸಾಧಿಸಲು ಬೇಕಾದ ಸಾಮರ್ಥ್ಯವನ್ನು ಮಾಹೆ ಯುದ್ಧ ನೌಕೆ ಹೊಂದಿದೆ. ರಹಸ್ಯ ಕಾರ್ಯಾಚರಣೆ, ಕರಾವಳಿ ಗಸ್ತು, ಜಲಾಂತರ್ಗಾಮಿ ನೌಕೆಗಳ ನಿಗ್ರಹ ಸಾಮರ್ಥ್ಯವನ್ನು ಇದು ಹೊಂದಿದೆ ಎಂದು ನೌಕಾಪಡೆಯು ತಿಳಿಸಿದೆ.

**ವೈಶಿಷ್ಟ್ಯವೇನು?**

- ಟಾರ್ಪೆಡೊ (ಜಲ ಕ್ಷಿಪಣಿ), ಜಲಾಂತರ್ಗಾಮಿ ನಿಗ್ರಹ ರಾಕೆಟ್‌ಗಳನ್ನು ಒಳಗೊಂಡಿರಲಿದೆ
- ನೌಕೆ ನಿರ್ಮಾಣಕ್ಕೆ ಶೇಕಡ 80ರಷ್ಟು ದೇಶೀಯ ವಸ್ತುಗಳ ಬಳಕೆ
- ಮಾಹೆ ಶ್ರೇಣಿಯ ಮೊದಲ ಜಲಾಂತರ್ಗಾಮಿ ನಿಗ್ರಹ ನೌಕೆ
- ನೌಕೆಗೆ ಮಲಬಾರಿನ ಐತಿಹಾಸಿಕ ಕರಾವಳಿ ನಗರ 'ಮಾಹೆ'ಯ ಹೆಸರನ್ನು ಇಡಲಾಗಿದೆ
- ನೌಕೆಯ ಲಾಂಛನದಲ್ಲಿ ಕಳರಿಪಯಟ್ಟು ಯುದ್ಧ ಕಲೆಯಲ್ಲಿ ಬಳಸುವ ಕತ್ತಿ (ಉರುಮಿ) ಚಿಹ್ನೆ ಬಳಕೆ. ಚುರುಕುತನ, ನಿಖರತೆ, ಕರಾರುವಕ್ಕಾದ ಗುರಿಯ ಸಂಕೇತವಾಗಿ ಬಳಕೆ

## ❖ ಕೇಂದ್ರದ ಪ್ರತಿಕ್ರಿಯೆ ಕೋರಿದ 'ಸುಪ್ರೀಂ': ರಾಜಕೀಯ ಪಕ್ಷಗಳು ನಗದು ರೂಪದಲ್ಲಿ ಪಡೆದ ದೇಣಿಗೆಗೆ ಸಂಬಂಧಿಸಿದ ಅರ್ಜಿ.

**ಸಂದರ್ಭ: ರಾಜಕೀಯ ಪಕ್ಷಗಳು 'ಅನಾಮಧೇಯ' ಮೂಲಗಳಿಂದ ₹2,000ಕ್ಕಿಂತ ಕಡಿಮೆ ನಗದು ದೇಣಿಗೆ ಸ್ವೀಕರಿಸಲು ಅನುಮತಿಸುವ ಆದಾಯ ತೆರಿಗೆ ಕಾಯ್ದೆಯ ನಿಬಂಧನೆಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿ ರುವ ಅರ್ಜಿಯ ಕುರಿತು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ ಮತ್ತು ಇತರರ ಪ್ರತಿಕ್ರಿಯೆ ಕೋರಿದೆ.**

- 'ದೇಣಿಗೆಯ ಮೂಲವನ್ನು ಬಹಿರಂಗಪಡಿಸದೇ ಇರುವುದರಿಂದ ಮತದಾರರಿಗೆ ರಾಜಕೀಯ ಪಕ್ಷಗಳ ಬಳಿಯಿರುವ ನಿಧಿಯ ಮೂಲದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈ ಪಾರದರ್ಶಕತೆಯ ಕೊರತೆಯು ಚುನಾವಣಾ ಪ್ರಕ್ರಿಯೆಯ ಪರಿಶುದ್ಧತೆಯನ್ನು ಹಾಳು ಮಾಡುತ್ತದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.
- ನ್ಯಾಯಮೂರ್ತಿಗಳಾದ ವಿಕ್ರಮ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು, ಅರ್ಜಿಯನ್ನು ನಾಲ್ಕು ವಾರಗಳ ಬಳಿಕ ವಿಚಾರಣೆಗೆ ಪಟ್ಟಿ ಮಾಡುವುದಾಗಿ ತಿಳಿಸಿತು.
- 'ನೀವು ಆರಂಭದಲ್ಲಿ ಹೈಕೋರ್ಟ್‌ಗೆ ಏಕೆ ಅರ್ಜಿ ಸಲ್ಲಿಸಲಿಲ್ಲ' ಎಂದು ಅರ್ಜಿದಾರರಾದ ಖೇಮ್ ಸಿಂಗ್ ಭಾಟಿ ಮತ್ತು ಸ್ನೇಹಾ ಕಲಿತಾ ಅವರ ಪರ ಹಾಜರಾದ ಹಿರಿಯ ವಕೀಲ ವಿಜಯ್ ಹಂಸಾರಿಯಾ ಅವರಲ್ಲಿ ಪೀಠವು ಕೇಳಿತು.
- 'ಈ ಅರ್ಜಿಯು ದೇಶದಾದ್ಯಂತ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಅವುಗಳು ಪಡೆಯುವ ದೇಣಿಗೆಗೆ ಸಂಬಂಧಿಸಿದ್ದಾಗಿದೆ' ಎಂದು ಹಂಸಾರಿಯಾ ಪೀಠಕ್ಕೆ ತಿಳಿಸಿದರು.
- ಅರ್ಜಿಯ ವಿಚಾರಣೆಗೆ ಒಪ್ಪಿಕೊಂಡ ಪೀಠವು ಚುನಾವಣಾ ಆಯೋಗ, ಕೇಂದ್ರ ಸರ್ಕಾರ ಮತ್ತು ಬಿಜೆಪಿ ಹಾಗೂ ಕಾಂಗ್ರೆಸ್ ಸೇರಿದಂತೆ ಹಲವು ರಾಜಕೀಯ ಪಕ್ಷಗಳು ಮತ್ತು ಸಂಬಂಧಪಟ್ಟ ಇತರ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿತು.

## ❖ ಎಫ್‌ಟಿಎ ಮಾತುಕತೆ ಮತ್ತೆ ಶುರು: ಮುಕ್ತ ವ್ಯಾಪಾರ ಒಪ್ಪಂದದ ವಿಚಾರವಾಗಿ ಕೆನಡಾ ಜೊತೆ ಮತ್ತೆ ಮಾತುಕತೆ

**ಸಂದರ್ಭ: ಒಪ್ಪಂದ ಸಾಧ್ಯವಾದರೆ, ಅದು ಎರಡೂ ದೇಶಗಳ ಹೂಡಿಕೆದಾರರಲ್ಲಿ ಹಾಗೂ ಉದ್ಯಮಿಗಳಲ್ಲಿ ವಿಶ್ವಾಸ ಮೂಡಿಸಲಿದೆಪೀಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ.**

- ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಂಬಂಧಿಸಿದ ಮಾತುಕತೆ ಗಳನ್ನು ಮತ್ತೆ ಆರಂಭಿಸಲು ಭಾರತ ಮತ್ತು ಕೆನಡಾ ಒಪ್ಪಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.
- 'ಮಹತ್ವಾಕಾಂಕ್ಷೆಯ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ (ಸಿಇಪಿಎ) ಮಾತುಕತೆ ಆರಂಭಿಸಲು ನಾವು ಒಪ್ಪಿದ್ದೇವೆ. ಎರಡೂ ದೇಶಗಳ ನಡುವಿನ ವ್ಯಾಪಾರ ವಹಿವಾಟಿನ ಮೊತ್ತವನ್ನು 2030ರೊಳಗೆ ದುಪ್ಪಟ್ಟುಗೊಳಿಸಲು ಕೂಡ ಒಪ್ಪಿದ್ದೇವೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಭಾರತ ಮತ್ತು ಕೆನಡಾ ಸಹಜ ಪಾಲುದಾರರು, ಎರಡೂ ದೇಶಗಳು ಪರಸ್ಪರ ಸ್ಪರ್ಧಿಗಳಲ್ಲ ಎಂದಿದ್ದಾರೆ.
- ಕೆನಡಾ ದೇಶವು ಭಾರತದ ಜೊತೆಗಿನ ಎಫ್‌ಟಿಎ ಮಾತುಕತೆಗೆ 2023ರಲ್ಲಿ ವಿರಾಮ ಘೋಷಿಸಿತ್ತು. ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣ ದಲ್ಲಿ ಭಾರತದ ಪಾತ್ರ ಇರಬಹುದು ಎಂದು ಕೆನಡಾ ದೇಶದ ಹಿಂದಿನ ಪ್ರಧಾನಿ ಜಸ್ಟಿನ್ ಟ್ರುಡೊ ಅವರು 2023ರಲ್ಲಿ ಆರೋಪಿಸಿದ ನಂತರದಲ್ಲಿ ಎರಡೂ ದೇಶಗಳ ನಡುವಿನ ಸಂಬಂಧವು ಹಳಸಿತ್ತು. ಟ್ರುಡೊ ಆರೋಪವನ್ನು ಭಾರತವು ಅಲ್ಲಗಳೆದಿದೆ.
- 2023–24ಕ್ಕೆ ಹೋಲಿಸಿದರೆ 2024–25ರಲ್ಲಿ ಭಾರತದಿಂದ ಕೆನಡಾಕ್ಕೆ ಆಗುವ ರಫ್ತಿನ ಪ್ರಮಾಣವು ಶೇ 8ರಷ್ಟು ಹೆಚ್ಚಾಗಿದೆ. ಕೆನಡಾದಲ್ಲಿ ಭಾರತ ಮೂಲದ 29 ಲಕ್ಷ ಮಂದಿ ನೆಲಸಿದ್ದಾರೆ. ಅಲ್ಲದೆ, ಭಾರತದ 4.27 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.
- ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರನ್ನು ಜೊಹಾನಸ್‌ಬರ್ಗ್‌ನಲ್ಲಿ ಜಿ20 ಶೃಂಗಸಭೆಯ ಸಂದರ್ಭದಲ್ಲಿ ಭೇಟಿ ಮಾಡಿದ ನಂತರ ಗೋಯಲ್ ಅವರು ಮಾತುಕತೆ ಪುನರಾರಂಭದ ವಿಷಯ ಪ್ರಕಟಿಸಿದ್ದಾರೆ.
- 2026ರ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವಂತೆ ಮೋದಿ ಅವರು ನೀಡಿರುವ ಆಹ್ವಾನವನ್ನು ಕಾರ್ನಿ ಅವರು ಸ್ವೀಕರಿಸಿದ್ದಾರೆ ಎಂದು ಕೆನಡಾ ಪ್ರಧಾನಿಯ ಕಚೇರಿ ಹೊರಡಿಸಿರುವ ಪ್ರಕಟಣೆ ತಿಳಿಸಿದೆ. ಕಾರ್ನಿ ಅವರ ಭಾರತ ಭೇಟಿಯು ಎರಡೂ ದೇಶಗಳ ನಡುವೆ ಎಫ್‌ಟಿಎ ಮಾತುಕತೆಗೆ ಹೊಸ ಶಕ್ತಿ ನೀಡುವ ನಿರೀಕ್ಷೆ ಇದೆ.

## ❖ ಸಿಮ್ ದುರ್ಬಳಕೆ: ಮಾಲೀಕರೂ ಹೊಣೆ: ಕೇಂದ್ರ ದೂರಸಂಪರ್ಕ ಇಲಾಖೆಯಿಂದ ಸ್ಪಷ್ಟನೆ

**ಸಂದರ್ಭ: ಮೊಬೈಲ್ ಸಿಮ್ ಕಾರ್ಡ್‌ಗಳನ್ನು ಸೈಬರ್ ಅಪರಾಧ ಚಟುವಟಿಕೆಗಳಿಗೆ ಅಥವಾ ಇತರ ಅಪರಾಧ ಕೃತ್ಯಗಳಿಗೆ ದುರ್ಬಳಕೆ ಮಾಡಿಕೊಂಡರೆ, ಆ ಸಿಮ್ ಕಾರ್ಡ್ ಯಾರ ಹೆಸರಿನಲ್ಲಿದೆಯೋ ಅವರನ್ನು ಹೊಣೆ ಮಾಡುವ ಸಾಧ್ಯತೆ ಇದೆ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.**

- ನಾಗರಿಕರು ಎಚ್ಚರಿಕೆಯಿಂದ ಇರಬೇಕು, ಮೊಬೈಲ್ ಫೋನ್‌ನ ಐಎಂಇಐ ಸಂಖ್ಯೆಯನ್ನು ಬದಲಾಯಿಸಿದ್ದರೆ ಅಂತಹ ಮೊಬೈಲ್ ಫೋನ್ ಬಳಕೆ ಸೂಕ್ತವಲ್ಲ ಎಂದು ಕೇಂದ್ರ ದೂರಸಂಪರ್ಕ ಇಲಾಖೆಯ ಪ್ರಕಟಣೆ ಹೇಳಿದೆ.
- ನಕಲಿ ದಾಖಲೆಗಳನ್ನು ಬಳಸಿ ಸಿಮ್ ಕಾರ್ಡ್ ಖರೀದಿಸಬಾರದು, ಗ್ರಾಹಕರು ತಮ್ಮ ಹೆಸರಿನಲ್ಲಿ ಖರೀದಿಸಿದ ಸಿಮ್ ಕಾರ್ಡ್‌ಗಳನ್ನು ಅದನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುವ ಇತರರಿಗೆ ನೀಡಬಾರದು ಎಂದು ಕೂಡ ಇಲಾಖೆಯು ಎಚ್ಚರಿಸಿದೆ.

- 'ಮಾರ್ಪಾಡು ಮಾಡಿರುವ ಐಎಂಇಐ ಸಂಖ್ಯೆ ಹೊಂದಿರುವ ಸಾಧನಗಳನ್ನು ಬಳಕೆ ಮಾಡುವುದು, ಕಾನೂನಿಗೆ ವಿರುದ್ಧವಾದ ರೀತಿಯಲ್ಲಿ ಸಿಮ್ ಕಾರ್ಡ್ ಪಡೆದುಕೊಳ್ಳುವುದು, ಸೈಬರ್ ವಂಚನೆಯ ಕೆಲಸಗಳಿಗೆ ಸಿಮ್ ಕಾರ್ಡ್ ಬಳಕೆ ಮಾಡುವವರಿಗೆ ತಮ್ಮ ಸಿಮ್ ಕಾರ್ಡ್ ಒದಗಿಸುವುದರಿಂದ ಗಂಭೀರ ಸ್ವರೂಪದ ಕಾನೂನು ಪರಿಣಾಮಗಳಿಗೆ ಗುರಿಯಾಗಬೇಕಾದೀತು.
- ಒಬ್ಬರ ಹೆಸರಿನಲ್ಲಿ ಖರೀದಿಯಾದ ಸಿಮ್ ಕಾರ್ಡ್ ನಂತರದಲ್ಲಿ ದುರ್ಬಳಕೆ ಆದರೆ, ಮೂಲ ವ್ಯಕ್ತಿಯನ್ನು ಕೂಡ ಅಪರಾಧಿ ಎಂದು ಪರಿಗಣಿಸಬಹುದು' ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.
- ಮೊಬೈಲ್ ಐಎಂಇಐ ಸಂಖ್ಯೆ ಸೇರಿದಂತೆ ದೂರಸಂಪರ್ಕ ಕ್ಷೇತ್ರದಲ್ಲಿ ಬಳಕೆ ಮಾಡುವ ಸಾಧನಗಳ ಗುರುತುಗಳಲ್ಲಿ ಬದಲಾವಣೆ ಮಾಡಿದರೆ, ಅಂಥವರಿಗೆ ಭಾರಿ ದಂಡ ವಿಧಿಸಲು ದೂರಸಂಪರ್ಕ ಕಾಯ್ದೆ – 2023ರಲ್ಲಿ ಅವಕಾಶ ಇದೆ. ಕಾಯ್ದೆಯನ್ನು ಉಲ್ಲಂಘಿಸಿದವರಿಗೆ ಮೂರು ವರ್ಷಗಳ ಜೈಲು ಶಿಕ್ಷೆ ಅಥವಾ ₹50 ಲಕ್ಷದವರೆಗೆ ದಂಡ ಅಥವಾ ಅವೆರಡನ್ನೂ ವಿಧಿಸಲು ಅವಕಾಶ ಇದೆ.
- ದೂರಸಂಪರ್ಕ ನಿಯಮಗಳು – 2024ರಲ್ಲಿನ ಅಂಶಗಳು, ಐಎಂಇಐ ಸಂಖ್ಯೆಯನ್ನು ಬದಲಾಯಿಸುವುದನ್ನು ನಿರ್ಬಂಧಿಸಿವೆ.

**ಸಂಚಾರ ಸಾರಥಿ ಪೋರ್ಟಲ್ ಪರಿಶೀಲಿಸಿ**

- ಐಎಂಇಐ ವಿವರಗಳನ್ನು ನಾಗರಿಕರು ಸಂಚಾರ ಸಾರಥಿ ಪೋರ್ಟಲ್ ಅಥವಾ ಸಂಚಾರ ಸಾರಥಿ ಮೊಬೈಲ್ ಆ್ಯಪ್ ಮೂಲಕ ಪರಿಶೀಲಿಸಬೇಕು ಎಂದು ಇಲಾಖೆಯು ಸಲಹೆ ನೀಡಿದೆ. ಈ ಪೋರ್ಟಲ್ ಮೂಲಕ ಮೊಬೈಲ್‌ನ ಬ್ರ್ಯಾಂಡ್ ಹೆಸರು, ತಯಾರಿಕಾ ಕಂಪನಿಯ ಹೆಸರನ್ನು ಪರಿಶೀಲಿಸಬಹುದು.

## ❖ ಜಿಡಿಪಿ ಪ್ರಗತಿ ಶೇ 6.5: ಅಂದಾಜು

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.5ರಷ್ಟು ಮತ್ತು 2026–27ರಲ್ಲಿ ಶೇ 6.7ರಷ್ಟಾಗಬಹುದು ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ ಸಂಸ್ಥೆ ಅಂದಾಜಿಸಿದೆ.**

- ಜಿಎಸ್‌ಟಿ ದರ ಇಳಿಕೆಯು ಮಧ್ಯಮ ವರ್ಗದ ಜನರಲ್ಲಿ ಖರೀದಿ ಸಾಮರ್ಥ್ಯ ಹೆಚ್ಚಿಸಲಿದೆ. ಕೇಂದ್ರ ಸರ್ಕಾರವು ಆದಾಯ ತೆರಿಗೆ ವಿನಾಯಿತಿಯನ್ನು ಹೆಚ್ಚು ಮಾಡಿರುವುದು ಮತ್ತು ಆರ್‌ಬಿಐ ರೆಪೊ ದರ ಇಳಿಕೆ ಮಾಡಿರುವುದು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಲು ಉತ್ತೇಜನ ನೀಡಲಿವೆ. ಇವು ಜಿಡಿಪಿ ಹೆಚ್ಚಳಕ್ಕೆ ಕಾರಣವಾಗಲಿವೆ ಎಂದು ಹೇಳಿದೆ.
- ಗ್ರಾಹಕರು ಸರಕುಗಳನ್ನು ಖರೀದಿಸುವ ಮಟ್ಟವು ಚೆನ್ನಾಗಿಯೇ ಇದೆ. ಇದರಿಂದ, ದೇಶದ ಬೆಳವಣಿಗೆ ಉತ್ತಮವಾಗಿದೆ ಎಂದು ತನ್ನ ಏಷ್ಯಾ–ಪೆಸಿಫಿಕ್ ಆರ್ಥಿಕ ಮುನ್ನೋಟದ ವರದಿಯಲ್ಲಿ ಹೇಳಿದೆ.
- ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಒಪ್ಪಂದ ಸಾಧ್ಯವಾದರೆ ಅನಿಶ್ಚಿತತೆ ಕಡಿಮೆ ಆಗಲಿದೆ. ಇದು ಹೂಡಿಕೆದಾರರಲ್ಲಿ ಭರವಸೆ ಹೆಚ್ಚಿಸುವುದಲ್ಲದೆ, ಕಾರ್ಮಿಕ ಕೇಂದ್ರೀತ ವಲಯಗಳಿಗೆ ಉತ್ತೇಜನ ನೀಡಲಿದೆ ಎಂದು ತಿಳಿಸಿದೆ.
- ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.8ರಷ್ಟು ದಾಖಲಾಗಿತ್ತು. ಇದು 15 ತಿಂಗಳ ಅಧಿಕವಾಗಿತ್ತು.

## ❖ ಎಫ್‌ಪಿಒಗಳಿಂದ ನೇರ ಖರೀದಿಗೆ ಸಲಹೆ

**ಸಂದರ್ಭ: ಹೋಟೆಲ್‌ಗಳು ಹಾಗೂ ರೆಸ್ಟಾರೆಂಟ್‌ಗಳು ತಮಗೆ ಅಗತ್ಯವಿರುವ ಉತ್ಪನ್ನಗಳನ್ನು ರೈತ ಉತ್ಪಾದಕ ಸಂಘಗಳಿಂದ (ಎಫ್‌ಪಿಒ) ನೇರವಾಗಿ ಖರೀದಿಸಬೇಕು ಎಂದು ಕೇಂದ್ರ ಕೃಷಿ ಕಾರ್ಯದರ್ಶಿ ದೇವೇಶ್ ಚತುರ್ವೇದಿ ಸಲಹೆ ನೀಡಿದ್ದಾರೆ.**

- ಹೀಗೆ ಮಾಡುವುದರಿಂದ ಬೆಳೆಗಾರರಿಗೆ ಉತ್ತಮ ಬೆಲೆ ಸಿಗುತ್ತದೆ, ಪೂರೈಕೆ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳ ಪಾತ್ರವನ್ನು ನಿವಾರಿಸಲು ಆಗುತ್ತದೆ ಎಂದು ಅವರು ಹೇಳಿದ್ದಾರೆ.
- 'ದೇಶದಲ್ಲಿ ಹೋಟೆಲ್, ರೆಸ್ಟೊ ರೆಂಟ್‌ಗಳ ಸಂಖ್ಯೆ ದೊಡ್ಡದಿದೆ. ಅವರು ಸ್ಥಳೀಯ ರೈತರ ಜೊತೆ ಪಾಲುದಾರಿಕೆ ಹೊಂದಲು ಸಾಧ್ಯವಾದರೆ ಅವರಿಗೂ ರೈತರಿಗೂ ಒಳ್ಳೆಯದಾಗುತ್ತದೆ' ಎಂದು ಚತುರ್ವೇದಿ ಅವರು ಕಾರ್ಯಕ್ರಮವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ.
- ಕೇಂದ್ರ ಸರ್ಕಾರವು ವೆಬ್ ಆಧಾರಿತ ವೇದಿಕೆಯೊಂದನ್ನು ಆರಂಭಿಸುವ ಉದ್ದೇಶ ಹೊಂದಿದ್ದು, ಅದರ ಮೂಲಕ ಎಫ್‌ಪಿಒಗಳು ತಮ್ಮಲ್ಲಿ ಹೆಚ್ಚುವರಿಯಾಗಿ ಲಭ್ಯವಿರುವ ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಬಹುದು. ಆ ಉತ್ಪನ್ನಗಳನ್ನು ಉದ್ದಿಮೆಗಳು, ಹೋಟೆಲ್‌ಗಳು, ರೆಸ್ಟೊರೆಂಟ್‌ಗಳು ನೇರವಾಗಿ ಖರೀದಿಸಬಹುದು ಎಂದು ಅವರು ತಿಳಿಸಿದ್ದಾರೆ.

## ❖ ಭಾರತದ ಭೇಟಿಗೆ ಕೆನಡಾ ಪ್ರಧಾನಿ ಸಮ್ಮತಿ

**ಸಂದರ್ಭ: ಪ್ರಧಾನಿ ನರೇಂದ್ರ ಮೋದಿಯವರ ಆಹ್ವಾನವನ್ನು ಸ್ವೀಕರಿಸಿದ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರು ಭಾರತಕ್ಕೆ ಭೇಟಿ ನೀಡಲು ಒಪ್ಪಿಕೊಂಡಿದ್ದಾರೆ.**

- 'ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಜಿ20 ಶೃಂಗದಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದ ಬಳಿಕ ಮೋದಿ ಅವರು ನೀಡಿದ ಆಹ್ವಾನವನ್ನು ಒಪ್ಪಿಕೊಂಡಿರುವ ಕಾರ್ನಿ ಅವರು 2026ರ ಆರಂಭದಲ್ಲಿ ಭೇಟಿ ನೀಡುವುದಾಗಿ ತಿಳಿಸಿದ್ದಾರೆ' ಎಂದು ಕೆನಡಾ ಪ್ರಧಾನಿ ಕಚೇರಿಯ ಪ್ರಕಟಣೆ ತಿಳಿಸಿದೆ.
- 'ವ್ಯಾಪಾರ, ಹೂಡಿಕೆ, ತಂತ್ರಜ್ಞಾನ ಮತ್ತು ಇಂಧನ ಕ್ಷೇತ್ರದಲ್ಲಿ ಸಹಕಾರವನ್ನು ವೃದ್ಧಿಪಡಿಸುವುದರ ಜೊತೆಗೆ ರಕ್ಷಣೆ ಮತ್ತು ಬಾಹ್ಯಾಕಾಶ ವಲಯದಲ್ಲೂ ಸಹಕಾರವನ್ನು ಬಲಪಡಿಸಿಕೊಳ್ಳಲು ಮೋದಿ ಮತ್ತು ಕಾರ್ನಿ ಸಮ್ಮತಿಸಿದ್ದಾರೆ. ಸಮಗ್ರ ಆರ್ಥಿಕ ಪಾಲುದಾರಿಕೆಯ ಒಪ್ಪಂದದ(ಸಿಇಪಿಎ) ಬಗ್ಗೆಯೂ ಮಾತುಕತೆ ಆರಂಭಿಸಲು ಉಭಯ ನಾಯಕರು ನಿರ್ಧರಿಸಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.
- ಕಾನೂನು ಜಾರಿಗೆ ಸಂಬಂಧಿಸಿ ಉಭಯ ದೇಶಗಳ ನಡುವಿನ ಮಾತುಕತೆಯಲ್ಲಿನ ಪ್ರಗತಿಯ ಬಗ್ಗೆ ಕಾರ್ನಿ ಹರ್ಷ ವ್ಯಕ್ತಪಡಿಸಿದರು.
- ಖಾಲಿಸ್ತಾನಿ ಉಗ್ರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು 2023ರಲ್ಲಿ ಕೆನಡಾದ ಆಗಿನ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಆರೋಪಿಸಿದ್ದರಿಂದ ಉಭಯ ದೇಶಗಳ ನಡುವಿನ ಸಂಬಂಧ ತೀವ್ರ ಹದಗೆಟ್ಟಿತ್ತು.

### ಪೌರತ್ವ ಕಾಯ್ದೆ ತಿದ್ದುಪಡಿಗೆ ಮುಂದಾದ ಕೆನಡಾ

- ಕೆನಡಾ ಸರ್ಕಾರವು ಪೌರತ್ವ ಕಾಯ್ದೆ ತಿದ್ದುಪಡಿಗೆ ಮುಂದಾಗಿದ್ದು, ಅಲ್ಲಿ ವಾಸಿಸುತ್ತಿರುವ ಭಾರತ ಮೂಲದವರಿಗೆ ಇದರಿಂದ ಅನುಕೂಲವಾಗಲಿದೆ ಎನ್ನಲಾಗುತ್ತಿದೆ.
- 'ಪೌರತ್ವ ಕಾಯ್ದೆ (2025) ತಿದ್ದುಪಡಿಗೆ ಅಲ್ಲಿನ ರಾಜ ಒಪ್ಪಿಗೆ ನೀಡಿದ್ದಾರೆ. ಎಲ್ಲರನ್ನೂ ಒಳಗೊಳ್ಳುವ ನಿಟ್ಟಿನಲ್ಲಿ ಈ ಕಾಯ್ದೆಯು ಮಹತ್ವದ ಮೈಲುಗಲ್ಲಾಗ ಲಿದೆ' ಎಂದು ಕೆನಡಾ ಸರ್ಕಾರ ಇತ್ತೀಚೆಗೆ ಹೇಳಿಕೆ ಬಿಡುಗಡೆ ಮಾಡಿದೆ.
- ನೂತನ ಕಾಯ್ದೆ ಅಸ್ತಿತ್ವಕ್ಕೆ ಬಂದ ನಂತರ, ವಿಧೇಯಕವು ಜಾರಿಗೆ ಬರುವ ಮೊದಲು ಜನಿಸಿದ ಮಕ್ಕಳಿಗೂ ಕೆನಡಾದ ಪೌರತ್ವವನ್ನು ನೀಡಲಾಗುತ್ತದೆ ಎಂದು ಅದು ತಿಳಿಸಿದೆ.

- 2009ರ ಕಾಯ್ದೆಯ ಅನುಸಾರ, ಕೆನಡಾದ ಪೌರತ್ವ ಹೊಂದಿರುವ ಪೋಷಕರ ಮಕ್ಕಳು ಕೆನಡಾದಿಂದ ಹೊರಗಡೆ ಜನಿಸಿದರೆ ಅಥವಾ ದತ್ತು ಪಡೆದವರಾಗಿದ್ದರೆ ಅವರಿಗೆ ವಂಶಪಾರಂಪರ್ಯವಾಗಿ ಕೆನಡಾ ಪೌರತ್ವ ಲಭಿಸುತ್ತಿರಲಿಲ್ಲ. ಇದರಿಂದಾಗಿ ದೇಶದ ಹೊರಗೆ ಜನಿಸಿದ ಮಗುವನ್ನು ಹೊಂದಿದ ಭಾರತ ಮೂಲದ ಹಲವರಿಗೆ ಸಮಸ್ಯೆಯಾಗುತ್ತಿತ್ತು.

## ❖ ವಿಶ್ವಕಪ್ ಉಳಿಸಿಕೊಂಡ ಭಾರತ: ಮಹಿಳಾ ಕಬಡ್ಡಿ ತಂಡಕ್ಕೆ ಸತತ ಎರಡನೇ ಬಾರಿಗೆ ಕಿರೀಟ

**ಸಂದರ್ಭ: ಭಾರತ ವನಿತೆಯರ ಕಬಡ್ಡಿ ತಂಡವು ಫೈನಲ್‌ನಲ್ಲಿ 35–28 ಅಂತರದಿಂದ ತೈವಾನ್ ತಂಡವನ್ನು ಮಣಿಸಿ ಸತತ ಎರಡನೇ ಬಾರಿಗೆ ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿತು.**




ಕಬಡ್ಡಿ ವಿಶ್ವಕಪ್ ಗೆದ್ದ ಭಾರತ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು 'ಎಕ್ಸ್' ಚಿತ್ರ

# ವಿಶ್ವಕಪ್ ಉಳಿಸಿಕೊಂಡ ಭಾರತ

## ಮಹಿಳಾ ಕಬಡ್ಡಿ ತಂಡಕ್ಕೆ ಸತತ ಎರಡನೇ ಬಾರಿಗೆ ಕಿರೀಟ

- 11 ದೇಶಗಳು ಭಾಗವಹಿಸಿದ್ದ ಟೂರ್ನಿಯಲ್ಲಿ ಭಾರತ ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಂಡಿತು. ಟೂರ್ನಿಯುದ್ದಕ್ಕೂ ಅಜೇಯವಾಗುಳಿದ ಭಾರತ ಸೆಮಿಫೈನಲ್‌ನಲ್ಲಿ 33–21ರಿಂದ ಬಲಿಷ್ಠ ಇರಾನ್ ತಂಡವನ್ನು ಮಣಿಸಿತ್ತು. ತೈವಾನ್ ತಂಡವು 25–18ರಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿತ್ತು.
- ವಿಶ್ವಕಪ್ ಗೆದ್ದ ಭಾರತ ತಂಡವನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. '2025ರ ಕಬಡ್ಡಿ ವಿಶ್ವಕಪ್ ಗೆದ್ದು ದೇಶ ಹೆಮ್ಮೆಪಡುವಂತೆ ಮಾಡಿದ ಭಾರತ ತಂಡಕ್ಕೆ ಅಭಿನಂದನೆಗಳು. ಈ ಗೆಲುವು ಅಸಂಖ್ಯಾತ ಯುವಮನಸ್ಸುಗಳು ಕಬಡ್ಡಿಯಲ್ಲಿ ತೊಡಗಿಸಿಕೊಳ್ಳಲು ಮತ್ತು ಉನ್ನತ ಗುರಿ ಸಾಧಿಸಲು ಸ್ಫೂರ್ತಿ ನೀಡಲಿದೆ' ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ.
- ಭಾರತ ಮಹಿಳಾ ಕಬಡ್ಡಿ ತಂಡವು ಈ ವರ್ಷದ ಮಾರ್ಚ್‌ನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್ಸ್‌ನಲ್ಲಿಯೂ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

## ❖ ಅಯೋಧ್ಯೆಯ ರಾಮ ಮಂದಿರದಲ್ಲಿ ಸೇರಿದ್ದ ಲಕ್ಷಾಂತರ ಭಕ್ತರ 'ಜೈ ಶ್ರೀರಾಮ್' ಘೋಷಣೆ.

**ಸಂದರ್ಭ: ಪ್ರಧಾನಿ ನರೇಂದ್ರ ಮೋದಿ ಅವರು ಮಂದಿರ ನಿರ್ಮಾಣ ಪೂರ್ಣ ಗೊಂಡಿದ್ದರ ಸಂಕೇತವಾಗಿ'ರಾಮಧ್ವಜ'ದ ಆರೋಹಣ ನೆರವೇರಿಸಿದರು.**

- ಬೆಳಿಗ್ಗೆ 11.50ರ ಬಳಿಕ ಬಂದ ಅಭಿಜಿತ್ ಮುಹೂರ್ತದಲ್ಲಿ ಪ್ರಧಾನಿ ಮೋದಿ ಅವರು ಧ್ವಜಾರೋಹಣ ನೆರವೇರಿಸಿದರು. 'ಮಂಗಳ ವಾರವು ವಿವಾಹ ಪಂಚಮಿ ಹಬ್ಬವಾಗಿದ್ದು, ಇದೇ ದಿನ ರಾಮ ಮತ್ತು ಸೀತೆಯು ವಿವಾಹ ವಾಗಿದ್ದರು ಎಂದು ನಂಬಲಾಗಿದೆ.
- ಜೊತೆಗೆ 17ನೇ ಶತಮಾನದಲ್ಲಿ ಅಯೋಧ್ಯೆಯಲ್ಲಿ 48 ತಾಸು ಧ್ಯಾನ ಕೈಗೊಂಡಿದ್ದ ಗುರು ತೇಗ್ ಬಹದ್ದೂರ್ ಅವರ ಸ್ಮರಣೆಯ ದಿನವೂ ಹೌದು' ಎಂದು ಪ್ರಧಾನಿ ಕಚೇರಿ ಹೇಳಿದೆ.



ರಾಮಧ್ವಜ ಹೇಗಿದೆ?

ರಾಮ ಮಂದಿರದ ಶಿಖರದಿಂದ 161 ಅಡಿ ಮೇಲೆ ಹಾರಾಡುತ್ತಿರುವ ರಾಮ ಧ್ವಜವು ತ್ರಿಭುಜ ಆಕಾರದಲ್ಲಿದ್ದು 11 ಅಡಿ ಅಗಲ ಮತ್ತು 21 ಅಡಿ ಉದ್ದವಿದೆ. ಧ್ವಜವು 2 ಕೆ.ಜಿ. ತೂಕವಿದೆ. ಪ್ಯಾರಾಚೂಟ್‌ನಲ್ಲಿ ಬಳಸುವ ಬಟ್ಟೆಯ ಮಾದರಿಯನ್ನೇ ಧ್ವಜದಲ್ಲಿಯೂ ಬಳಸಲಾಗಿದೆ. ಹಗ್ಗವನ್ನು ನೈಲಾನ್‌ನಿಂದ ಮಾಡಲಾಗಿದೆ. 'ಧ್ವಜದಲ್ಲಿರುವ ಕೇಸರಿ ಬಣ್ಣವು ಬೆಂಕಿಯನ್ನು, ಉದಯಿಸುವ ಸೂರ್ಯನನ್ನೂ ಸಂಕೇತಿಸುತ್ತದೆ. ಇದು ತ್ಯಾಗ ಮತ್ತು ಸಮರ್ಪಣೆಯ ರೂಪಕ' ಎಂದು ಟ್ರಸ್ಟ್ ಹೇಳಿದೆ.

ಏನನ್ನು ಸಂಕೇತಿಸುತ್ತದೆ?

ಧ್ವಜದಲ್ಲಿ 3 ಪ್ರತೀಕಗಳಿವೆ– ಸೂರ್ಯ, ಓಂ ಮತ್ತು ಕೋವಿದಾರಾ ಮರ

ಸೂರ್ಯ: ರಾಮನ 'ಸೂರ್ಯವಂಶ'ದ ಸಂಕೇತ. ಇದು ತ್ರೇತಾಯುಗವನ್ನೂ ಪ್ರತಿನಿಧಿಸುತ್ತದೆ

ಓಂ: ಆಧ್ಯಾತ್ಮದ ಪ್ರತೀಕ

ಕೋವಿದಾರಾ ಮರ: ಕರ್ನಾಟಕದ ಕೆಲವು ಭಾಗಗಳಲ್ಲಿ ಈ ಮರವನ್ನು 'ಬಸವನ ಪಾದ' (ಇದಕ್ಕೆ ಔಷಧೀಯ ಮಹತ್ವವೂ ಇದೆ) ಎಂದೂ ಕರೆಯುತ್ತಾರೆ. ಈ ಮರವು ಅಯೋಧ್ಯೆಯ ಲಾಂಛನವಾಗಿತ್ತು ಎಂದು ರಾಮಾಯಣದಿಂದ ತಿಳಿಯುತ್ತದೆ. ರಾಮ, ಸೀತೆ ಮತ್ತು ಲಕ್ಷ್ಮಣರು ವನವಾಸದಲ್ಲಿದ್ದಾಗ ಭರತನು ಇವರನ್ನು ಅಯೋಧ್ಯೆಗೆ ಹಿಂದಕ್ಕೆ ಕರೆತರಲು ಕಾಡಿಗೆ ಹೋಗುತ್ತಾನೆ. ಆಗ ರಥದಲ್ಲಿದ್ದ ಈ ವೃಕ್ಷದ ಲಾಂಛನವನ್ನು ನೋಡಿಯೇ ಬರುತ್ತಿರುವುದು ಭರತನೇ ಎಂದು ಲಕ್ಷ್ಮಣನು ರಾಮನಿಗೆ ಖಚಿತಪಡಿಸುತ್ತಾನೆ ಎನ್ನುವ ವಿವರ ಈ ರಾಮಾಯಣದಲ್ಲಿದೆ

## ❖ ಪಿಎಲ್ಎ: ಪ್ಲಾಸ್ಟಿಕ್‌ಗೆ ಪರ್ಯಾಯ

**ಸಂದರ್ಭ: ಮನೆಯಲ್ಲಿ ಮುಟ್ಟಿದ ಕಡೆಯಲ್ಲೆಲ್ಲಾ ಸಿಗುವ ವಸ್ತುಗಳು ಪ್ಲಾಸ್ಟಿಕ್ ಉತ್ಪನ್ನಗಳು! ಇನ್ನು ಹೊರಗಡೆಯಂತೂ ಪ್ಲಾಸ್ಟಿಕ್ ಕಾಣದ ಜಾಗವೇ ಇಲ್ಲ. ಜಗತ್ತು ಎದುರಿಸುತ್ತಿರುವ ಹಲವಾರು ಭಯಂಕರ ಸಮಸ್ಯೆಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಕೂಡ ಒಂದು.**

- ನಮ್ಮ ಭೂಮಿಯ ಮೇಲೆ ಪ್ರತಿ ವರ್ಷ ಸುಮಾರು 400 ದಶಲಕ್ಷ ಟನ್ ಪ್ಲಾಸ್ಟಿಕ್ ಉತ್ಪಾದನೆಯಾಗುತ್ತದೆ. ಅವೆಲ್ಲವೂ ಮಾನವನಿರ್ಮಿತವೇ. ಇಷ್ಟು ದೊಡ್ಡ ರಾಶಿಯ ತ್ಯಾಜ್ಯದಲ್ಲಿ ಪುನರ್ಬಳಕೆಯಾಗುವುದು ಕೇವಲ ಶೇ 50ರಷ್ಟು ಮಾತ್ರ, ಉಳಿದರ್ಧ ಭಾಗವನ್ನು ನಾವು ಒಮ್ಮೆ ಬಳಸಿ ಎಸೆದುಬಿಡುತ್ತೇವೆ; ಪರಿಸರದಲ್ಲಿ ಅದು ಹಾಗೆಯೇ ಉಳಿದುಬಿಡುತ್ತದೆ.
- ನಮಗೆ ಈಗಾಗಲೇ ತಿಳಿದಿರುವ ಹಾಗೆ ಪ್ಲಾಸ್ಟಿಕ್ ಅನ್ನು ಪೆಟ್ರೋಲಿಯಂ ಮೂಲದಿಂದ ತಯಾರಿಸಲಾಗುತ್ತದೆ; ಪಾಲಿ ಪ್ರೊಪಲೀನ್ ಹಾಗೂ ಪಾಲಿ ಇಥಲೀನ್ – ಇವೇ ಪ್ಲಾಸ್ಟಿಕ್‌ನ ಮೂಲ.
- ಪ್ಲಾಸ್ಟಿಕ್ ಬೇಗ ಮಣ್ಣಿನಲ್ಲಿ ಕರಗುವ ವಸ್ತುವಲ್ಲ; ಎಂದರೆ ಇದು 'ನಾನ್–ಬಯೋಡಿಗ್ರೇಡೆಬಲ್'. ಏನಾದರೂ ಇದರ ಸಂಯೋಜನೆಯು ಜೈವಿಕವಾಗಿ ವಿಘಟನೆಯು ಆಗಬೇಕೆಂದರೆ ನೂರಾರು ವರ್ಷಗಳು ಬೇಕು.
- ಹೀಗಾಗಿ ನಾವು ಇದನ್ನು ಬಳಸಿ, ಬಿಸಾಡಿದ ಮೇಲೆ ಮಣ್ಣಿನಲ್ಲಿ ಕರಗಿ ಗೊಬ್ಬರವಾಗದೆ ಇದು ನೆಲ, ಜಲ, ಸಾಗರ, ಪರ್ವತ, ಹಾಗೂ ಆಹಾರ ಸರಪಣಿಗಳಲ್ಲಿ ಸೇರಿಕೊಂಡು ಪರಿಸರಮಾಲಿನ್ಯಕ್ಕೆ ಕಾರಣವಾಗುತ್ತದೆ.
- ಭಾರತದಲ್ಲಿ ಪ್ರತಿವರ್ಷ 3.5 ದಶಲಕ್ಷ ಟನ್ ಪ್ಲಾಸ್ಟಿಕ್ ಬಳಕೆಯಾಗುತ್ತದೆ; ಅದರಲ್ಲಿ ಕೇವಲ ಶೇ 30ರಷ್ಟು ಮಾತ್ರವೇ ಪುನರ್ಬಳಕೆಯಾಗುವುದು.
- ಪ್ಲಾಸ್ಟಿಕ್ ಮಾಲಿನ್ಯವನ್ನು ತಪ್ಪಿಸಲು, ಪ್ಲಾಸ್ಟಿಕ್‌ನ ಪರ್ಯಾಯವೂ ಪರಿಸರಸ್ನೇಹಿಯೂ ಆದ ವಸ್ತುವಿನ ಹುಡುಕಾಟವಂತೂ ದಶಕಗಳಿಂದ ನಡೆಯುತ್ತಿದೆ. ಅದರ ಫಲವೇ **'ಪಾಲಿ ಲ್ಯಾಕ್ಟಿಕ್ ಆ್ಯಸಿಡ್'** - ಪಿಎಲ್ಎ.
- **'ಪಿಎಲ್ಎ' ಇದೊಂದು ಜೈವಿಕ ಪ್ಲಾಸ್ಟಿಕ್. ಇದರ ರಾಸಾಯನಿಕ ಸೂತ್ರ - $(C_3H_4O_2)_n$. ಇದರ ಮೆಲ್ಟಿಂಗ್ ಪಾಯಿಂಟ್ 150-160 ಡಿಗ್ರಿ ಸೆಲ್ಸಿಯಸ್.**
- ಜಗತ್ತಿನಲ್ಲಿ ತಯಾರಾಗುತ್ತಿರುವ ಎಲ್ಲ ಜೈವಿಕ ಪ್ಲಾಸ್ಟಿಕ್‌ಗಳಿಗಿಂತಲೂ ಪಿಎಲ್ಎ ಬಹಳ ಜನಪ್ರಿಯ. ಇದನ್ನು ಸಾವಯವ ಮೂಲದಿಂದ ತಯಾರಿಸಲಾಗುತ್ತದೆ.
- **ಇದಕ್ಕೆ ಬೇಕಾಗುವ ಕಚ್ಚಾ ವಸ್ತುಗಳೆಂದರೆ ಪಿಷ್ಟ, ಕಬ್ಬು ಅಥವಾ ಮರಗೆಣಸು. ಇದನ್ನು ಸಕ್ಕರೆಯ ಕಾರ್ಖಾನೆಗಳಲ್ಲಿ ಉಪ–ಉತ್ಪನ್ನವಾಗಿಯೂ ತಯಾರಿಸುತ್ತಾರೆ.**

- **ಪಾಲಿ ಲ್ಯಾಕ್ಟಿಕ್ ಆ್ಯಸಿಡ್ ತಯಾರಿಸುವ ವಿಧಾನವೆಂದರೆ, (1) ಕಬ್ಬು ಅಥವಾ ಮೆಕ್ಕೆಜೋಳದಿಂದ ಸಕ್ಕರೆಯ ಉತ್ಪಾದನೆ; (2) ಸಕ್ಕರೆಯನ್ನು ಹದುವಿಕೆಗೆ ಒಳಪಡಿಸಿ ಲ್ಯಾಕ್ಟಿಕ್ ಆ್ಯಸಿಡ್ ಆಗಿ ಪರಿವರ್ತಿಸುವುದು; (3) ಲ್ಯಾಕ್ಟಿಕ್ ಆ್ಯಸಿಡ್‌ನಿಂದ ಪಾಲಿಮರನ್ನು ತಯಾರಿಸುವುದು.**
- ಹೀಗೆ ತಯಾರಾದ ಉತ್ಪನ್ನವು ಪ್ಲಾಸ್ಟಿಕ್ ತರಹದ್ದೇ ಗುಣವನ್ನು ಹೊಂದಿರುತ್ತದೆ. ಅದರಷ್ಟು ಹೆಚ್ಚು ತಾಪಮಾನವನ್ನು ಎದುರಿಸುವ ಕ್ಷಮತೆ ಇಲ್ಲದೇ ಇರುವುದು ಇದರ ನ್ಯೂನತೆ ಎನ್ನಬಹುದು.
- ಇದು ಜೈವಿಕ ವಿಘಟನೆಯ ವಸ್ತುವಾಗಿದ್ದು, ನಿರ್ದಿಷ್ಟ ವಾತಾವರಣವನ್ನು ಸೃಷ್ಟಿಸಿ ನಿರ್ವಹಿಸಿದರೆ ಬೇಗನೆ ಮಿಶ್ರ ಗೊಬ್ಬರವಾಗಿ ಪರಿವರ್ತನೆಯಾಗಬಲ್ಲದು.
- ಪಿಎಲ್‌ಎ ಬಳಕೆಯಿಂದ ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಯಬಹುದು. ಅಷ್ಟೇ ಅಲ್ಲ, ಇದರ ತಯಾರಿಕೆಯಲ್ಲಿ ಹಾಗೂ ಬಳಕೆಯಲ್ಲಿ ಹೊರಸೂಸುವ **'ಇಂಗಾಲದ ಮುದ್ರೆ'ಯೂ (ಕಾರ್ಬನ್ ಫೂಟ್ ಪ್ರಿಂಟ್) ಪ್ಲಾಸ್ಟಿಕ್‌ಗಿಂತ ಕಡಿಮೆ** ಎನ್ನುವುದು ಗಮನೀಯ ಅಂಶ.

- ಪಿಎಲ್‌ಎಯ ಆವಿಷ್ಕಾರವು ಇಂದು ನಿನ್ನೆಯದಲ್ಲ; ಇದರ ಇತಿಹಾಸವನ್ನು ಹುಡುಕುತ್ತಹೋದರೆ ಅದು 1932ಕ್ಕೆ ಹೋಗಿ ನಿಲ್ಲುತ್ತದೆ.
- 'ಡ್ಯುಪೊಂಟ್' ಎನ್ನುವ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಕಂಪನಿಯಲ್ಲಿಯ ರಸಾಯನಶಾಸ್ತ್ರಜ್ಞ ವ್ಯಾಲೆಸ್ ಕ್ಯಾರೊಡರ್ಸ್ ಇದರ ಸಂಶೋಧಕ.
- ಈ ವಿಜ್ಞಾನಿಯೇ ನೈಲಾನ್‌ನನ್ನು ಕಂಡುಹಿಡಿದಿದ್ದು. ಆದರೆ ಅವರು ಇದನ್ನು ಮಾರುಕಟ್ಟೆಗೆ ಸಿದ್ಧಪಡಿಸಿರಲಿಲ್ಲ.
- ನಂತರ 1980ರ ವೇಳೆಗೆ ಪ್ಯಾಟ್ರಿಕ್ ಗ್ರುಬ್ಬರ್ ಎನ್ನುವವರು ಈ ತಂತ್ರಜ್ಞಾನವನ್ನು ಮಾರುಕಟ್ಟೆಗೆ, ಎಂದರೆ ಮಾಸ್ ಪ್ರೊಡಕ್ಷನ್ ಅಥವಾ ದೊಡ್ಡ ಮಟ್ಟದ ಉತ್ಪಾದನೆಗೆ ಬೇಕಾಗುವ ಹಾಗೆ ಅಭಿವೃದ್ಧಿ ಪಡಿಸಿದರು. ಇವರ ಈ ಸಾಧನೆಯೇ 'ನೇಚರ್ ವರ್ಕ್ಸ್ ಎಲ್‌ಎಲ್‌ಸಿ' ಎನ್ನುವ ಕಂಪನಿಯ ಬೆನ್ನೆಲುಬು. ಇಂದು ಜಗತ್ತಿನಲ್ಲಿ ಅತಿ ಹೆಚ್ಚು ಪಿಎಲ್‌ಎಯನ್ನು ಉತ್ಪಾದಿಸುವ ಕಂಪನಿಯೇ ನೇಚರ್ ವರ್ಕ್ಸ್.

- ಪ್ಯಾಕೇಜಿಂಗ್, ವೈದ್ಯಕೀಯ, ಔಷಧಗಳ ತಯಾರಿಕೆ, ಬಟ್ಟೆ, 3ಡಿ ಪ್ರಿಂಟಿಂಗ್, ಕೃಷಿಕ್ಷೇತ್ರದಲ್ಲಿ ಪಿಎಲ್‌ಎಯ ಬಳಕೆ ಬಹಳ ಆಶಾದಾಯಕವಾಗಿದೆ. ಪಿಎಲ್‌ಎಯಿಂದ ತಯಾರಾಗುತ್ತಿರುವ ವಸ್ತುಗಳಲ್ಲಿ ಬಾಟಲಿಗಳು, ಆಹಾರದ ಪೊಟ್ಟಣಗಳು, ಕೈಚೀಲಗಳು, ವಸ್ತ್ರಗಳು – ಇವು ಕೆಲವೊಂದು ಉದಾಹರಣೆಗಳು ಮಾತ್ರ.
- ಜಗತ್ತಿನಲ್ಲಿ ಹಲವಾರು ಕಂಪನಿಗಳು ಪಿಎಲ್‌ಎ ಉತ್ಪನ್ನಗಳನ್ನು ತಯಾರಿಸುತ್ತಿವೆ; ಭಾರತವೂ ಈ ಓಟದ ಸ್ಪರ್ಧೆಯಲ್ಲಿ ಹಿಂದಿಲ್ಲ. ಎಲ್ಲರೂ ಆದಷ್ಟು ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಪಿಎಲ್‌ಎ ಉತ್ಪನ್ನಗಳನ್ನು ಹೊರತರಲು, ಆ ತಂತ್ರಜ್ಞಾನವನ್ನು ಕೈಗೂಡಿಸಿಕೊಳ್ಳಲು ನಿರತರಾಗಿದ್ದಾರೆ.
- ಇಂದು ಇದರ ಲಭ್ಯತೆಯು ಕಡಿಮೆ ಆಗಿರುವುದರಿಂದಾಗಿ ಸಾಮಾನ್ಯ ಪ್ಲಾಸ್ಟಿಕ್‌ಗಿಂತ ಇದರ ಬೆಲೆಯು ಶೇ 25-30ರಷ್ಟು ಹೆಚ್ಚು.
- ಮುಂದೆ ಇದು ದೊಡ್ಡ ಮಟ್ಟದ ಬಳಕೆಗೆ ಸಿದ್ಧವಾಗಿ, ಅದೇ ಪ್ರಮಾಣದಲ್ಲಿ ಉತ್ಪಾದನೆಯೂ ನಡೆದಾಗ ಆಗ ಅದರ ಬೆಲೆ ಪ್ಲಾಸ್ಟಿಕ್‌ಗಿಂತಲೂ ಕಡಿಮೆಯಾಗಬಹುದು.

## ಸೆಲ್ಯುಲೋಸ್‌ನಿಂದ ಪಿಎಲ್‌ಎವರೆಗಿನ ಪಯಣ

- **ಪ್ಲಾಸ್ಟಿಕ್ ಸಂಶೋಧನೆಯಾಗಿದ್ದು 1862ರಲ್ಲಿ. ಅದನ್ನು ಸಂಶೋಧಿಸಿದ್ದು ಬ್ರಿಟಿಷ್ ವಿಜ್ಞಾನಿ ಅಲೆಕ್ಸಾಂಡರ್ ಪಾರ್ಕ್ಸ್.**
- ಇವತ್ತಿನ ಹಾಗೆ ಅದು ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸಿ ತಯಾರಿಸಿದ ಪ್ಲಾಸ್ಟಿಕ್ ಆಗಿರಲಿಲ್ಲ; ಅದನ್ನು ಸೆಲ್ಯುಲೋಸ್‌ನಿಂದ ಉತ್ಪಾದಿಸಲಾಗಿತ್ತು.
- **ಇವತ್ತು ನಾವು ಬಳಸುವ ಪ್ಲಾಸ್ಟಿಕ್ ಸಂಶೋಧನೆಯಾಗಿದ್ದು 1907ರಲ್ಲಿ. ಲಿಯೋ ಬೇಕಲ್ಯಾಂಡ್ ಎನ್ನುವಾತನು ಮೊದಲಬಾರಿಗೆ ಬ್ಯಾಕೆಲೈಟ್‌ನ್ನು ಪೆಟ್ರೋಕೆಮಿಕಲ್ಸ್ ಬಳಸಿ ತಯಾರಿಸಿದ್ದ.**

- ನವೀನ ಬಗೆಯ ಬೈಯೊಪ್ಲಾಸ್ಟಿಕ್ ಆಗಿರುವ **ಪಿಎಲ್‌ಎ ಪಾಲಿಮರ್‌ನ ಒಂದು ರೂಪ**. ಎಲ್ಲಿಯವರೆಗೆ ಪ್ಲಾಸ್ಟಿಕ್ ಇಷ್ಟೊಂದು ಸಮಸ್ಯೆಗಳನ್ನು ತರಬಲ್ಲದೆನ್ನುವುದು ಗೊತ್ತಾಗಲಿಲ್ಲವೋ ಅಲ್ಲಿಯ ತನಕ ನಮಗೇನೂ ಸಮಸ್ಯೆ ಇರಲಿಲ್ಲ.
- **ಕೃತಕ ಪ್ಲಾಸ್ಟಿಕ್ ಸಮಸ್ಯೆಯಾಗಲು ಮುಖ್ಯ ಕಾರಣ ಇದು ಪೆಟ್ರೋಲಿಯಂ ಉತ್ಪನ್ನ; ಅದರ ರಾಸಾಯನಿಕ ಸಂಯೋಜನೆಯಿಂದಾಗಿ ಬೇಗ ಮಣ್ಣಿನಲ್ಲಿ ಸೇರುವುದಿಲ್ಲ.** ಮಣ್ಣಿಗೆ ಸೇರಬೇಕು, ಗೊಬ್ಬರವಾಗಬೇಕು ಎಂದರೆ ಮೊದಲು ಜೈವಿಕವಾಗಿ ವಿಘಟನೆಯಾಗಬೇಕು. ಹಾಗಾಗಲು ಸೂಕ್ಷ್ಮಜೀವಿಗಳು ಆ ವಸ್ತುವಿನಲ್ಲಿನ ಇಂಗಾಲದ ಪದಾರ್ಥಗಳನ್ನು ಸೇವಿಸುವುದು ಅತ್ಯಗತ್ಯ.
- **ಕೃತಕ ಪ್ಲಾಸ್ಟಿಕ್‌ನಲ್ಲಿ ಕಾರ್ಬನ್ ಇದ್ದರೂ ಅದು ಸುಲಭವಾಗಿ ಸೂಕ್ಷ್ಮಜೀವಾಣುಗಳ ಆಹಾರವಾಗುವುದಿಲ್ಲ.** ಹೀಗಾಗಿ ಅದು ಸಾವಿರಾರು ವರ್ಷಗಳ ಕಾಲ ನಮ್ಮ ನಡುವೆ ತಾಜ್ಯದ ರೂಪದಲ್ಲಿ ಹಾಗೆಯೇ ಉಳಿದುಬಿಡುತ್ತದೆ. ಹೀಗಾಗಿ ಮನುಷ್ಯ ಮತ್ತೆ ಜೈವಿಕ ಪ್ಲಾಸ್ಟಿಕ್‌ಗೆ ಮೊರೆ ಹೋಗುತ್ತಿದ್ದಾನೆ.
- ಹತ್ತೊಂಬತ್ತನೆಯ ಶತಮಾನದಲ್ಲಿ ಅವಿಷ್ಕಾರವಾದ ಸೆಲ್ಯುಲೋಸ್ ಮೂಲದ ಪ್ಲಾಸ್ಟಿಕ್ ಹಾಗೂ ಇಪ್ಪತ್ತೊಂದನೇ ಶತಮಾನದಲ್ಲಿ ಆಸಕ್ತಿ ಮೂಡಿಸಿರುವ ಪಾಲಿ ಲ್ಯಾಕ್ಟಿಕ್ ಆ್ಯಸಿಡ್‌ನಿಂದ ಉತ್ಪಾದನೆಯಾಗುವ ಪ್ಲಾಸ್ಟಿಕ್ – ಎರಡನ್ನೂ ನೋಡಿದಾಗ ನಾವು ಒಂದು ಪರಿಪೂರ್ಣ ವೃತ್ತವನ್ನು ಸುತ್ತಿ ಬಂದಿದ್ದೇವೆ ಎಂದೆನಿಸುತ್ತದೆ.

<u>ಅಪನಂಬಿಕೆಯನ್ನು ಗೆದ್ದ ವೈದ್ಯ</u>

- **ಶಿಮೊನ್ ಸಕಾಗುಚಿ, ಜಪಾನಿನ ಒಸಾಕಾ ವಿಶ್ವವಿದ್ಯಾಲಯದಲ್ಲಿ ಅನ್ವಯಿಕ ರೋಗನಿರೋಧಿ ವಿಜ್ಞಾನ ವಿಭಾಗದಲ್ಲಿ ಪ್ರೊಫೆಸರ್.** ನಲವತ್ತು ವರ್ಷಗಳ ಹಿಂದೆ ಎಲ್ಲರೂ ಕೈ ಬಿಟ್ಟು ನಡೆದಿದ್ದ ವಿಷಯವೊಂದನ್ನು ಬೆಂಬತ್ತಿದವರು. ಅದಕ್ಕಾಗಿ **ಈ ವರ್ಷದ ಶರೀರಕ್ರಿಯೆ ಹಾಗೂ ವೈದ್ಯ ವಿಭಾಗದ ನೊಬೆಲ್ ಪಾರಿತೋಷಕವನ್ನು ಇನ್ನಿಬ್ಬರ ಜೊತೆಗೆ ಹಂಚಿಕೊಂಡರು.**
- ನಮ್ಮ ದೇಹವು ಹೇಗೆ **ತನ್ನ ಹಾಗೂ ಪರಕೀಯ** ಅಂಶಗಳನ್ನು ಗುರುತಿಸಿ, ಕೇವಲ ಪರಕೀಯ ಅಂಶಗಳನ್ನಷ್ಟೆ ಹತ್ತಿಕ್ಕುತ್ತದೆ ಎಂಬುದಕ್ಕೆ ವಿವರಣೆಯನ್ನು ಒದಗಿಸಿದ್ದಕ್ಕಾಗಿ ಅವರಿಗೆ ಈ ಪ್ರಶಸ್ತಿ ಸಂದಿತು.
- ನಲವತ್ತು ವರ್ಷಗಳ ಹಿಂದೆಯೂ ದೇಹದಲ್ಲಿ ಸೋಂಕು ರೋಗಗಳಿಂದ ಕಾಪಾಡುವ ವ್ಯವಸ್ಥೆ ಇದೆ ಎಂಬುದು ಸ್ಪಷ್ಟವಾಗಿತ್ತು. ಅದು ಇರುವುದರಿಂದಲೇ ಸೋಂಕುವ ರೋಗಾಣುಗಳ ಪರಿಚಯವನ್ನು ದೇಹಕ್ಕೆ ನೀಡಿದರೆ ಸಾಕು. ದೇಹ ಅನಂತರ ಅಂತಹ ರೋಗಾಣು ಒಳನುಸುಳಿದ ಕೂಡಲೇ, ಅದನ್ನು ಹತ್ತಿಕ್ಕಬಹುದು ಎನ್ನುವ ಧೈರ್ಯ ಬಂದಿತ್ತು. ಅದಕ್ಕಾಗಿ ಲಸಿಕೆಗಳನ್ನು ಸೃಷ್ಟಿ ಮಾಡಿದ್ದೂ ಆಗಿತ್ತು.
- ಕೋವಿಡ್‌ನಂತಹ ಮಾರಿಯನ್ನು ಕೇವಲ ಲಸಿಕೆಗಳಿಂದಲೇ ಹತ್ತಿಕ್ಕಲಾಗಿತ್ತು. ಇಷ್ಟೆಲ್ಲ ಸಾಧನೆಗಳು ಆಗಿದ್ದರೂ, ಒಂದು ಸಮಸ್ಯೆ ಇದ್ದೇ ಇತ್ತು.
- ದೇಹದ ರೋಗನಿರೋಧಕ ವ್ಯವಸ್ಥೆ ತನ್ನದಲ್ಲದ್ದನ್ನಷ್ಟ ಹೇಗೆ ಹುಡುಕುತ್ತದೆ? ತನ್ನದೇ ಅಂಶಕ್ಕೆ ಏಕೆ ಅಪಾಯ ಮಾಡುವುದಿಲ್ಲ? ಇದು ಪ್ರಶ್ನೆ. ಏಕೆಂದರೆ, ದೇಹ ರೋಗನಿರೋಧಕ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಬಿಳಿರಕ್ತಕೋಶಗಳ ಕೋಟ್ಯಂತರ ರೂಪಗಳನ್ನು ತಯಾರಿಸಿರುತ್ತದೆ. ಇವುಗಳಲ್ಲಿ ನಮ್ಮದೇ ವ್ಯವಸ್ಥೆಯನ್ನು ತಾಕುವ ಕೋಶಗಳೂ ಇರಬಲ್ಲವು. ಹಾಗಿದ್ದೂ, ದೇಹ ಯಾವಾಗಲೂ ಪರಕೀಯ ವಸ್ತುಗಳನ್ನೇ ಹುಡುಕಿ ನಾಶಪಡಿಸುತ್ತದಲ್ಲ? ಅದು ಹೇಗೆ?
- ಈ ಪ್ರಶ್ನೆಯನ್ನು ಕೇಳಲು ಕಾರಣವೂ ಇತ್ತೆನ್ನಿ. ಯಾವುದೇ ಸುವ್ಯವಸ್ಥೆ ಆಗಾಗ ಹದಗೆಡುವಂತೆಯೇ ದೇಹದ ರೋಗನಿರೋಧಕ ಗುಣವೂ ಆಗಾಗ್ಗೆ ಹಾದಿ ತಪ್ಪುತ್ತದೆ. ಅಂತಹ ಸಂದರ್ಭದಲ್ಲಿ ದೇಹ ತನ್ನದೇ ಅಂಗಗಳ ಮೇಲೆ, ಅರ್ಥಾತ್ 'ಬಾಂಧವ'ರ ಮೇಲೆಯೇ ಎರಗುವುದುಂಟು. ಆಟೊ ಇಮ್ಯೂನ್ ಕಾಯಿಲೆಗಳು ಹೀಗೆ ಉಂಟಾಗುತ್ತವೆ. ಮಧುಮೇಹ, ಹೆಂಗಸರಲ್ಲಿ ಗರ್ಭಪಾತವಾಗುವುದು, ಕೆಲವು ಅಂಗಗಳ ಬೆಳವಣಿಗೆ ಕ್ಷೀಣಿಸುವುದು, ಮಯಾಸ್ತೀನಿಯಾ ಗ್ರಾವಿಸ್‌ನಂತಹ ನರರೋಗಗಳು

ಕಾಣಿಸಿಕೊಳ್ಳುತ್ತವೆ. ಇವುಗಳಿಗೆಲ್ಲ ಈಗ ಚಿಕಿತ್ಸೆ ಬಂದಿದೆ. ರೋಗಕ್ಕೆ ಕಾರಣವಾಗುವ ಆ್ಯಂಟಿಬಾಡಿಗಳ ಉತ್ಪಾದನೆಯನ್ನು ಹತ್ತಿಕ್ಕುವ ಔಷಧಗಳು ಇವೆ.

- ಆದರೂ ಒಂದು ಪ್ರಶ್ನೆ ಎಲ್ಲರನ್ನೂ ಕಾಡುತ್ತಿತ್ತು. ಸೋಂಕುಂಟು ಮಾಡುವ ಪರಕೀಯ ಜೀವಿಗಳನ್ನು ಹತ್ತಿಕ್ಕಬೇಕಾದ ರಕ್ಷಕಕೋಶಗಳು ದೇಹದ್ದೇ ಭಾಗಗಳಿಗೆ ತೊಂದರೆ ಕೊಡುವುದು ಏಕೆ? ಇದಕ್ಕೆ ಎರಡು ಕಾರಣಗಳನ್ನು ವಿಜ್ಞಾನಿಗಳು ತರ್ಕಿಸಿದ್ದರು.


**ಮೊದಲನೆಯದು,** ಬಿಳಿರಕ್ತಕೋಶಗಳು ಹುಟ್ಟುವಾಗಲೇ ಅದು ಹೇಗೋ ದೇಹ ಅವುಗಳಲ್ಲಿ ತನ್ನ ಅಂಶಗಳನ್ನು ಗುರುತಿಸುವ ಕೋಶಗಳು ಹುಟ್ಟದಂತೆ ಮಾಡುತ್ತಿರಬೇಕು. ಅಥವಾ ಅಂತಹ ವಿನಾಶಕಾರಿ ಕೋಶಗಳು ಹುಟ್ಟಿದರೂ, ಅವು ಕಾರ್ಯಪ್ರವೃತ್ತವಾಗದಂತೆ ತಡೆಯುತ್ತಿರಬೇಕು. ಆಗ ಸಕಾಗುಚಿ ಕ್ಯೋಟೋ ವಿಶ್ವವಿದ್ಯಾಲಯದಲ್ಲಿ ಸಂಶೋಧಕರಾಗಿ ಸೇರಿದ್ದ ದಿನಗಳು. ಅಲ್ಲಿ ಆ ಹಿಂದೆ ಇದ್ದ ಮತ್ತೊಬ್ಬ ಸಂಶೋಧಕರು ಒಂದು ವಿಶಿಷ್ಟ ಪ್ರಯೋಗವನ್ನು ಮಾಡಿದ್ದರು. ಆಗ ತಾನೇ ಹುಟ್ಟಿದ ಇಲಿಗಳ ಥೈಮಸ್ ಗ್ರಂಥಿಗಳನ್ನು ಕಿತ್ತೊಗೆದು ಏನಾಗುತ್ತದೆ ಎಂದು ಪರೀಕ್ಷಿಸಿದ್ದರು. ಥೈಮಸ್ ಗ್ರಂಥಿ ಬಿಳಿ ರಕ್ತಕೋಶಗಳು ಬೆಳೆಯುವ ಸ್ಥಳ; ತರಬೇತಿ ಕೇಂದ್ರ ಎನ್ನಿ! ಹೀಗೆ ಹುಟ್ಟಿದ ಇಲಿಮರಿಗಳು ಎಲ್ಲ ಸೋಂಕಿಗೂ ಬಲಿಯಾಗುತ್ತಿದ್ದುವು. ಅವುಗಳಲ್ಲಿ ರೋಗ ನಿರೋಧಕಶಕ್ತಿ ಇರಲೇ ಇಲ್ಲ; ಬಿಳಿರಕ್ತಕಣಗಳೂ ಕಾಣಿಸಲಿಲ್ಲ.

**ಮತ್ತೊಂದು** ಪ್ರಯೋಗದಲ್ಲಿ ಮರಿಗಳು ಹುಟ್ಟಿದ ಮೂರು ದಿನದ ನಂತರ ಥೈಮಸ್ ಗ್ರಂಥಿಯನ್ನು ಕಿತ್ತೊಗೆದರು. ಇಂಥವುಗಳಲ್ಲಿಯೂ ರೋಗ ನಿರೋಧಕಶಕ್ತಿ ಕುಗ್ಗಬೇಕಿತ್ತು. ಬದಲಿಗೆ, ಅವುಗಳಲ್ಲಿ ಆಟೊ ಇಮ್ಯೂನ್ ಕಾಯಿಲೆಗಳು ಕಂಡವು. ಕೆಲವು ಇಲಿಗಳ ಥೈರಾಯಿಡ್ ಗ್ರಂಥಿ ಬೆಳೆಯಲೇ ಇಲ್ಲ. ಇನ್ನು ಹೆಣ್ಣುಮರಿಗಳಲ್ಲಿ ಗರ್ಭಾಶಯ ಕ್ಷೀಣವಾಗುತ್ತ ಹೋಯಿತು. ಅರ್ಥಾತ್, ರೋಗ ನಿರೋಧಕತೆ ಇತ್ತು. ಆದರೆ ಸ್ವಂತದ್ದನ್ನೂ ಗುರುತಿಸುತ್ತಿತ್ತು. ಅಂದರೆ ಸ್ವಂತದ್ದನ್ನು ಗುರುತಿಸುವ ಶಕ್ತಿ ಸಹಜವಾಗಿಯೇ ಇರುತ್ತದೆ. ಆದರೆ ಕುಗ್ಗಿರುತ್ತದೆ. ಆ ನಿಯಂತ್ರಣ ತಪ್ಪಿದಾಗ ಆಟೋ ಇಮ್ಯೂನ್ ಕಾಯಿಲೆಗಳು ಉಂಟಾಗುತ್ತವೆ. ಈ ಪ್ರಯೋಗಗಳನ್ನು ಇನ್ನೂ ಹಲವರು ಮಾಡಿದರು. ಆದರೆ ಖಚಿತವಾಗಿ ಹೀಗೇ ಅಗುತ್ತಿದೆ ಎಂದು ನಿರೂಪಿಸಲು ಯಾರಿಂದಲೂ ಆಗಿರಲಿಲ್ಲ. ಹೀಗಾಗಿ ಎಲ್ಲರೂ ಥೈಮಸ್ ಗ್ರಂಥಿಯಲ್ಲಿ ಸ್ವಂತ ಪತ್ತೆ ಮಾಡುವ ಕೋಶಗಳು ಹುಟ್ಟುತ್ತಲೇ ಇಲ್ಲ ಎಂದು ತೀರ್ಮಾನಿಸಿ, ಪ್ರಯೋಗಗಳನ್ನು ಕೈಚೆಲ್ಲಿಬಿಟ್ಟಿದ್ದರು.

- ಸಕಾಗುಚಿಯ ಪ್ರಯೋಗಗಳು ಆರಂಭವಾಗಿದ್ದು ಈ ಸಂದರ್ಭದಲ್ಲಿ. ಇದೇ ಥೈಮಸ್ ಕಿತ್ತ ಇಲಿಗಳ ಪ್ರಯೋಗವನ್ನು ಮತ್ತೊಮ್ಮೆ ಮುಂದುವರೆಸಿದ ಸಕಾಗುಚಿ, ಒಂದು ಸಣ್ಣ ಬದಲಾವಣೆಯನ್ನು ಮಾಡಿದರು. ಹುಟ್ಟಿದ ತಕ್ಷಣವೇ ಥೈಮಸ್ ಗ್ರಂಥಿಯನ್ನು ತೆಗೆದ ಹಾಗೂ ಮೂರು ದಿನಗಳ ನಂತರ ಥೈಮಸ್ ಗ್ರಂಥಿಯನ್ನು ಕಿತ್ತ ಇಲಿಮರಿಗಳಿಗೆ, ಬೇರೆ ಇಲಿಗಳಿಂದ ಹೆಕ್ಕಿದ ಬಿಳಿರಕ್ತಕೋಶಗಳನ್ನು ಚುಚ್ಚಿದ.
- ಥೈಮಸ್ ಗ್ರಂಥಿಯನ್ನು ಆರಂಭದಲ್ಲಿಯೇ ಕಿತ್ತೊಗೆದ ಇಲಿಗಳಲ್ಲಿ ಏನೂ ಬದಲಾವಣೆ ಕಾಣಲಿಲ್ಲ. ಆದರೆ ಮೂರು ದಿನಗಳ ನಂತರ ಕಿತ್ತೊಗೆದವುಗಳಲ್ಲಿ ಯಾವುದೇ ಆಟೊ ಇಮ್ಯೂನ್ ಕಾಯಿಲೆಗಳು ತೋರಲಿಲ್ಲ. ಜೊತೆಗೆ ಅವುಗಳ ರಕ್ತದಲ್ಲಿ ಬಿಳಿರಕ್ತಕೋಶಗಳ ಸಂಖ್ಯೆ ಹಾಗೂ ವೈವಿಧ್ಯವೂ ಎಂದಿನಂತೆ ಇತ್ತು. ಥೈಮಸ್ ಗ್ರಂಥಿಯಲ್ಲಿ ಸ್ವಂತ ನಾಶಕಕೋಶಗಳು ಹುಟ್ಟುತ್ತವೆ. ಆದರೆ ಅವು ಕೆಲಸ ಮಾಡದಂತೆ ಏನೋ ತಡೆಯುತ್ತದೆ ಎಂಬುದು ಸ್ಪಷ್ಟವಾಯಿತು. ತದನಂತರ ಈ ಕೋಶಗಳ ಸ್ವರೂಪವೂ ಬಯಲಾಯಿತು.
- ಹೀಗೆ ಥೈಮಸ್ ಕೋಶಗಳು ಅಥವಾ ಟಿ-ಕೋಶಗಳು ಎನ್ನುವ ಜೀವಕೋಶಗಳ ಪತ್ತೆಯಾಯಿತು. ಅವುಗಳಲ್ಲಿ ಇರುವ ವೈವಿಧ್ಯವೂ ಪತ್ತೆಯಾಯಿತು. ಅವುಗಳಲ್ಲಿ ಒಂದು ಬಗೆ (ಸಪ್ರೆಸರ್ ಟಿ-ಕೋಶಗಳು) ದೇಹದ ರೋಗನಿರೋಧಕ ವ್ಯವಸ್ಥೆಯನ್ನು ಹದ್ದುಬಸ್ತಿನಲ್ಲಿ ಇಡುತ್ತವೆ ಎಂಬುದೂ ಸ್ಪಷ್ಟವಾಯಿತು. ಈ ಎಲ್ಲ ಅಂಶಗಳೂ ಸ್ಪಷ್ಟವಾಗುವುದಕ್ಕೆ ಎಲ್ಲರೂ ಕೈಬಿಟ್ಟ ಪ್ರಯೋಗಗಳನ್ನು, ತತ್ವಗಳನ್ನು ಮರುಪರಿಶೀಲಿಸುವ ಸಾಹಸ ಮಾಡಿದ ಸಕಾಗುಚಿಯ ಸಂಶೋಧನೆಗಳು ಕಾರಣವಾದವು.

## ❖ ಮಹದಾಯಿ ಹೊರಗಿಟ್ಟು ಅಭಯಾರಣ್ಯ: ಹುಲಿ ಅಭಯಾರಣ್ಯ ಸ್ಥಾಪನೆ: ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿದ ಕೇಂದ್ರ ಉನ್ನತಾಧಿಕಾರ ಸಮಿತಿ.

**ಸಂದರ್ಭ: ಮಹದಾಯಿ ವನ್ಯಜೀವಿ ಧಾಮವನ್ನು ಹೊರಗಿಟ್ಟು ನಾಲ್ಕು ವನ್ಯಜೀವಿಧಾಮಗಳನ್ನು ಸೇರಿಸಿ ಗೋವಾ ಹುಲಿ ಅಭಯಾರಣ್ಯ ಸ್ಥಾಪಿಸಬೇಕು ಎಂದು ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಶಿಫಾರಸು ಮಾಡಿದೆ.**



| ಗೋವಾ ಹುಲಿ ಅಭಯಾರಣ್ಯ ಸ್ವರೂಪ | |
|---|---|
| ಸಂರಕ್ಷಿತ ಪ್ರದೇಶ | ಒಟ್ಟು ವಿಸ್ತೀರ್ಣ (ಚದರ ಕಿ.ಮೀ) |
| ನೇತ್ರಾವಳಿ ವನ್ಯಜೀವಿಧಾಮ | 211 |
| ಕೋಟಿಗಾಂವ್ ವನ್ಯಜೀವಿಧಾಮ | 85.65 |
| ಭಗವಾನ್ ಮಹಾವೀರ ವನ್ಯಜೀವಿಧಾಮ | 64.90 |
| ಭಗವಾನ್ ಮಹಾವೀರ ರಾಷ್ಟ್ರೀಯ ಉದ್ಯಾನ | 107 |

* ನೇತ್ರಾವಳಿ ಹಾಗೂ ಕೋಟಿಗಾಂವ್‌ನ 296.70 ಚ.ಕಿ.ಮೀ.ಯನ್ನು ಹುಲಿ ಅಭಯಾರಣ್ಯದ ಕೇಂದ್ರ ಭಾಗ ಗುರುತಿಸಬೇಕು.
* ಭಗವಾನ್ ಮಹಾವೀರ ರಾಷ್ಟ್ರೀಯ ಉದ್ಯಾನ ಹಾಗೂ ವನ್ಯಜೀವಿಧಾಮದ 171.90 ಚ.ಕಿ.ಮೀ.ಯನ್ನು ಬಫರ್ ಪ್ರದೇಶವೆಂದು ಘೋಷಿಸಬೇಕು.

- ಮಹದಾಯಿ-ಕೋಟಿಗಾಂವ್ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆ ಅಥವಾ ಯೋಜನೆಗಳನ್ನು ಕೈಗೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಸೆಪ್ಟೆಂಬರ್‌ನಲ್ಲಿ ನಿರ್ದೇಶನ ನೀಡಿತ್ತು.
- ಮಹದಾಯಿ ವನ್ಯಜೀವಿ ಅಭಯಾರಣ್ಯ ಮತ್ತು ಪಕ್ಕದ ಪ್ರದೇಶಗಳನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಅಧಿಸೂಚನೆ ಹೊರಡಿಸುವ ಸಂಬಂಧ ಆರು ವಾರಗಳಲ್ಲಿ ಸಿಇಸಿ ವರದಿ ಸಲ್ಲಿಸಬೇಕು ಎಂದು ಪೀಠ ನಿರ್ದೇಶಿಸಿತ್ತು.
- ಸಮಿತಿಯು 279 ಪುಟಗಳ ವರದಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದೆ. ಗೋವಾ ಹುಲಿ ಅಭಯಾರಣ್ಯ ಸ್ಥಾಪಿಸಿ ಗೋವಾ ಸರ್ಕಾರ ಮೂರು ತಿಂಗಳಲ್ಲಿ ಅಧಿಸೂಚನೆ ಹೊರಡಿಸಬೇಕು ಎಂದೂ ಸಿಇಸಿ ಶಿಫಾರಸು ಮಾಡಿದೆ.
- ಅಧಿಕ ಸಂಖ್ಯೆಯ ಮನೆಗಳು ಇರುವ ಭಗವಾನ್ ಮಹಾವೀರ ವನ್ಯಜೀವಿ ಧಾಮದ ದಕ್ಷಿಣ ಭಾಗ (ಸುಮಾರು 560 ಮನೆಗಳು) ಹಾಗೂ ಮಹದಾಯಿ ವನ್ಯಜೀವಿಧಾಮವನ್ನು (ಸುಮಾರು 612 ಮನೆಗಳು) ಹುಲಿ ಅಭಯಾರಣ್ಯದ ವ್ಯಾಪ್ತಿಗೆ ಸೇರಿಸಿಲ್ಲ. ಈ ಪ್ರದೇಶಗಳನ್ನು ಸೇರಿಸುವ ಮುನ್ನ ನಿರಂತರ ಜಾಗೃತಿ ಮೂಡಿಸಿ ವಿಸ್ತೃತ ಸಮುದಾಯ ಸಮಾಲೋಚನೆಗಳನ್ನು ನಡೆಸುವ ಅಗತ್ಯ ಇದೆ ಎಂದು ಸಮಿತಿ ಸ್ಪಷ್ಟಪಡಿಸಿದೆ.
- ಮಹದಾಯಿ ವನ್ಯಜೀವಿಧಾಮ ಹಾಗೂ ಆಸುಪಾಸಿನ ಪ್ರದೇಶಗಳನ್ನು ‘ಹುಲಿ ಅಭಯಾರಣ್ಯ’ವೆಂದು ಘೋಷಿಸಲು 3 ತಿಂಗಳಲ್ಲಿ ಅಧಿಸೂಚನೆ ಹೊರಡಿಸಬೇಕು ಎಂದು ಬಾಂಬೆ ಹೈಕೋರ್ಟ್‌ನ ಗೋವಾ ಪೀಠವು ಗೋವಾ ಸರ್ಕಾರಕ್ಕೆ 2023ರಲ್ಲಿ ನಿರ್ದೇಶನ ನೀಡಿತ್ತು.
- ವನ್ಯಜೀವಿಧಾಮದ ಸಮೀಪ ಜನ ವಸತಿಗಳಿವೆ ಎಂಬ ಕಾರಣಕ್ಕೆ ಮೀಸಲು ಅರಣ್ಯವಾಗಿ ಘೋಷಿಸಲು ಗೋವಾ ಸರ್ಕಾರ ವಿರೋಧ ವ್ಯಕ್ತಪಡಿಸಿತ್ತು.

### ಸಿಇಸಿ ಶಿಫಾರಸುಗಳೇನು?

- ಗೋವಾ ಹುಲಿ ಅಭಯಾರಣ್ಯ ಸ್ಥಾಪನೆಗೆ ಅಧಿಸೂಚನೆ ಹೊರಡಿಸಿದ ಕೂಡಲೇ ಹುಲಿ ಸಂರಕ್ಷಣಾ ಯೋಜನೆ ರೂಪಿಸಬೇಕು.
- ಕಾಳಿ ಹುಲಿ ಮೀಸಲು ಪ್ರದೇಶದೊಂದಿಗೆ ಆವಾಸಸ್ಥಾನವನ್ನು ಬಲಪಡಿಸಬೇಕು.
- ಮೂಲಸೌಕರ್ಯ, ಗಣಿ ಹಾಗೂ ಇತರ ಅಭಿವೃದ್ಧಿ ಚಟುವಟಿಕೆಗಳ ಕಡಿವಾಣಕ್ಕೆ ನಿಗಾ ವಹಿಸಬೇಕು.

### ‘ಶಿಫಾರಸಿನಲ್ಲಿ ಲೋಪ’

- ಭಗವಾನ್ ಮಹಾವೀರ್ ಅಭಯಾರಣ್ಯ ಹಾಗೂ ರಾಷ್ಟ್ರೀಯ ಉದ್ಯಾನ ಪ್ರದೇಶವನ್ನು ಬಫರ್ ಎಂದು ಅಧಿಸೂಚನೆ ಹೊರಡಿಸಲು ಮಾಡಿರುವ ಶಿಫಾರಸಿನಲ್ಲಿ ಲೋಪವಿದೆ.
- ಇದೇ ಅಧಿಸೂಚನೆಯಾದಲ್ಲಿ ವನ್ಯಜೀವಿಗಳಿಗೆ ಮಾರಕವಾಗುವ ಯೋಜನೆ ಜಾರಿಯಾಗಬಹುದು. ‘ಮಹದಾಯಿ’ಯನ್ನು ಹುಲಿ ಮೀಸಲು ವ್ಯಾಪ್ತಿಯಿಂದ ಕೈಬಿಟ್ಟಿದ್ದು ಆಶ್ಚರ್ಯ ತರಿಸಿದೆ.

## ❖ ಸದಾಶಯದ ಕಾರ್ಮಿಕ ಸಂಹಿತೆಗಳು ಚರ್ಚೆಯ ಮೂಲಕ ಒಮ್ಮತ ಮೂಡಲಿ

**ಸಂದರ್ಭ: ಕೇಂದ್ರ ಸರ್ಕಾರ ಹೊಸತಾಗಿ ಅನುಷ್ಠಾನಕ್ಕೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳು, ದೇಶದ ಕಾರ್ಮಿಕ ವಲಯದ ಇತಿಹಾಸದಲ್ಲಿ ಮಾತ್ರವಲ್ಲದೆ, ಆರ್ಥಿಕತೆ ಬೆಳವಣಿಗೆಗೆ ಸಂಬಂಧಿಸಿದಂತೆಯೂ ಮಹತ್ವದ್ದಾಗಿವೆ. ವೇತನ, ಕೈಗಾರಿಕಾ ಸಂಬಂಧ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಹಾಗೂ ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ ಹೊಸ ಸಂಹಿತೆಗಳನ್ನು 'ಚಾರಿತ್ರಿಕ' ಎಂದು ಸರ್ಕಾರ ಬಣ್ಣಿಸಿದೆ.**

- ಕಾರ್ಮಿಕರು ಮತ್ತು ಕೈಗಾರಿಕೆಗಳಿಗೆ ಸಂಬಂಧಿಸಿದ 29 ಕಾರ್ಮಿಕ ಕಾನೂನುಗಳನ್ನು ಒಟ್ಟುಗೂಡಿಸಿ ಹೊಸ ಸಂಹಿತೆಗಳಲ್ಲಿ ಅಡಕಗೊಳಿಸಲಾಗಿದೆ; 1,228 ಸೆಕ್ಷನ್‌ಗಳನ್ನು 480ಕ್ಕೆ ಹಾಗೂ 1,436 ನಿಯಮಗಳನ್ನು 351ಕ್ಕೆ ಇಳಿಸಲಾಗಿದೆ; 65 ವಿಭಾಗಗಳಿಗೆ ಸಂಬಂಧಿಸಿದ ಅಪರಾಧೀಕರಣವನ್ನು ತೆಗೆದುಹಾಕಲಾಗಿದೆ.
- ಕಾರ್ಮಿಕ ಕಾನೂನುಗಳಿಗೆ ಸಂಬಂಧಿಸಿದ ಈ ವ್ಯಾಪಕ ಪರಿಷ್ಕರಣೆ ಬಹಳ ಕಾಲದ ಹಿಂದೆಯೇ ನಡೆಯಬೇಕಾಗಿತ್ತು. ಕೆಲವು ಕಾನೂನುಗಳು ನಿರ್ಬಂಧಿತವಾಗಿದ್ದವು ಹಾಗೂ ನಮ್ಯತೆಯ ಕೊರತೆಯನ್ನು ಹೊಂದಿದ್ದವು.
- ಕಾರ್ಮಿಕ ಮತ್ತು ಬಂಡವಾಳ ಮಾರುಕಟ್ಟೆಗೆ ಸಂಬಂಧಿಸಿದ ವಸ್ತುಸ್ಥಿತಿಗೆ ಸ್ಪಂದಿಸುವಲ್ಲಿ ಇರುವ ಕೊರತೆಗೆ ಸಂಬಂಧಿಸಿದಂತೆಯೂ ಟೀಕೆಗಳು ವ್ಯಕ್ತವಾಗಿದ್ದವು. ಪ್ರಸ್ತುತ ಸುಧಾರಣೆಗಳ ಉದ್ದೇಶಗಳನ್ನು ಮೂರು ಆಯಾಮಗಳಲ್ಲಿ ಗುರ್ತಿಸಬಹುದಾಗಿದೆ: ಪ್ರಸ್ತುತ ಇರುವ ಚೌಕಟ್ಟಿನ ಸರಳೀಕರಣ, ಕಾರ್ಮಿಕರ ಉದ್ಯೋಗದಲ್ಲಿ ಔಪಚಾರಿಕತೆಯನ್ನು ತರುವುದು ಹಾಗೂ ಕಾರ್ಮಿಕರ ಸ್ಥಿತಿಗತಿ ನಿಭಾಯಿಸಲು ಉದ್ಯೋಗದಾತರಿಗೆ ಹೆಚ್ಚಿನ ನಮ್ಯತೆ ಕಲ್ಪಿಸುವುದು. ಸ್ವಾತಂತ್ರ್ಯಾನಂತರ ತರಲಾಗಿರುವ ಅತ್ಯಂತ ಸಮಗ್ರ ಕಾರ್ಮಿಕ ಕಾನೂನುಗಳ ಸುಧಾರಣೆ ಇದಾಗಿದೆ.
- ಹೊಸ ಸಂಹಿತೆಗಳು ಗಿಗ್ ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲಿವೆ. ಮಹಿಳೆಯರ ಮೇಲಿನ ನ್ಯಾಯಯುತವಲ್ಲದ ನಿರ್ಬಂಧಗಳನ್ನು ತೆಗೆದುಹಾಕಲಿವೆ ಹಾಗೂ ಅಂತರರಾಜ್ಯ ಕಾರ್ಮಿಕರಿಗೆ ಸೌಲಭ್ಯಗಳ ವರ್ಗಾವಣೆಯನ್ನು ಸಾಧ್ಯಗೊಳಿಸುತ್ತವೆ.
- ಕಾಲಕ್ಕೆ ಸರಿಯಾಗಿ ಕನಿಷ್ಠ ವೇತನ ಪಾವತಿ, ಎಲ್ಲ ಹೊಸ ನೌಕರರಿಗೆ ನೇಮಕಾತಿ ಪತ್ರ, ಮಹಿಳೆಯರಿಗೆ ಸಮಾನವೇತನ, ಒಂಬತ್ತು ವರ್ಷಗಳ ನಂತರ ಕಾಯಂ ನೌಕರರಿಗೆ ಗ್ರಾಚ್ಯುಯಿಟಿ, ನಲವತ್ತು ವರ್ಷಗಳಿಗೂ ಹೆಚ್ಚಿನ ವಯಸ್ಸಿನ ಎಲ್ಲ ನೌಕರರಿಗೆ ವಾರ್ಷಿಕ ಆರೋಗ್ಯ ತಪಾಸಣೆ ಹಾಗೂ ಹೆಚ್ಚಿನ ಅವಧಿಯ ದುಡಿಮೆಗೆ ದುಪ್ಪಟ್ಟು ವೇತನವನ್ನು ಕಡ್ಡಾಯಗೊಳಿಸಲಿವೆ.
- ಹೊಸ ಸಂಹಿತೆಗಳು ಪಾರದರ್ಶಕತೆಯ ಕಡೆಗೆ ಮುನ್ನಡೆಯುವ ಪ್ರಯತ್ನವಾಗಿವೆ. ಗಿಗ್ ಮತ್ತು ಪ್ಲಾಟ್‌ಫಾರ್ಮ್ ನೌಕರರನ್ನು ಸಾಮಾಜಿಕ ಭದ್ರತೆಯೊಳಗೆ ಗುರ್ತಿಸುವುದು ಬಹುಮುಖ್ಯವಾದ ರಚನಾತ್ಮಕ ಬದಲಾವಣೆಯಾಗಿದೆ.
- ಹಾಗೆಯೇ ಮಹಿಳೆಯರ ಉದ್ಯೋಗ ಸ್ಥಿತಿಗತಿಯಲ್ಲಿ ಸುಧಾರಣೆ ಮತ್ತು ಸಮಾನತೆ ತರುವ ಮೂಲಕ ಕಾರ್ಮಿಕ ಸಂಪನ್ಮೂಲದಲ್ಲಿ ಅವರ ಭಾಗವಹಿಸುವಿಕೆಯನ್ನು ವಿಸ್ತರಿಸುವ ಸಾಧ್ಯತೆ ಈಗ ಕಾನೂನುಬದ್ಧ ಆಗಿದೆ.
- ಬಹುತೇಕ ಕಾರ್ಮಿಕ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳು ಹೊಸ ಸುಧಾರಣೆಗಳನ್ನು ಕಾರ್ಮಿಕ ವಿರೋಧಿ ಎಂದು ಟೀಕಿಸಿ, ತೀವ್ರ ವಿರೋಧ ವ್ಯಕ್ತಪಡಿಸಿವೆ.
- ಹೊಸ ನಿಯಮಗಳ ಅನ್ವಯ 300 ಕಾರ್ಮಿಕರನ್ನು ಹೊಂದಿರುವ ಕಂಪನಿಗಳು ಸರ್ಕಾರದ ಅನುಮತಿ ಇಲ್ಲದೆಯೇ ಆ ಕಾರ್ಮಿಕರನ್ನು ಸಾಮೂಹಿಕವಾಗಿ ಕೆಲಸದಿಂದ ವಜಾ ಮಾಡಬಹುದು ಅಥವಾ ಕಂಪನಿಯನ್ನೇ ಮುಚ್ಚಬಹುದು. ಈ ಮೊದಲು 100 ಕಾರ್ಮಿಕರಿಗೆ ಈ ನಿಯಮ ಸೀಮಿತವಾಗಿತ್ತು.
- ಹೊಸ ನಿಯಮವು ಉದ್ಯೋಗದಾತರ ಪರವಾಗಿದ್ದು, ಕಾರ್ಮಿಕರ ಉದ್ಯೋಗ ಭದ್ರತೆಗೆ ಕೊಡಲಿಪೆಟ್ಟು ನೀಡುತ್ತದೆ ಎಂದು ಕಾರ್ಮಿಕ ಸಂಘಗಳು ಹೇಳಿವೆ.

- ಸವಲತ್ತುಗಳನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಕಾರ್ಮಿಕರ ಸಂಘಟಿತ ಮಾತುಕತೆಯ ಶಕ್ತಿಯನ್ನು ದುರ್ಬಲಗೊಳಿಸಿ, ಉದ್ಯೋಗದಾತರಿಗೆ ಹೆಚ್ಚಿನ ಅಧಿಕಾರ ಕೊಡುತ್ತವೆ ಎನ್ನುವ ಟೀಕೆಯೂ ಇದೆ.
- ಕಾರ್ಮಿಕರ ವಿಷಯವು ಸಮವರ್ತಿ ಪಟ್ಟಿಯಲ್ಲಿರುವ ಕಾರಣ, ರಾಜ್ಯ ಸರ್ಕಾರಗಳು ಸಹ ಈ ನಿಯಮ ರೂಪಿಸಿ ಅಧಿಸೂಚನೆ ಪ್ರಕಟಿಸಬೇಕಿದೆ. ಹೊಸ ಸಂಹಿತೆಗಳನ್ನು ಅನುಷ್ಠಾನಗೊಳಿಸುವ ಹೊಣೆ ರಾಜ್ಯಗಳ ಮೇಲೆ ಅವಲಂಬಿತ ಆಗಿರುವುದರಿಂದ, ಅಸಮಾನ ಅಳವಡಿಕೆ ಆಗುವ ಆತಂಕವೂ ಇದೆ.
- ಹೊಸ ಸಂಹಿತೆಗಳ ವ್ಯಾಪ್ತಿಗೆ ಬರುವ ಶಾಸನಗಳನ್ನು ಈಗಾಗಲೇ ಕೆಲವು ರಾಜ್ಯಗಳು ಹೊಂದಿವೆ. ಪರಿಷ್ಕರಣೆಗೆ ಮೊದಲು, ಕೇಂದ್ರ ಸರ್ಕಾರ ಮತ್ತು ವಿವಿಧ ಪಕ್ಷಗಳ ನಡುವೆ ಸಾಕಷ್ಟು ಚರ್ಚೆಗಳೂ ನಡೆದಿಲ್ಲ. ನಾಲ್ಕರಲ್ಲಿ ಮೂರು ಸಂಹಿತೆಗಳನ್ನು ಕೋವಿಡ್ ಪಿಡುಗಿನ ಸಂದರ್ಭದಲ್ಲಿ, ಚರ್ಚೆಗಳು ಸ್ಥಗಿತಗೊಂಡಿದ್ದ ಸಂದರ್ಭದಲ್ಲಿ, ಸಂಸತ್ತು ಅಂಗೀಕರಿಸಿತ್ತು.
- ಈಗ ಪ್ರಕಟಿಸಿರುವ ಸಂಹಿತೆಗಳಲ್ಲಿನ ನಿಯಮಗಳನ್ನು ಅಂತಿಮಗೊಳಿಸುವ ಮೊದಲು ಎಲ್ಲ ಪಾಲುದಾರರೊಂದಿಗೆ ಚರ್ಚೆಗಳನ್ನು ನಡೆಸಬೇಕಾಗಿದೆ. ಮಾತುಕತೆಗಳ ಮೂಲಕವೇ ಸದ್ಯದ ಆತಂಕಗಳನ್ನು ಪರಿಹರಿಸಬೇಕಾಗಿದೆ.






ಸ್ವತಂತ್ರ ಭಾರತಕ್ಕೆ ಸಂವಿಧಾನವನ್ನು ರೂಪಿಸಲು ರಚನಾ ಸಭೆ ಸ್ಥಾಪನೆಯಾಗಿದ್ದು 1946ರಲ್ಲಿ. ಡಾ.ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ನೂರಾರು ಮಂದಿ ಸುಮಾರು ಮೂರು ವರ್ಷ ಶ್ರಮಿಸಿ ಸಂವಿಧಾನ ರೂಪಿಸಿದರು. ಸಂವಿಧಾನ ರಚನಾ ಸಭೆಯು 1949ರ ನ.26ರಂದು ಸಂವಿಧಾನವನ್ನು ಅಂಗೀಕರಿಸಿತು. ದೇಶದಲ್ಲಿ ಸಂವಿಧಾನವು 1950 ಜ.26ರಂದು ಜಾರಿಗೆ ಬಂತು. ಸಂವಿಧಾನ ರಚನೆಯ ವೇಳೆ ಅಮೆರಿಕ, ಬ್ರಿಟನ್, ಐರ್ಲೆಂಡ್‌ನ ಸಂವಿಧಾನದ ಕೆಲವು ಅಂಶಗಳು, ಗಾಂಧಿ ತತ್ವಗಳಿಂದಲೂ ಪ್ರೇರಣೆ ಪಡೆಯಲಾಗಿದೆ. ಭಾರತದ ಸಂವಿಧಾನವು ಜಗತ್ತಿನಲ್ಲಿಯೇ ಅತ್ಯಂತ ವಿಶಿಷ್ಟ ಸ್ಥಾನ ಪಡೆದಿದ್ದು, ಹಲವು ದಾಖಲೆಗಳಿಗೆ ಪಾತ್ರವಾಗಿದೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ತಿದ್ದುಪಡಿಗಳಾಗಿರುವ ಸಂವಿಧಾನ ಎನ್ನುವ ವಿಶೇಷತೆಯೂ ನಮ್ಮ ಸಂವಿಧಾನಕ್ಕಿದೆ. ಭಾರತದಂತಹ ನೂರಾರು ಜಾತಿ, ಹತ್ತಾರು ಧರ್ಮ, ವೈವಿಧ್ಯಮಯವಾದ ಸಂಸ್ಕೃತಿ, ಆಚರಣೆಗಳಿಂದ ಕೂಡಿರುವ ದೇಶಕ್ಕೆ ಸಂವಿಧಾನವನ್ನು ರೂಪಿಸುವುದು ಅತ್ಯಂತ ಸವಾಲಿನ ಕೆಲಸವಾಗಿತ್ತು. ಭಾರತವು ಇಂದು ಜಾಗತಿಕ ಮಟ್ಟದಲ್ಲಿ ಗಮನಾರ್ಹ ಸ್ಥಾನ ಪಡೆದಿದ್ದರೆ, ಅದಕ್ಕೆ ಕಾರಣ, ನಮ್ಮ ಸಶಕ್ತವಾದ ಸಂವಿಧಾನ. ಅದು ದೇಶದ ಆಡಳಿತ ಮತ್ತು ಜನರ ಚಿಂತನೆಯ ಚಾಲಕಶಕ್ತಿಯಾಗಿದೆ

## ಜಗತ್ತಿನಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಭಾರತದ ಸಂವಿಧಾನ

# ಭಾರತದ ಪ್ರಜೆಗಳಾದ ನಾವು...

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

**ಇಂದು ಸಂವಿಧಾನ ದಿನ**

### ಸಂವಿಧಾನ ರಚನಾ ಸಭೆ

ದೇಶದ ಸಂವಿಧಾನ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದು ಸಂವಿಧಾನ ರಚನಾ ಸಭೆ.

ದೇಶವು ಸ್ವತಂತ್ರಗೊಂಡ ನಂತರ ಸರ್ಕಾರ, ಆಡಳಿತ, ಜನಜೀವನಕ್ಕೆ ಮಾರ್ಗದರ್ಶನ ಮಾಡುವ ದಿಸೆಯಲ್ಲಿ ಸಂವಿಧಾನವೊಂದರ ಅಗತ್ಯವಿದೆ ಎಂಬುದು ಭಾರತ ಸ್ವಾತಂತ್ರ್ಯ ಪಡೆಯುವ ಹಾದಿಯಲ್ಲಿದ್ದಾಗ ರಾಷ್ಟ್ರ ನಾಯಕರಿಗೆ ಮನವರಿಕೆ ಆಯಿತು. ಆದಕ್ಕಾಗಿ 1946ರಲ್ಲಿ ಸಂವಿಧಾನ ರಚನಾ ಸಭೆಯನ್ನು ಸ್ಥಾಪಿಸಲಾಯಿತು. ಪರೋಕ್ಷ ಚುನಾವಣೆಯ ಮೂಲಕ ಆಯ್ಕೆಯಾದ ಪ್ರಾಂತೀಯ ಶಾಸನಸಭೆಗಳ ಸದಸ್ಯರನ್ನು ಸೇರಿಸಿ ಈ ರಚನಾ ಸಭೆಯನ್ನು ರೂಪಿಸಲಾಯಿತು. ಡಿ.9ರಂದು ಮೊದಲ ಅಧಿವೇಶನ ನಡೆಯಿತು. ಆಗ ಇದರಲ್ಲಿದ್ದ ಒಟ್ಟು ಸದಸ್ಯರ ಸಂಖ್ಯೆ 389. ದೇಶ ವಿಭಜನೆಯ (1947) ನಂತರ ಈ ಸಂಖ್ಯೆ 299ಕ್ಕೆ ಇಳಿಯಿತು.

ಡಾ.ಸಚ್ಚಿದಾನಂದ ಸಿನ್ಹಾ ಅವರು ಸಂವಿಧಾನ ರಚನಾ ಸಭೆಯ ಮೊದಲ ಅಧ್ಯಕ್ಷ. ನಂತರ ಡಾ.ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷರಾದರು. ಸಂವಿಧಾನದಲ್ಲಿರುವ ಪ್ರತಿ ಕಲಂ ಬಗ್ಗೆಯೂ ಸಂವಿಧಾನ ರಚನಾ ಸಭೆಯ ಸದಸ್ಯರು ಚರ್ಚೆ ಮಾಡಿದ್ದರು. ಸಂವಿಧಾನವನ್ನು ರೂಪಿಸುವ ಅವಧಿಯಲ್ಲಿ ರಚನಾ ಸಭೆಯ 11 ಅಧಿವೇಶನಗಳು ನಡೆದಿದ್ದು, ಒಟ್ಟು 167 ದಿನ ಚರ್ಚೆ ನಡೆದಿತ್ತು.



### ಡಾ.ಬಿ.ಆರ್.ಅಂಬೇಡ್ಕರ್ ಮಹತ್ವ

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಗೆ ಮುಂಬೈ ಪ್ರಾಂತ್ಯದಿಂದ ಸ್ಪರ್ಧಿಸಿದರೂ ಯಶಸ್ವಿಯಾಗಲಿಲ್ಲ. ನಂತರ ಬಂಗಾಳದಿಂದ ಆಯ್ಕೆಯಾದರು. ಆದರೆ, ದೇಶ ವಿಭಜನೆಯ ನಂತರ ತಮ್ಮ ಸ್ಥಾನ ಕಳೆದುಕೊಂಡರು. ಆದಾಗ್ಯೂ, ಕಾಂಗ್ರೆಸ್ ಪಕ್ಷವು ಅವರನ್ನು ಮುಂಬೈ ಪ್ರಾಂತ್ಯದಿಂದ ನಾಮನಿರ್ದೇಶನ ಮಾಡಿತು.

ಸಂವಿಧಾನ ರಚನೆಯ ಮಹತ್ವದ ಜವಾಬ್ದಾರಿಯನ್ನು ಕರಡು ರಚನಾ ಸಮಿತಿಗೆ ವಹಿಸಲಾಗಿತ್ತು. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಮಿತಿಯ ಅಧ್ಯಕ್ಷರಾಗಿದ್ದರು. ಸಮಿತಿಗೆ ಅಂಬೇಡ್ಕರ್ ಅವರೇ ಅಧ್ಯಕ್ಷರಾಗಲಿ ಎನ್ನುವುದು ದೇಶದ ಒಳಗಿನ ಮತ್ತು ಹೊರಗಿನ ಅನೇಕ ಚಿಂತಕರ ಅಭಿಪ್ರಾಯವಾಗಿತ್ತು. ಕರಡು ರಚನಾ ಸಮಿತಿಯಲ್ಲಿದ್ದ ಆರು ಮಂದಿ ಸದಸ್ಯರೂ ಅಂಬೇಡ್ಕರ್ ಅವರೇ ಅಧ್ಯಕ್ಷರಾಗಲಿ ಎಂದಿದ್ದರು. ಐರ್ಲೆಂಡ್‌ನ ಸಂವಿಧಾನ ರಚಿಸಿದ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿದ್ದ ಏಮನ್ ಡೆ ವಲೇರಾ ಅವರು ಕರಡು ರಚನಾ ಸಮಿತಿಗೆ ಅಂಬೇಡ್ಕರ್ ಅವರೇ ಸೂಕ್ತ ಎಂದಿದ್ದರು.


ಭಾರತದ ಕೊನೆಯ ವೈಸ್‌ರಾಯ್ ಮತ್ತು ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್ ಅವರ ಪತ್ನಿ ಎಡ್ವಿನಾ ಮೌಂಟ್ ಬ್ಯಾಟನ್ ಅವರು ಕೂಡ ಈ ಬಗ್ಗೆ ಸಂತಸ ವ್ಯಕ್ತಪಡಿಸಿದ್ದರು. 'ದೇಶದಲ್ಲಿರುವ ಪ್ರತಿ ಜಾತಿ, ಮತ, ಪಂಥಕ್ಕೂ ಸಮಾನ ನ್ಯಾಯ ಒದಗಿಸಬಲ್ಲ ಜೀನಿಯಸ್ ಅವರೊಬ್ಬರೇ' ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಲಾರ್ಡ್ ಮೌಂಟ್ ಬ್ಯಾಟನ್ ಅವರಿಗೂ ಅಂಬೇಡ್ಕರ್ ಬಗ್ಗೆ, ಅವರ ಕೆಲಸದ ಬಗ್ಗೆ ಅಪಾರ ಗೌರವ, ತೃಪ್ತಿ ಇತ್ತು.

ಕರಡು ರಚನೆ ನಡೆಯುತ್ತಿದ್ದ ಕಾಲದಲ್ಲಿ ಅಂಬೇಡ್ಕರ್ ಅವರ ಆರೋಗ್ಯ ಅಷ್ಟೇನೂ ಉತ್ತಮವಾಗಿರಲಿಲ್ಲ. ಮಧುಮೇಹ ಮತ್ತು ರಕ್ತದೊತ್ತಡದಿಂದ ಅವರು ಬಳಲುತ್ತಿದ್ದರು. ಆದರೂ, ಕರಡು ರಚನೆಯ ಮತ್ತು ಅದಕ್ಕೆ ಸಂಬಂಧಿಸಿ ಸಂವಿಧಾನ ರಚನಾ ಸಮಿತಿಗೆ ವಿವರಿಸುವ ಬಹುತೇಕ ಕೆಲಸಗಳನ್ನು ಅಂಬೇಡ್ಕರ್ ಅವರೇ ಮಾಡಿದರು. ರಚನಾ ಸಭೆಯ ಸದಸ್ಯರಿಗೆ ಪ್ರತಿಯೊಂದು ಕಲಂ ಅನ್ನು ವಿವರಿಸುವುದು, ಅವರು ಸೂಚಿಸಿದ ತಿದ್ದುಪಡಿಗಳನ್ನು ಸಕಾರಣವಾಗಿ ಒಪ್ಪಿಕೊಳ್ಳುವುದು ಇಲ್ಲವೇ ತಿರಸ್ಕರಿಸುವುದು... ಹೀಗೆ ಸುಮಾರು 100 ದಿನ ಅಂಬೇಡ್ಕರ್ ಅವರು ಸಭೆಯಲ್ಲಿ ಪಾಲ್ಗೊಂಡು, ಹೆಚ್ಚಿನ ಜವಾಬ್ದಾರಿಗಳನ್ನು ನಿರ್ವಹಿಸಿದರು.

'ಸದಸ್ಯರ ಅನಾರೋಗ್ಯ, ಸಾವು, ಇತರೆ ಕೆಲಸಗಳ ಒತ್ತಡದಿಂದ, ಸಂವಿಧಾನದ ಕರಡು ರೂಪಿಸುವುದಕ್ಕೆ ಸಂಬಂಧಿಸಿದ ಹೆಚ್ಚಿನ ಹೊರೆಯು ಅಂಬೇಡ್ಕರ್ ಅವರ ಮೇಲೆಯೇ ಬಿದ್ದಿದೆ' ಎಂದು ಕರಡು ರಚನಾ ಸಮಿತಿಯ ಸದಸ್ಯರಾಗಿದ್ದ ಟಿ.ಟಿ.ಕೃಷ್ಣಮಾಚಾರಿ ಅವರು 1948ರ ಸಭೆಯಲ್ಲಿ ಹೇಳಿದ್ದರು. 'ಕೌಶಲದಿಂದ ಕೂಡಿದ ಸಂವಿಧಾನದ ಪೈಲಟ್' ಎಂದು ಅಂಬೇಡ್ಕರ್ ಅವರನ್ನು ರಾಜೇಂದ್ರ ಪ್ರಸಾದ್ ಬಣ್ಣಿಸಿದ್ದರು.



ಸಂವಿಧಾನದ ಪ್ರತಿಯಲ್ಲಿ ಕಲಾವಿದರ ಕೈಯಲ್ಲಿ ಮೂಡಿದ ರಾಮಾಯಣದ ಚಿತ್ರ



ಬುದ್ಧನ ಜೀವನ ಬಿಂಬಿಸುವ ಚಿತ್ರ

### ವಿಶಿಷ್ಟ, ವಿಭಿನ್ನ ಸಂವಿಧಾನ

- ಇದು ಭಾರತದ ಪರಮೋಚ್ಚ ಕಾನೂನು
- ಒಕ್ಕೂಟ ವ್ಯವಸ್ಥೆಯಲ್ಲಿ ಸಂಸದೀಯ ಮಾದರಿಯ ಸರ್ಕಾರ ರಚನೆಗೆ ಸಂವಿಧಾನ ಅವಕಾಶ ನೀಡುತ್ತದೆ
- 1949ರ ನವೆಂಬರ್ 26ರಂದು ಅಂಗೀಕೃತಗೊಂಡು, 1950 ಜನವರಿ 26ರಂದು ಜಾರಿಗೆ ಬಂದಾಗ ಸಂವಿಧಾನವು 395 ವಿಧಿಗಳು, ಎಂಟು ಪರಿಚ್ಛೇದಗಳನ್ನು ಹೊಂದಿತ್ತು
- 1.45 ಲಕ್ಷ ಪದಗಳನ್ನು ಹೊಂದಿದ್ದ ಇದು ಜಗತ್ತಿನಲ್ಲೇ ಅತ್ಯಂತ ದೊಡ್ಡ ಸಂವಿಧಾನ
- ಕರಡು ಸಮಿತಿ ಅಧ್ಯಕ್ಷರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ನಮ್ಮ ಸಂವಿಧಾನದ ಮುಖ್ಯ ಶಿಲ್ಪಿ
- ಸ್ವತಂತ್ರ ಭಾರತದ ಮೊದಲ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಸಂವಿಧಾನಕ್ಕೆ ಸಹಿ ಹಾಕಿದ ಮೊದಲಿಗರು
- ಈಗಲೂ ಇದು ಜಗತ್ತಿನ ಅತ್ಯಂತ ದೊಡ್ಡ ಸಂವಿಧಾನ. ಇದನ್ನು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಕೈ ಬರಹದಲ್ಲಿ ಬರೆಯಲಾಗಿದ್ದು, ಕ್ಯಾಲಿಗ್ರಫಿಯಿಂದ ಅಲಂಕೃತಗೊಂಡಿದೆ
- ವ್ಯೋಹರ್ ರಾಮ್ ಮನೋಹರ್ ಸಿನ್ಹಾ, ಪ್ರೇಮ್ ಬಿಹಾರಿ ನಾರಾಯಣ ರೈಜಾದಾ ಮತ್ತು ನಂದಲಾಲ್ ಬೋಸ್ ಸೇರಿದಂತೆ ಶಾಂತಿನಿಕೇತನ ಕಲಾವಿದರ ಚಿತ್ರಗಳು ಸಂವಿಧಾನದ ಪುಟಗಳಲ್ಲಿ ಸ್ಥಾನ ಪಡೆದಿವೆ
- ಅಂತಿಮ ಕರಡನ್ನು ಪೂರ್ಣಗೊಳಿಸಲು ಎರಡು ವರ್ಷ 11 ತಿಂಗಳು ಮತ್ತು 17 ದಿನಗಳನ್ನು ತೆಗೆದುಕೊಳ್ಳಲಾಗಿತ್ತು
- ಸದ್ಯ ಸಂವಿಧಾನವು 448 ವಿಧಿಗಳು, 25 ವಿಭಾಗಗಳು ಮತ್ತು 12 ಪರಿಚ್ಛೇದಗಳನ್ನು ಒಳಗೊಂಡಿದೆ. ಈವರೆಗೆ ಸಂವಿಧಾನಕ್ಕೆ 106 ಬಾರಿ ತಿದ್ದುಪಡಿ ತರಲಾಗಿದೆ
- 'ಭಾರತದ ಪ್ರಜೆಗಳಾದ ನಾವು...' ಎಂದು ಆರಂಭವಾಗುವ ಪ್ರಸ್ತಾವನೆಯು, ಸಂವಿಧಾನದ ಆಶಯಗಳನ್ನು, ಸಾರವನ್ನು ಪ್ರತಿನಿಧಿಸುತ್ತದೆ
- ದೇಶದಲ್ಲಿ ಸರ್ಕಾರ, ಆಡಳಿತ ವ್ಯವಸ್ಥೆ ಯಾವ ರೀತಿ ಇರಬೇಕು, ಅದಕ್ಕಾಗಿ ಯಾವ ರೀತಿಯ ಕಾನೂನು, ನಿಯಮಗಳು ಇರಬೇಕು ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಆದರೆ, ಬೇರೆ ದೇಶಗಳ ಸಂವಿಧಾನಗಳಲ್ಲಿ ಸ್ಥೂಲ ಮಾರ್ಗಸೂಚಿ/ಅಂಶಗಳು ಮಾತ್ರ ಇರುತ್ತವೆ
- ಅಗತ್ಯವಿದ್ದ ಸಂದರ್ಭಗಳಲ್ಲಿ ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಸಂಸತ್ತಿಗೆ ಅಧಿಕಾರವನ್ನು ಸಂವಿಧಾನ ನೀಡಿದೆ
- ಒಕ್ಕೂಟ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರಗಳಿಗೂ ಅಧಿಕಾರ ನೀಡಿದೆ. ವಿಶೇಷ/ತುರ್ತು ಸಂದರ್ಭಗಳಲ್ಲಿ ಪೂರ್ಣ ಅಧಿಕಾರವನ್ನು ಕೇಂದ್ರಕ್ಕೆ ನೀಡುತ್ತದೆ
- ಪ್ರಜಾಪ್ರಭುತ್ವದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಿಗೆ ಪ್ರತ್ಯೇಕ ಜವಾಬ್ದಾರಿಗಳನ್ನು ನೀಡಿದೆ
- ಶಾಸನಗಳು ಅಥವಾ ಸಂವಿಧಾನವನ್ನು ಉಲ್ಲಂಘಿಸುವ ಸರ್ಕಾರದ ಕ್ರಮಗಳನ್ನು ರದ್ದು ಮಾಡುವ ಅಧಿಕಾರವನ್ನು ಸ್ವತಂತ್ರ ನ್ಯಾಯಾಂಗಕ್ಕೆ ಕೊಟ್ಟಿದೆ
- ಜಾತ್ಯತೀತ ತತ್ವ ಪ್ರತಿಪಾದಿಸುತ್ತದೆ. ತಮಗೆ ಇಷ್ಟವಾದ ಧರ್ಮವನ್ನು ಅನುಸರಿಸುವ ಹಕ್ಕನ್ನು ಪ್ರಜೆಗಳಿಗೆ ನೀಡಿದೆ
- ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕ ಕಾನೂನುಗಳನ್ನು ರೂಪಿಸಿದರೂ ಆ ಕಾನೂನುಗಳ ಅನುಷ್ಠಾನದ ಮೇಲುಸ್ತುವಾರಿಗೆ ವಿವಿಧ ಹಂತದ ನ್ಯಾಯಾಲಯಗಳನ್ನೊಳಗೊಂಡ ಒಂದು ಸಂಯೋಜಿತ ವ್ಯವಸ್ಥೆಗೆ ಸಂವಿಧಾನ ಅವಕಾಶ ನೀಡಿದೆ
- ಪ್ರಜೆಗಳಿಗೆ ಆರು ಮೂಲಭೂತ ಹಕ್ಕುಗಳು ಮತ್ತು 11 ಮೂಲಭೂತ ಕರ್ತವ್ಯಗಳನ್ನು ನೀಡಿದೆ. ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದೂ ಹೇಳಿದೆ

ಆಧಾರ: ಸಂಜಯ್.ಇನ್, ಸುಪ್ರೀಂ ಕೋರ್ಟ್ ವೆಬ್‌ಸೈಟ್‌ಗಳು, ವಿವಿಧ ವಿಭಿನ್ನ ಚಿತ್ರಗಳು: ಲಲಿತಕಲಾ ಅಕಾಡೆಮಿ ವೆಬ್‌ಸೈಟ್



ಸಂವಿಧಾನದ ಪ್ರತಿಯಲ್ಲಿ ಚಿತ್ರಿಸಲಾಗಿರುವ ಟಿಪ್ಪು ಸುಲ್ತಾನ್



ಬ್ರಿಟಿಷರ ವಿರುದ್ಧ ಹೋರಾಡಿದ ರಾಣಿ ಲಕ್ಷ್ಮೀಬಾಯಿಯ ಚಿತ್ರವೂ ಸಂವಿಧಾನದಲ್ಲಿದೆ

### ಆ 15 ಮಹಿಳೆಯರು

299 ಸದಸ್ಯರ ಸಂವಿಧಾನ ರಚನಾ ಸಭೆಯಲ್ಲಿ 15 ಮಂದಿ ಮಹಿಳೆಯರಿದ್ದರು. ಮಹಿಳೆಯರ ಹಕ್ಕುಗಳು ಸೇರಿದಂತೆ ಸಂವಿಧಾನದಲ್ಲಿ ಅಡಕವಾಗಿರುವ ಹಲವು ಪ್ರಮುಖ ವಿಚಾರಗಳಲ್ಲಿ ಇವರ ಕೊಡುಗೆ ಮಹತ್ವಪೂರ್ಣವಾದುದು ಎನ್ನಲಾಗಿದೆ. ಇವರ ಪೈಕಿ ಸರೋಜಿನಿ ನಾಯ್ಡು, ಸುಚೇತಾ ಕೃಪಲಾನಿ, ವಿಜಯಲಕ್ಷ್ಮಿ ಪಂಡಿತ್, ಪೂರ್ಣಿಮಾ ಬ್ಯಾನರ್ಜಿ, ರಾಣಿ ಅಮೃತ್ ಕೌರ್, ರೇಣುಕಾ ರಾಯ್, ಆನಿ ಮಸ್ಕರೇನ್ ಪ್ರಮುಖರಾದವರು.

ಕೇರಳದ ಪಾಲ್ಘಾಟ್‌ನ ಅಮ್ಮು ಸ್ವಾಮಿನಾಥನ್, ಉತ್ತರ ಪ್ರದೇಶದ ಬೇಗಂ ಐಜಾಜ್ ರಸೂಲ್, ಆಂಧ್ರ ಪ್ರದೇಶದ ದುರ್ಗಾಬಾಯಿ ದೇಶಮುಖ್, ಬರೋಡದ ಹಂಸ ಜೀವರಾಜ್ ಮೆಹ್ತಾ, ಲಖನೌದ ಕಮಲಾ ಚೌಧರಿ, ಬಂಗಾಳದ ಮಾಲತಿದೇವಿ ಚೌಧರಿ, ಅಸ್ಸಾಂನ ಲೀಲಾ ರಾಯ್ ಕೂಡ ಸಂವಿಧಾನ ರಚನಾ ಸಭೆಯಲ್ಲಿ ಸ್ಥಾನ ಪಡೆದಿದ್ದರು. ಇವರೆಲ್ಲರ ಜತೆಗೆ ಕೊಚ್ಚಿಯ ದಾಕ್ಷಾಯಿಣಿ ವೇಲಾಯುಧನ್ ಅವರೂ ಇದ್ದರು. ಕೇರಳದ ಕೊಚ್ಚಿಯ ಇವರು, ಪುಲಯ (ಎಸ್‌ಸಿ) ಸಮುದಾಯಕ್ಕೆ ಸೇರಿದ್ದರು. ಜಾತಿ ತಾರತಮ್ಯದ ವಿರುದ್ಧ ಹೋರಾಟ ನಡೆಸಿದ್ದ ಇವರು ಸಂವಿಧಾನ ರಚನೆಯ ವೇಳೆ ದಲಿತರು, ಆದಿವಾಸಿಗಳ ಹಕ್ಕುಗಳ ವಿಚಾರದಲ್ಲಿ ಅಂಬೇಡ್ಕರ್ ಅವರಿಗೆ ಬೆಂಬಲವಾಗಿ ನಿಂತಿದ್ದರು.

### ಪದಬಂ...

ಎಡದಿಂದ ಬಲಕ್ಕೆ
1.ಒಡಹುಟ್ಟಿದವನು ಇಲ್ಲಿದ್ದಾನೆ (4)
3.ಹದ್ದುದಂಬಿ ಇಲ್ಲಿದೆ (4)
5.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
7.ಒಳ್ಳೆಯ ಮಗನಿವನು (3)
10.ಕೆಲಸ ಮಾಡಲು ಬೇಕಾದ ಸಾಧನ (5)
11.ಎರಡಾಗಿ ಸೀಳಿದುದು (3)
13.ಕುದುರೆ ಬಾಯಿಗೆ ಹಾಕುವ ಉಕ್ಕಿನ ತುಂಡು ಉಲ್ಟಾ ಕಾಣುತ್ತಿದೆ (4)
16.ಸರಮಣಿಯನ್ನು ಹೀಗೂ ಹೇಳುತ್ತಾರೆ (4)
17.ಮಜಾಕ್ಕಾಗಿ ನಡೆದ ಗೊಂದಲ (4)

ಮೇಲಿಂದ ಕೆಳಕ್ಕೆ
2.ಭಾರವಲ್ಲದ್ದು ಇದು!
3.ತೂಕದ ಒಂದು ಪ್ರಮಾಣ
4.ಕದಕ್ಕೆ ಒರಗಿಸಿರುವ ಕೆಡ್ಡೆ
6.ಗುಂಪು ಗುಂಪಾಗಿ ವಿಂಗಡಿಸುವುದು
7.ಒಳ್ಳೆಯ ಸ್ವಭಾವ
8.ಪಕ್ಷದ ಹದಿಮೂರನೆಯ ದಿನ
9.ಸೂಕ್ಷ್ಮವಾಗಿ ನೋಡುವವನು
10.ಹುಡುಕಿರುತ್ತಾ ನೋಡಿರುವ ಮೃತ್ಯುಪತ್ರ!
12.ಯಾವುದಾದರೂ ವಿಷಯದ ಕ್ರಮಬದ್ಧ ನಿರೂಪಣೆ
14.ಈತ ಕಬ್ಬಿಣದ ಕೆಲಸಗಾರ
15.ಆ ಮನೆ ಹತ್ತಿರ ನಿಂತಿರುವ ಗಟ

6234ನೇ

### ಸುಡೊಕು 6...

## ❖ ಜ್ವಾಲಾಮುಖಿಯ ಬೂದಿ ವಿಮಾನಗಳ ಸಂಚಾರಕ್ಕೆ ಅಡ್ಡಿ

**ಸಂದರ್ಭ: ಇಥಿಯೋಪಿಯಾ ದಲ್ಲಿ ಜ್ವಾಲಾಮುಖಿ ಸ್ಫೋಟ ದಿಂದ ಉಂಟಾದ ಬೂದಿಯ ಮೋಡಗಳು ಮಂಗಳವಾರ ಭಾರತದ ಕೆಲವು ಭಾಗಗಳನ್ನು ಪ್ರವೇಶಿಸಿದ್ದು, ಇದರಿಂದ ವಿಮಾನಗಳ ಹಾರಾಟಕ್ಕೆ ಅಡ್ಡಿಯುಂಟಾಗಿದೆ. ಆದರೆ, ಹವಾಮಾನ ಅಥವಾ ವಾಯು ಗುಣಮಟ್ಟದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರಿಲ್ಲ ಎಂದು ಭಾರತೀಯ ಹವಾಮಾನ ಇಲಾಖೆ ಮತ್ತು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿವೆ.**



ಇಥಿಯೋಪಿಯಾದ ಅಫಾರ್ ವಲಯದಲ್ಲಿ ಸಕ್ರಿಯವಾಗಿರುವ ಜ್ವಾಲಾಮುಖಿಯ ಬೂದಿ ಆಗಸವನ್ನು ಆವರಿಸಿರುವುದನ್ನು ಸ್ಥಳೀಯರು ವೀಕ್ಷಿಸಿದರು

- ಬೂದಿ ಮೋಡಗಳ ಕಾರಣದಿಂದಾಗಿ ಕೆಲವೊಂದು ವಿಮಾನಗಳ ಹಾರಾಟ ರದ್ದಾಗಿದ್ದು, ಇನ್ನೂ ಕೆಲವು ವಿಮಾನಗಳ ಸಂಚಾರ ವಿಳಂಬವಾಗಿದೆ. ಪ್ರತಿಕೂಲ ಹವಾಮಾನ ಕಂಡು ಬಂದ ಕಾರಣದಿಂದ ಏರ್ ಇಂಡಿಯಾ ಕಂಪನಿಯು, ಅಂತರರಾಷ್ಟ್ರೀಯ ಸೇವೆಗಳು ಸೇರಿದಂತೆ 13 ವಿಮಾನಗಳ ಸಂಚಾರವನ್ನು ರದ್ದುಗೊಳಿಸಿತು.
- 'ಜ್ವಾಲಾಮುಖಿಯ ಬೂದಿ ಹವಾಗೋಳದ ಪ್ರದೇಶದಲ್ಲಿ ಕಂಡುಬರುತ್ತಿದೆ. ಇದು ವಿಮಾನ ಸಂಚಾರಕ್ಕೆ ಅಡ್ಡಿಯಾಗುತ್ತಿದ್ದು, ಗಾಳಿಯ ಗುಣಮಟ್ಟ ಅಥವಾ ಹವಾಮಾನದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. **ಬೂದಿ ಮೋಡವು ಚೀನಾದ ಕಡೆಗೆ ಚಲಿಸುತ್ತಿದ್ದು, ಶೀಘ್ರವೇ ಭಾರತದ ಆಕಾಶದಿಂದ ದೂರ ಸರಿಯುತ್ತದೆ**' ಎಂದು ಮಹಾಪಾತ್ರ ಹೇಳಿದರು.
- **ಇಥಿಯೋಪಿಯಾದ ಅಫಾರ್ ವಲಯದಲ್ಲಿ ಹೈಲಿ ಗುಬ್ಬಿ ಜ್ವಾಲಾಮುಖಿ ಸ್ಫೋಟಗೊಂಡು, ಸುಮಾರು 14 ಕಿ.ಮೀ (45,000 ಅಡಿ) ಎತ್ತರಕ್ಕೆ ಹಾರಿ ಕೆಂಪು ಸಮುದ್ರದ ಪೂರ್ವದತ್ತ ವ್ಯಾಪಿಸಿತು. ಗುಜರಾತ್, ದೆಹಲಿ-ಎನ್‌ಸಿಆರ್, ರಾಜಸ್ಥಾನ, ಪಂಜಾಬ್ ಮತ್ತು ಹರಿಯಾಣದಲ್ಲೂ ಈ ಬೂದಿಯ ಪರಿಣಾಮ ಬೀರಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.**
- ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಬೆಳಗಿನ ವಾಯು ಗುಣಮಟ್ಟ ಕುರಿತು ಹೊರಡಿಸಿದ ಪ್ರಕಟಣೆ ಪ್ರಕಾರ, 'ದೆಹಲಿಯಲ್ಲಿ **ವಾಯು ಗುಣಮಟ್ಟದ ಸೂಚ್ಯಂಕ (ಎಕ್ಯೂಐ)** ಸೋಮವಾರ 382 ದಾಖಲಾಗಿತ್ತು. ಮಂಗಳವಾರ 360ಕ್ಕೆ ಇಳಿದಿದೆ. **'ತುಂಬಾ ಕಳಪೆ' ವರ್ಗದಲ್ಲಿಯೇ** ಉಳಿದಿದೆ.

## ❖ ಕಸ್ಟಡಿ ಸಾವು ಸಮಾಜಕ್ಕೆ ಕಳಂಕ: ಸುಪ್ರೀಂ: ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ: ಕೇಂದ್ರಕ್ಕೆ ಕೋರ್ಟ್ ತರಾಟೆ

**ಸಂದರ್ಭ:'ಪೊಲೀಸ್ ಕಸ್ಟಡಿಯಲ್ಲಿ ಸಂಭವಿಸುವ ಸಾವು ಮತ್ತು ಹಿಂಸಾಚಾರ ಪ್ರಕರಣವು ಸಮಾಜಕ್ಕೆ ಕಳಂಕ. ಇದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.**

- ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲದಿರುವುದರ ಕುರಿತು ಸ್ವಯಂಪ್ರೇರಿತವಾಗಿ ದಾಖಲಿಸಿ ಕೊಂಡಿರುವ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು, 'ರಾಜಸ್ಥಾನ ದಲ್ಲಿ ಕಳೆದ 8 ತಿಂಗಳಲ್ಲಿ 11 ಕಸ್ಟಡಿ ಸಾವು ಸಂಭವಿಸಿವೆ. ಇದು ಸಮಾಜಕ್ಕೆ ಕಪ್ಪು ಚುಕ್ಕೆ, ಇದನ್ನು ದೇಶ ಒಪ್ಪುವುದಿಲ್ಲ' ಎಂದು ಹೇಳಿತು.
- 'ಕಸ್ಟಡಿ ಸಾವಿನ ವಿಚಾರದಲ್ಲಿ ಇದುವರೆಗೆ ಯಾವ ಕ್ರಮ ಕೈಗೊಂಡಿದ್ದೀರಿ ಎನ್ನುವುದರ ಅನುಪಾಲನಾ ಪ್ರಮಾಣ ಪತ್ರವನ್ನು ಯಾಕೆ ಸಲ್ಲಿಸಿಲ್ಲ' ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ ಪೀಠವು, 'ಸುಪ್ರೀಂ ಕೋರ್ಟ್ ಆದೇಶವನ್ನು ಹಗುರವಾಗಿ ಪರಿಗಣಿಸಿದ್ದೀರಾ' ಎಂದು ತರಾಟೆಗೆ ತೆಗೆದುಕೊಂಡಿತು.

- 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ನಾನು ಹಾಜರಾಗಿಲ್ಲ, ಆದರೆ, ಯಾರೂ ನ್ಯಾಯಾಲಯವನ್ನು ಹಗುರವಾಗಿ ಪರಿಗಣಿಸಿಲ್ಲ. ಕಸ್ಟಡಿ ಸಾವಿಗೆ ಸಂಬಂಧಿಸಿದಂತೆ ಕೇಂದ್ರವು ಮೂರು ವಾರಗಳಲ್ಲಿಅನುಪಾಲನಾ ಪ್ರಮಾಣಪತ್ರ ಸಲ್ಲಿಸಲಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು.

**ಪ್ರಕರಣವೇನು?:** ಎಲ್ಲ ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುವಂತೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆಯೇ ಎನ್ನುವುದರ ಕುರಿತು ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್ 2018ರಲ್ಲಿ ಆದೇಶ ನೀಡಿದೆ. 2020ರಲ್ಲಿ ಹೊರಡಿಸಿರುವ ಇನ್ನೊಂದು ಆದೇಶದಲ್ಲಿ ಸಿಬಿಐ, ಜಾರಿ ನಿರ್ದೇಶನಾಲಯ, ಎನ್‌ಐಎ ಸೇರಿದಂತೆ ಎಲ್ಲ ತನಿಖಾ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಮಾಡಿ, ವರದಿ ಸಲ್ಲಿಸುವಂತೆ ಕೇಂದ್ರಕ್ಕೆ ಸೂಚಿಸಿದೆ. ಇದಕ್ಕೆ ಸಂಬಂಧಿಸಿದಂತೆ ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಅನುಪಾಲನಾ ಪ್ರಮಾಣಪತ್ರ ಸಲ್ಲಿಸಬೇಕು. ಆದರೆ, ಇದುವರೆಗೆ 11 ರಾಜ್ಯಗಳು ಮಾತ್ರ ಪ್ರಮಾಣಪತ್ರ ಸಲ್ಲಿಸಿವೆ ಎಂದು ನ್ಯಾಯಪೀಠ ತಿಳಿಸಿತು.

- 'ರಾಜ್ಯದ ಎಲ್ಲ ಠಾಣೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದ್ದು, ಜಿಲ್ಲಾ ಕೇಂದ್ರದಿಂದ ನಿಗಾ ವಹಿಸಲಾಗುತ್ತಿದೆ' ಎಂದು ಮಧ್ಯಪ್ರದೇಶ ಸರ್ಕಾರ ವರದಿ ಸಲ್ಲಿಸಿದ್ದು, ಇದಕ್ಕೆ ಕೋರ್ಟ್ ಮೆಚ್ಚುಗೆ ವ್ಯಕ್ತಪಡಿಸಿತು.
- ಅಮಿಕಸ್ ಕ್ಯೂರಿಯಾಗಿ ನೇಮಕಗೊಂಡಿದ್ದ ವಕೀಲ ಸಿದ್ಧಾರ್ಥ ದವೆ ಅವರು ನೀಡಿದ ವಿವರಣೆಯನ್ನು ನ್ಯಾಯಪೀಠ ಆಲಿಸಿತು. 'ಠಾಣೆಯ ಒಳಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದರಿಂದ ತನಿಖೆಗೆ ಅಡ್ಡಿಯಾಗುತ್ತದೆ ಎಂಬ ವಾದ ಸಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಪು ನೀಡಿದೆ' ಎಂದು ನ್ಯಾಯಪೀಠ ಹೇಳಿತು.

**<u>'ದ್ವೇಷ ಭಾಷಣ: ಹೈಕೋರ್ಟ್‌ನಲ್ಲೇ ಇತ್ಯರ್ಥಪಡಿಸಿಕೊಳ್ಳಿ'</u>**

- 'ದ್ವೇಷ ಭಾಷಣದ ಎಲ್ಲ ಪ್ರಕರಣಗಳ ಮೇಲುಸ್ತುವಾರಿ ವಹಿಸಲು, ಅದಕ್ಕೆ ಕಾನೂನು ರೂಪಿಸಲು ಬಯಸುವುದಿಲ್ಲ. ಅದಕ್ಕಾಗಿ ಪೊಲೀಸ್ ಠಾಣೆಗಳು, ಅಧೀನ ನ್ಯಾಯಾಲಯಗಳು, ಹೈಕೋರ್ಟ್‌ಗಳು ಇವೆ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.
- ವ್ಯಕ್ತಿಯೊಬ್ಬರು ತಮ್ಮ ಭಾಷಣದಲ್ಲಿ ನಿರ್ದಿಷ್ಟ ಸಮುದಾಯವೊಂದರ ವಿರುದ್ಧ ಆರ್ಥಿಕ ಮತ್ತು ಸಾಮಾಜಿಕ ಬಹಿಷ್ಕಾರಕ್ಕೆ ಕರೆ ನೀಡಿದ್ದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.
- 'ನೀವು ನಿಮ್ಮ ರಾಜ್ಯದಲ್ಲೇ ದ್ವೇಷ ಭಾಷಣದ ದೂರುಗಳನ್ನು ಇತ್ಯರ್ಥಪಡಿಸಿಕೊಳ್ಳಿ. ಅಲ್ಲಿನ ಹೈಕೋರ್ಟ್ ಸಂಪರ್ಕಿಸಿ' ಎಂದು ನ್ಯಾಯಪೀಠ ಅರ್ಜಿದಾರರಿಗೆ ಸೂಚಿಸಿತು.
- 'ಎಲ್ಲ ಧರ್ಮಗಳಲ್ಲೂ ದ್ವೇಷ ಭಾಷಣದ ಪ್ರವೃತ್ತಿ ಗಣನೀಯವಾಗಿ ಹೆಚ್ಚಿದೆ. ಹಾಗಾಗಿ, ಈ ವಿಚಾರದಲ್ಲಿ 'ಸಾರ್ವಜನಿಕ ಹಿತಾಸಕ್ತಿ ಎಂಬುದು ಒಂದು ನಿರ್ದಿಷ್ಟ ಧರ್ಮಕ್ಕೆ ಮಾತ್ರ ಸೀಮಿತವಾಗಿರಬಾರದು' ಎಂದು ಕೇಂದ್ರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪೀಠಕ್ಕೆ ತಿಳಿಸಿದರು. ವಾದ ಆಲಿಸಿದ ಪೀಠವು ದ್ವೇಷ ಭಾಷಣ ಪ್ರಕರಣಗಳ ಮುಂದಿನ ವಿಚಾರಣೆಯನ್ನು ಡಿ.9ಕ್ಕೆ ನಿಗದಿಪಡಿತು.

<u>ಎಂಟು ತಿಂಗಳಲ್ಲಿ 11 ಸಾವು</u>

- ರಾಜಸ್ಥಾನದಲ್ಲಿ 2025ರ ಜನವರಿಯಿಂದ ಆಗಸ್ಟ್‌ವರೆಗೆ ಪೊಲೀಸ್ ಕಸ್ಟಡಿಯಲ್ಲಿ 11 ಸಾವುಗಳು ಸಂಭವಿಸಿವೆ ಎಂಬ ಮಾಧ್ಯಮ ವರದಿ ಆಧರಿಸಿ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. 11ರಲ್ಲಿ 7 ಸಾವುಗಳು ಉದಯಪುರ ವಿಭಾಗದಲ್ಲಿ ವರದಿಯಾಗಿವೆ.

## ❖ ಅಂಧರ ಮಹಿಳಾ ವಿಶ್ವಕಪ್: ವಿಜೇತರಿಗೆ ತಲಾ ₹10 ಲಕ್ಷ, ಸರ್ಕಾರಿ ಉದ್ಯೋಗ

**ಸಂದರ್ಭ: ವಿಶ್ವಕಪ್ ವಿಜೇತ ಅಂಧ ಮಹಿಳಾ ಕ್ರಿಕೆಟ್ ತಂಡದಲ್ಲಿರುವ ಕರ್ನಾಟಕದ ಆಟಗಾರ್ತಿಯರಿಗೆ ತಲಾ ₹10 ಲಕ್ಷ ನಗದು ಹಾಗೂ ಸರ್ಕಾರಿ ಉದ್ಯೋಗ ನೀಡುವುದಾಗಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹೇಳಿದರು.**



Chief Minister Siddaramaiah with the World Cup-winning Indian blind women's cricket team at his Kaveri residence in Bengaluru on Tuesday. SPECIAL ARRANGEMENT

- ಆಟಗಾರ್ತಿಯರನ್ನು ಸನ್ಮಾನಿಸಿದ ಬಳಿಕ ಮಾತನಾಡಿದ ಅವರು, ತಂಡದಲ್ಲಿದ್ದ ಇತರೆ ರಾಜ್ಯಗಳ 13 ಆಟಗಾರ್ತಿಯರಿಗೂ ತಲಾ ₹2 ಲಕ್ಷ ನಗದು ಬಹುಮಾನ ನೀಡಲಾಗುವುದು. ನಾಯಕಿ, ತುಮಕೂರಿನ ಶಿರಾ ಮೂಲದ ದೀಪಿಕಾ ಅವರ ನಾಯಕತ್ವ ಮತ್ತು ಆಟ ಅನನ್ಯವಾಗಿತ್ತು ಎಂದು ಶ್ಲಾಘಿಸಿದರು.




## ❖ ಕೈಗಾರಿಕಾ ಕಾರಿಡಾರ್: ಕೇಂದ್ರ ಒಲವು

**ಸಂದರ್ಭ: ಕರ್ನಾಟಕದ ಒಂಬತ್ತು ಜಿಲ್ಲೆಗಳನ್ನು ಒಳಗೊಂಡ ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಉತ್ಸುಕತೆ ತೋರಿದೆ.**

- ಕರ್ನಾಟಕದ ಕೈಗಾರಿಕೆ ಹಾಗೂ ಸಾಗಣೆ ಕ್ಷೇತ್ರಗಳಿಗೆ ಪರಿ ವರ್ತನಾತ್ಮಕ ಕಾಯಕಲ್ಪ ನೀಡುವ ಈ ಯೋಜನೆ ಜಾರಿಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.
- ಪ್ರಾದೇಶಿಕ ಕೈಗಾರಿಕಾ ಬೆಳವಣಿಗೆ ಬಲಪಡಿಸಿ ಉತ್ತೇಜಿಸಲು, ಸಾಗಾಣಿಕೆಯ ಮೂಲಸೌಕರ್ಯವನ್ನು ಅಧಿಕವಾಗಿ ಅಭಿವೃದ್ಧಿಪಡಿಸಲು ಹಾಗೂ ಕರ್ನಾಟಕದ ಉದ್ದಗಲಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಸೃಷ್ಟಿಸಲು ಈ ಯೋಜನೆಯು ಕೊಡುಗೆ ನೀಡಲಿದೆ ಎಂದು ಸಚಿವರು ತಿಳಿಸಿದ್ದಾರೆ.
- ಈ ಯೋಜನೆ ಅನುಷ್ಠಾನಕ್ಕೆ ಬಂದರೆ **ರಾಜ್ಯದಲ್ಲಿ ಸರಕು, ಕೈಗಾರಿಕೆ ಉತ್ಪನ್ನಗಳ ಸಾಗಣೆ ಸುಲಭವಾಗಿ ಕೈಗಾರಿಕಾಭಿವೃದ್ಧಿ ವೇಗಗತಿಯಲ್ಲಿ ಸಾಗುತ್ತದೆ.** ಉದ್ದೇಶಿತ ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನಕ್ಕೆ ಬಂದರೆ ಇಡೀ ರಾಜ್ಯದ ನಾಲ್ಕು ದಿಕ್ಕುಗಳಿಗೂ ಅನುಕೂಲ ಆಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.
- ಈ ಪ್ರಸ್ತಾವವು ರಾಜ್ಯದ ಅಭಿವೃದ್ಧಿಗೆ ಪರಿವರ್ತನಾತ್ಮಕ ಪರಿಕಲ್ಪನೆ. **ಕರ್ನಾಟಕದ ಪ್ರಾದೇಶಿಕ ಸಮತೋಲಿತ ಕೈಗಾರಿಕಾ ಅಭಿವೃದ್ಧಿಗೆ ಇದು ಪೂರಕವಾಗಿದೆ.** ಕೇಂದ್ರದ ರಚನಾತ್ಮಕ ನೀತಿಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಈ ಯೋಜನೆಯು ಆರಂಭಿಕ ಹೆಜ್ಜೆ.
- ಪ್ರಸ್ತಾವಿತ ಈ ಕೈಗಾರಿಕಾ ಪಾರ್ಕ್‌ಗಳು ಭಾರಿ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುವ, ಪ್ರಾದೇಶಿಕ ಪೂರೈಕೆ ಸರಪಳಿಯ ಸಂಪರ್ಕಗಳನ್ನು ಮತ್ತಷ್ಟು ಬಲಪಡಿಸಲು ನೆರವಾಗಲಿದೆ. **ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರಿನಲ್ಲಿ ಸಾಗಣೆ ಹಾಗೂ ಉತ್ಪಾದನೆ, ರಾಯಚೂರಿನಲ್ಲಿ ಕೃಷಿ ಸಂಸ್ಕರಣೆ, ಮೈಸೂರು ಮತ್ತು ಕೋಲಾರದಲ್ಲಿ ಮೌಲ್ಯವರ್ಧಿತ ವಲಯಗಳ ವಿಸ್ತರಣೆವರೆಗೆ ವಿಶೇಷ ಕೈಗಾರಿಕಾ ಸಮೂಹಗಳನ್ನು ಉತ್ತೇಜಿಸಲಿದೆ.**

## ❖ 2030ರ ಕಾಮನ್‌ವೆಲ್ತ್ ಕ್ರೀಡೆ: ಭಾರತದ ಆತಿಥ್ಯ

**ಸಂದರ್ಭ: ಗುಜರಾತ್‌ನ ಅಹಮದಾಬಾದ್‌ಗೆ 2030ರ ಕಾಮನ್‌ವೆಲ್ತ್ ಕ್ರೀಡೆಗಳ ಆತಿಥ್ಯವನ್ನು ಬುಧವಾರ ಅಧಿಕೃತವಾಗಿ ವಹಿಸಲಾಯಿತು. ಆ ಮೂಲಕ ಸುಮಾರು 15 ವರ್ಷಗಳ ನಂತರ ಬಹುಕ್ರೀಡೆಗಳ ಈ ಕೂಟ ಭಾರತಕ್ಕೆ ಮರಳಲಿದೆ.**

- 2036ರ ಒಲಿಂಪಿಕ್ಸ್ ಆತಿಥ್ಯ ವಹಿಸುವ ಭಾರತದ ಮಹತ್ವಾಕಾಂಕ್ಷೆಗೂ ಈ ಆತಿಥ್ಯವು ಇಂಬು ನೀಡಲಿದೆ. ಇದನ್ನೂ ಅಹಮದಾಬಾದಿನಲ್ಲಿ ನಡೆಸಲು ಯೋಚಿಸಲಾಗಿದೆ.
- ಕಾಮನ್‌ವೆಲ್ತ್ ಸ್ಪೋರ್ಟ್ಸ್ ಸಾಮಾನ್ಯ ಸಭೆಯಲ್ಲಿ 74 ಸದಸ್ಯರು ಭಾರತ ಬಿಡ್‌ಗೆ ಅಂಗೀಕಾರದ ಮುದ್ರೆ ಒತ್ತಿದರು. ಕಾಮನ್‌ವೆಲ್ತ್ ಕ್ರೀಡೆಗಳ ಕಾರ್ಯನಿರ್ವಾಹಕ ಮಂಡಳಿಯು ಕಳೆದ ತಿಂಗಳಷ್ಟೇ ಅಹಮದಾಬಾದ್ ನಗರವನ್ನು ಆತಿಥ್ಯಕ್ಕೆ ಶಿಫಾರಸು ಮಾಡಿತ್ತು. ಇದರ ಬೆನ್ನಲ್ಲೇ ಕಾಮನ್‌ವೆಲ್ತ್ ಕ್ರೀಡಾ ಮೌಲ್ಯಮಾಪನ ಸಮಿತಿಯು ಬಿಡ್ ಪರಿಶೀಲನೆ ಪ್ರಕ್ರಿಯೆ ನಡೆಸಿತ್ತು. ಭಾರತ ಈ ಹಿಂದೆ 2010ರಲ್ಲಿ ದೆಹಲಿಯಲ್ಲಿ ಕೊನೆಯ ಬಾರಿ ಕಾಮನ್‌ವೆಲ್ತ್ ಕ್ರೀಡೆಗಳನ್ನು ನಡೆಸಿತ್ತು.
- 2030ರ ಆವೃತ್ತಿಯು ಶತಮಾನೋತ್ಸವ ಆವೃತ್ತಿಯೂ ಆಗಲಿದೆ. ಮೊದಲ ಕಾಮನ್‌ವೆಲ್ತ್ ಕ್ರೀಡೆಗಳು (ಆಗಿನ ಹೆಸರು: ಬ್ರಿಟಿಷ್ ಎಂಪೈರ್ ಗೇಮ್ಸ್ ) 1930ರಲ್ಲಿ ಕೆನಡಾದ ಹ್ಯಾಮಿಲ್ಟನ್‌ನಲ್ಲಿ ನಡೆದಿದ್ದವು.
- ಒಂದು ದಶಕದಿಂದ ಅಹಮದಾಬಾದಿನಲ್ಲಿ ಕ್ರೀಡಾ ಮೂಲಸೌಕರ್ಯಗಳನ್ನು ಸಮರೋಪಾದಿಯಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದ್ದು, ಪ್ರಮುಖ ಕ್ರೀಡಾ ಕೇಂದ್ರವನ್ನಾಗಿ ಸಜ್ಜುಗೊಳಿಸಲಾಗುತ್ತಿದೆ.

Dr. Rajkumar IAS/KAS Academy


- 'ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಪೋರ್ಟ್ಸ್ ಎನ್‌ಕ್ಲೇವ್ ಮತ್ತು ಗುಜರಾತ್ ಪೊಲೀಸ್ ಅಕಾಡೆಮಿ ಸೇರಿದಂತೆ ನಾವು ಅಲ್ಲಿ ವಿಶ್ವ ದರ್ಜೆಯ ಕ್ರೀಡಾ ಮೂಲಸೌಕರ್ಯಗಳನ್ನು ನಿರ್ಮಿಸುತ್ತಿದ್ದೇವೆ. ಇಲ್ಲಿ ಪರಂಪರೆಯು ಆಧುನಿಕತೆಯೊಡನೆ ಸಮ್ಮಿಳಿತವಾಗುತ್ತಿದೆ' ಎಂದು ಸಭೆಯ ನಂತರ ಗುಜರಾತ್‌ನ ಉಪ ಮುಖ್ಯಮಂತ್ರಿ ಹರ್ಷ ಸಾಂಘವಿ ತಿಳಿಸಿದರು. ಅವರು ಕ್ರೀಡಾ ಖಾತೆಯನ್ನೂ ಹೊಂದಿದ್ದಾರೆ.
- 2010ರ ದೆಹಲಿ ಕ್ರೀಡೆಗಳಿಗೆ ಭಾರತ ಸುಮಾರು ₹70,000 ಕೋಟಿ ವೆಚ್ಚ ಮಾಡಿತ್ತು. ಇದು ಮೂಲ ಅಂದಾಜುವೆಚ್ಚ ₹1,600 ಕೋಟಿಗಿಂತ ಮೀತಿಮೀರಿದ ಕಾರಣ ವ್ಯಾಪಕ ಭ್ರಷ್ಟಾಚಾರದ ಆರೋಪ, ಟೀಕೆಗಳು ಕೇಳಿಬಂದಿದ್ದವು.

**ಕಾಮನ್‌ವೆಲ್ತ್ ಕ್ರೀಡೆಯು ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ.**

- '2030ರ ಕ್ರೀಡೆಗಳು ಕಾಮನ್‌ವೆಲ್ತ್ ಆಂದೋಲನದ ಶತಮಾನೋತ್ಸವ ಸಂದರ್ಭವಾಗಲಿದೆ ಮಾತ್ರವಲ್ಲ, ಮುಂದಿನ ಶತಮಾನಕ್ಕೆ ಬುನಾದಿಯಾಗಲಿದೆ' ಎಂದು ಭಾರತ ಒಲಿಂಪಿಕ್ ಸಂಸ್ಥೆ ಮತ್ತು ಭಾರತ ಕಾಮನ್ ವೆಲ್ತ್ ಕ್ರೀಡೆಗಳ ಸಂಘದ ಅಧ್ಯಕ್ಷೆ ಪಿ.ಟಿ.ಉಷಾ ತಿಳಿಸಿದರು.
- 'ಭಾರತ ದೊಡ್ಡ ಮಟ್ಟದ ಕ್ರೀಡೆಗಳನ್ನು ನಡೆಸಲು ಸಮರ್ಥವಾಗಿದೆ. 2036ರೊಳಗೆ ವಿಶ್ವದ ಅಗ್ರ 10ರಲ್ಲಿ ಮತ್ತು ಸ್ವಾತಂತ್ರ್ಯದ ಶತಮಾನೋತ್ಸವ ವರ್ಷವಾದ 2047ರಲ್ಲಿ ಅಗ್ರ 5 ರಾಷ್ಟ್ರಗಳಲ್ಲಿ ಪ್ರಬಲ ಕ್ರೀಡಾ ರಾಷ್ಟ್ರವಾಗಿ ಗುರುತಿಸಿಕೊಳ್ಳಲಿದೆ' ಎಂದು ಮಾಂಡವೀಯ ಹೇಳಿದ್ದಾರೆ.
- 15 ರಿಂದ 17 ಆಟ: 2030ರ ಕ್ರೀಡೆಗಳಲ್ಲಿ 15 ರಿಂದ 17 ಆಟಗಳು ಇರಲಿವೆ ಎಂದು ಕಾಮನ್‌ವೆಲ್ತ್ ಸ್ಪೋರ್ಟ್ ಖಚಿತಪಡಿಸಿದೆ.
- **ಅಥ್ಲೆಟಿಕ್ಸ್ ಮತ್ತು ಪ್ಯಾರಾ ಅಥ್ಲೆಟಿಕ್ಸ್, ಈಜು ಮತ್ತು ಪ್ಯಾರಾ ಈಜು, ಟೇಬಲ್ ಟೆನಿಸ್ ಮತ್ತು ಪ್ಯಾರಾ ಟೇಬಲ್‌ಟೆನಿಸ್, ವೇಟ್‌ಲಿಫ್ಟಿಂಗ್ ಮತ್ತು ಪ್ಯಾರಾ ವೇಟ್‌ಲಿಫ್ಟಿಂಗ್, ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್, ನೆಟ್‌ಬಾಲ್ ಮತ್ತು ಬಾಕ್ಸಿಂಗ್ ಸ್ಪರ್ಧೆಗಳು ಖಚಿತವಾಗಿರುವ ಕ್ರೀಡೆಗಳಾಗಿವೆ.**
- ಉಳಿದ ಕ್ರೀಡೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆ ಮುಂದಿನ ತಿಂಗಳು ಆರಂಭವಾಗಲಿದೆ.

## ❖ ಸೈಲ್‌ಗೆ ಕುವೆಂಪು ರಾಷ್ಟ್ರೀಯ ಪುರಸ್ಕಾರ

**ಸಂದರ್ಭ: ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದಿಂದ ಕೊಡಮಾಡುವ 2025ನೇ ಸಾಲಿನ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ಕ್ಕೆ ಕೊಂಕಣಿ ಮತ್ತು ಮರಾಠಿ ಬರಹಗಾರ ಮಹಾಬಲೇಶ್ವರ ಸೈಲ್ ಆಯ್ಕೆಯಾಗಿದ್ದಾರೆ.**


ಮಹಾಬಲೇಶ್ವರ ಸೈಲ್

- ಪುರಸ್ಕಾರವು ₹5 ಲಕ್ಷ ನಗದು ಹಾಗೂ ಬೆಳ್ಳಿಯ ಪದಕ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಕುವೆಂಪು ಅವರ ಜನ್ಮದಿನವಾದ ಡಿ. 29ರಂದು ಕುಪ್ಪಳಿಯಲ್ಲಿ ನಡೆಯಲಿದೆ ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.
- **<u>ಪರಿಚಯ:</u>** ಮಹಾಬಲೇಶ್ವರ ಸೈಲ್ ಮೂಲತಃ ಉತ್ತರ ಕನ್ನಡ ಜಿಲ್ಲೆ ಮಾಜಾಳಿ ಬಳಿಯ ಶೆಜೆಬಾಗ್ ಗ್ರಾಮದವರು. ಭಾರತೀಯ ಸೇನೆಯಲ್ಲಿ, ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ನಿವೃತ್ತಿಯ ನಂತರ ಗೋವಾದಲ್ಲಿ ಅರಣ್ಯ, ಪೊಲೀಸ್ ಹಾಗೂ ಅಂಚೆ ಇಲಾಖೆಗಳಲ್ಲೂ ಸೇವೆ ಸಲ್ಲಿಸಿ ಸದ್ಯ ಅಲ್ಲಿಯೇ ನೆಲಸಿದ್ದಾರೆ.
- ಸೈಲ್ ಅವರ ಕಾದಂಬರಿ 'ಹಾವಟಣ್'ಗೆ ಪ್ರತಿಷ್ಠಿತ ಸರಸ್ವತಿ ಸಮ್ಮಾನ ಪುರಸ್ಕಾರ ದೊರೆತಿದೆ. ಇವರ 'ತರಂಗಂ' ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೋವಾ ಸರ್ಕಾರದ ಸಾಹಿತ್ಯ ಪ್ರಶಸ್ತಿಗಳು ದೊರೆತಿವೆ.

Dr. Rajkumar IAS Academy

## ❖ ಅಸ್ಸಾಂನಲ್ಲಿ ಬಹುಪತ್ನಿತ್ವ ನಿಷೇಧ ಮಸೂದೆ ಮಂಡನೆ

**ಸಂದರ್ಭ: ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರು ಮಂಗಳವಾರ ವಿಧಾನಸಭೆಯಲ್ಲಿ ಬಹು ಪತ್ನಿತ್ವ ನಿಷೇಧ ಮಸೂದೆಯನ್ನು ಮಂಡನೆ ಮಾಡಿದ್ದಾರೆ. ಬಹುಪತ್ನಿತ್ವ ವನ್ನು ಅಪರಾಧ ಎಂದು ಪರಿಗಣಿಸಿ ಏಳು ವರ್ಷದವರೆಗೆ ಜೈಲು ಮತ್ತು ದಂಡ ವಿಧಿಸುವ ಅವಕಾಶ ಗಳನ್ನು ಮಸೂದೆಯಲ್ಲಿ ಕಲ್ಪಿಸಲಾಗಿದೆ.**

- ಪರಿಶಿಷ್ಟ ಪಂಗಡ(ಎಸ್‌ಟಿ) ಮತ್ತು 6ನೇ ಪರಿಚ್ಛೇದದ (ಶೆಡ್ಯೂಲ್) ಅಡಿ ಬರುವ ಪ್ರದೇಶಗಳನ್ನು ಈ ಮಸೂದೆಯ ವ್ಯಾಪ್ತಿಯಿಂದ ಹೊರಗಿ ಡಲಾಗಿದೆ.
- 'ಅಸ್ಸಾಂನಲ್ಲಿ ಬಹುಪತ್ನಿತ್ವ ವನ್ನು ನಿಷೇಧಿಸುವ ಮಸೂದೆ– 2025' ಅನ್ನು ಗೃಹ ಖಾತೆಯನ್ನೂ ಹೊಂದಿರುವ ಮುಖ್ಯ ಮಂತ್ರಿ ಬಿಸ್ವಾ ಶರ್ಮಾ ಮಂಡಿಸಿದರು.
- ಗಾಯಕ ಜುಬೀನ್ ಗರ್ಗ್ ಸಾವು ಪ್ರಕರಣದ ಚರ್ಚೆ ನಂತರ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿ ದ್ದರು. ಹೀಗಾಗಿ ಮಸೂದೆ ಮಂಡಿ ಸುವಾಗ ಕಾಂಗ್ರೆಸ್, ಸಿಪಿಎಂ, ರಾಯ್ ಜೋರ್ ದಳದ ಶಾಸಕರು ಹಾಜರಿರಲಿಲ್ಲ.
- 'ಬಹುಪತ್ನಿತ್ವ ವಿವಾಹಗಳನ್ನು ತೊಲಗಿಸುವ ಉದ್ದೇಶವನ್ನು ಮಸೂದೆ ಹೊಂದಿದೆ. ಈಗಾಗಲೇ ವೈವಾಹಿಕ ಜೀವನ ನಡೆಸುತ್ತಿರುವ ವ್ಯಕ್ತಿ ಇನ್ನೊಂದು ಮದುವೆ ಆಗುವುದು, ಕಾನೂನುಬದ್ಧವಾಗಿ ವಿಚ್ಛೇದನ ಪಡೆಯದೇ ಇರುವ, ಮದುವೆ ರದ್ದಾಗದೇ ಇರುವ ಆತ/ಆಕೆಯ ಜೊತೆ ವೈವಾಹಿಕ ಜೀವನ ನಡೆಸುವುದನ್ನು ಮಸೂದೆಯು ಬಹುಪತ್ನಿತ್ವ ಎಂದು ಪರಿಗಣಿಸುತ್ತದೆ' ಎಂದು ಮಸೂದೆಯಲ್ಲಿ ತಿಳಿಸಲಾಗಿದೆ.

## ❖ 'ರಾಷ್ಟ್ರೀಯ ನ್ಯಾಯಾಂಗ ನೀತಿ ಅಗತ್ಯ'

**ಸಂದರ್ಭ: 'ದೇಶದ ನ್ಯಾಯಾಲಯಗಳು ನೀಡುವ ತೀರ್ಪುಗಳು ಸ್ಪಷ್ಟವಾಗಿರಬೇಕು ಹಾಗೂ ಸಮತೋಲನದಿಂದ ಕೂಡಿರುವುದನ್ನು ಖಾತ್ರಿಪಡಿಸುವುದಕ್ಕಾಗಿ ಏಕರೂಪದ ರಾಷ್ಟ್ರೀಯ ನ್ಯಾಯಾಂಗ ನೀತಿಯೊಂದನ್ನು ರೂಪಿಸುವ ಅಗತ್ಯ ಇದೆ' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಪ್ರತಿಪಾದಿಸಿದರು.**

- ಸುಪ್ರೀಂ ಕೋರ್ಟ್ ವಕೀಲರ ಸಂಘ(ಎಸ್‌ಸಿಬಿಎ) ಹಮ್ಮಿಕೊಂಡಿದ್ದ ಸಂವಿಧಾನ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನ್ಯಾಯಾಲಯಗಳು ಮನಸ್ಸಿಗೆ ಬಂದಂತೆ ತೀರ್ಪು ನೀಡುವುದನ್ನು ತಪ್ಪಿಸಲು ಇಂತಹ ನೀತಿಯಿಂದ ಸಾಧ್ಯವಾಗಲಿದೆ' ಎಂದು ಹೇಳಿದ್ದಾರೆ.
- 'ದೇಶದಲ್ಲಿ 25 ಹೈಕೋರ್ಟ್‌ಗಳು ಹಾಗೂ ಹಲವು ಪೀಠಗಳಿವೆ. ಇವು ಭಿನ್ನ ನಿಲುವುಗಳನ್ನು ತಳೆದು, ತೀರ್ಪು ನೀಡುವುದನ್ನು ತಡೆಯಬೇಕಿದೆ. ಈ ಕಾರಣಕ್ಕೆ, ರಾಷ್ಟ್ರೀಯ ನೀತಿಯೊಂದನ್ನು ರೂಪಿಸಲು ಈಗ ಕಾಲ ಪಕ್ವವಾಗಿದೆ' ಎಂದೂ ಅವರು ಹೇಳಿದರು.

Dr Rajkumar's KAS Academy

## ❖ ನ್ಯಾಯಾಂಗ: ಬದಲಾಗಬೇಕಿದೆ ನಿಂದನೆ ಪರಿಭಾಷೆ

# ನ್ಯಾಯಾಂಗ ಬದಲಾಗಬೇಕಿದೆ ನಿಂದನೆ ಪರಿಭಾಷೆ

**ಕೋರ್ಟ್‌ಗಳ ಆಡಳಿತದಲ್ಲಿ ಬಳಕೆಯಲ್ಲಿರುವ ಅವಹೇಳನಕಾರಿ ಪದಗಳ ಬಗ್ಗೆ 'ಸುಪ್ರೀಂ' ವರದಿ**

ದೇಶದ ನ್ಯಾಯಾಂಗದ ಆಡಳಿತದ ಪರಿಭಾಷೆಯಲ್ಲಿ ಕೆಳ ಹಂತದ ಸಿಬ್ಬಂದಿಯನ್ನು ಸಂಬೋಧಿಸಲು ಬಳಕೆಯಲ್ಲಿರುವ ಕೆಲವು ಪದಗಳು ನಿಂದನಾತ್ಮಕವಾಗಿದ್ದು, ಅವುಗಳು ಮನುಷ್ಯನ ಘನತೆಗೆ ಧಕ್ಕೆ ತರುತ್ತಿವೆ. ವಸಾಹತುಶಾಹಿ, ಊಳಿಗಮಾನ್ಯ ಮತ್ತು ಜಾತಿ ಪದ್ಧತಿಗೆ ಸಂಬಂಧಿಸಿದ ಶ್ರೇಣೀಕರಣದ ನಿಯಮಗಳು ನ್ಯಾಯಾಂಗದ ನಿಂದನಾತ್ಮಕ ವೃತ್ತಿಸೂಚಕಗಳ ಹುಟ್ಟಿಗೆ ಕಾರಣವಾಗಿವೆ. ಅವು ಸಂವಿಧಾನದ ಒಳಗೊಳ್ಳುವ ಮತ್ತು ಮೇಲುಕೀಳುರಹಿತ ವ್ಯವಸ್ಥೆ ನಿರ್ಮಾಣದ ಆಶಯಕ್ಕೆ ವಿರುದ್ಧವಾಗಿವೆ. ಹಾಗಾಗಿ, ಅವುಗಳ ಬದಲಾಗಿ ಮನುಷ್ಯನ ಘನತೆಯನ್ನು ಕಾಪಾಡುವ, ಗೌರವಿಸುವ ಪದಗಳನ್ನು ಬಳಸಬೇಕು ಎಂದು ಸುಪ್ರೀಂ ಕೋರ್ಟ್‌ನ ಸಂಶೋಧನೆ ಮತ್ತು ಯೋಜನಾ ಕೇಂದ್ರದ ಇತ್ತೀಚಿನ ವರದಿ ಹೇಳಿದೆ

ಪ್ರಜಾವಾಣಿ ವಾರ್ತೆ

ಸಂವಿಧಾನದ ಆಶಯಗಳು ಮತ್ತು ತತ್ವಗಳಿಗೆ ವಿರುದ್ಧವಾಗಿ ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೆಲವು ನಿಂದನಾತ್ಮಕ ವೃತ್ತಿಸೂಚಕ ಪದಗಳು ಬಳಕೆಯಲ್ಲಿರುವುದರ ಬಗ್ಗೆ ಸುಪ್ರೀಂ ಕೋರ್ಟ್‌ನ ವರದಿಯೊಂದು ಗಮನ ಸೆಳೆದಿದೆ. ನ್ಯಾಯಾಂಗದಲ್ಲಿ ಅಸಮಾನತೆಯ ಭಾಷೆ ಬಳಕೆಯಲ್ಲಿದೆ ಎಂದು ಸುಪ್ರೀಂ ಕೋರ್ಟ್‌ನ ಸಂಶೋಧನೆ ಮತ್ತು ಯೋಜನಾ ಕೇಂದ್ರದ ವರದಿ ಅಭಿಪ್ರಾಯಪಟ್ಟಿದೆ. ಸುಪ್ರೀಂ ಕೋರ್ಟ್ ಮತ್ತು 25 ಹೈಕೋರ್ಟ್‌ಗಳ ಸೇವಾ ಸೇವಾ ನಿಯಮಗಳು, ಚಾರಿತ್ರಿಕವಾದ ದಾಖಲೆಗಳು, ನ್ಯಾಯಶಾಸ್ತ್ರ ಇತ್ಯಾದಿಗಳನ್ನು ಅಧ್ಯಯನ ಮಾಡಿ ವರದಿಯಲ್ಲಿ ವಿವಿಧ ಅವಹೇಳನಕಾರಿ ವೃತ್ತಿಸೂಚಕ ಪದಗಳನ್ನು ಪಟ್ಟಿ ಮಾಡಲಾಗಿದೆ.

ಸಂವಿಧಾನವು ಪ್ರತಿಯೊಬ್ಬ ಭಾರತೀಯನಿಗೂ ಸಮಾನತೆ, ಭ್ರಾತೃತ್ವ ಮತ್ತು ಘನತೆಯನ್ನು ಖಾತರಿಪಡಿಸುತ್ತದೆ. ಆದರೆ, ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳಲ್ಲಿ ಆಡಳಿತಾತ್ಮಕವಾಗಿ ಬಳಸಲಾಗುತ್ತಿರುವ ಕೆಲವು ವೃತ್ತಿಸೂಚಕ ಪದಗಳು ಉದ್ಯೋಗಿಗಳ ಘನತೆಗೆ ಕುಂದು ತರುವಂತಿವೆ. ಈ ಪದಗಳು ದೇಶದಲ್ಲಿ ಆಳವಾಗಿ ಬೇರುಬಿಟ್ಟಿರುವ ವಸಾಹತುಶಾಹಿ ಮತ್ತು ಜಾತಿ ಶ್ರೇಣೀಕರಣದ ಫಲವಾಗಿದ್ದು, ಇವುಗಳ ಸಾಂಸ್ಥಿಕ ಬಳಕೆಯು ಅಸ್ತಿತ್ವದಲ್ಲಿರುವ ಶ್ರೇಣೀಕೃತ ಸಾಮಾಜಿಕ ಸಂರಚನೆಯನ್ನು ಬಲಪಡಿಸುತ್ತಿದೆ.

> ವರದಿಯ ಪ್ರಕಾರ, 1973ರ ಕರ್ನಾಟಕ ಹೈಕೋರ್ಟ್ (ಸೇವೆಗಳು ಮತ್ತು ನೇಮಕಾತಿ ಷರತ್ತುಗಳು) ಸೇವಾ ನಿಯಮಗಳಲ್ಲಿ ಉಲ್ಲೇಖಿಸಲಾಗಿರುವ ಮನುಷ್ಯನ ಘನತೆಗೆ ಧಕ್ಕೆ ತರುವ ಪದಗಳು: ಕೋರ್ಟ್ ಸರ್ವೆಂಟ್, ಜಮೆದಾರ್, ಡ್ರೈವರ್, ಧೋಬಿ, ಪ್ಯೂನ್, ದಫ್ತರ್‌ಬಂದ್, ಚೌಕಿದಾರ್, ಮುಚಿ, ಮಾಲಿ

ಆಡಳಿತದ ಪರಿಭಾಷೆಯಾಗಿ ಇಂಥ ಪದಗಳನ್ನು ಪದೇ ಪದೇ ಬಳಸುವುದರಿಂದ ಚಾರಿತ್ರಿಕವಾದ ಅಸಮಾನತೆಯನ್ನು ಪುನರ್ ಪ್ರತಿಷ್ಠಾಪಿಸಿದಂತಾಗುತ್ತಿದೆ. ಜತೆಗೆ, ಇದು ನ್ಯಾಯಾಂಗ ವ್ಯವಸ್ಥೆಯಲ್ಲಿ ತಪ್ಪಾದ ಗುರುತಿಸುವಿಕೆಗೆ ಕಾರಣವಾಗುತ್ತಿದೆ. ವಿವಿಧ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲೇ ಉಲ್ಲೇಖವಾಗಿರುವ ಈ ಪದಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿದೆ ಎಂದು ವರದಿ ಹೇಳಿದೆ.

ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್ ಸಂಶೋಧನೆ ಮತ್ತು ಯೋಜನಾ ಕೇಂದ್ರವು, ಕೆಲವು ನಿಂದನಾತ್ಮಕವಾದ ವೃತ್ತಿಸೂಚಕ ಪದಗಳ ನಿಷ್ಪತ್ತಿ, ಬಳಕೆ, ಅರ್ಥವಿಸ್ತಾರವನ್ನು ವಿಶ್ಲೇಷಣೆಗೊಳಪಡಿಸಿದೆ. ನ್ಯಾಯಾಂಗದ ಆಡಳಿತ ಪರಿಭಾಷೆಯಲ್ಲಿ ಹಲಾಲ್‌ಖೋರ್, ಸ್ಕ್ಯಾವೆಂಜರ್, ಪ್ಯೂನ್, ಸೇವಕ ಮುಂತಾದ ಪದಗಳು ಬಳಕೆಯಾಗುತ್ತಿವೆ. ಈ ವೃತ್ತಿಸೂಚಕ ಪದಗಳು ನಿಂದನಾತ್ಮಕವಾಗಿದ್ದು, ಇದು ಸಂವಿಧಾನದ 14, 15, 16, 17, 21 ಮತ್ತು 23ನೇ ವಿಧಿಗಳ ಉಲ್ಲಂಘನೆಯಾಗಿದೆ. ಇವು ಸಂಸ್ಥೆಗಳಲ್ಲಿನ ಅಸಮಾನತೆ ಮತ್ತು ಅಸ್ಪೃಶ್ಯತೆ ಆಚರಣೆಗೆ ಸಂಬಂಧಿಸಿದ ಆಚರಣೆಗಳ ಪ್ರತಿರೂಪವಾಗಿವೆ ಎಂದಿದೆ.

ಆಡಳಿತದ ಪರಿಭಾಷೆಯನ್ನು ಸಂವಿಧಾನದ ಭಾಷೆಯೊಂದಿಗೆ, ಆಶಯಗಳೊಂದಿಗೆ ಬೆಸೆಯಬೇಕು. ನ್ಯಾಯಾಂಗದ ಆಶಯಗಳು ಮತ್ತು ಅದರ ಆಚರಣೆಯ ನಡುವಿನ ಅಂತರವನ್ನು ಹೋಗಲಾಡಿಸಬೇಕು. ನ್ಯಾಯಾಂಗದ ಪರಿಭಾಷೆಯೇ ನ್ಯಾಯದ ಮೊದಲ ಹೆಜ್ಜೆಯಾಗಬೇಕು ಎಂದಿರುವ ವರದಿಯು ಈ ನಿಟ್ಟಿನಲ್ಲಿ ಮೊದಲು ಕೆಲವು ವೃತ್ತಿಸೂಚಕ ಪದಗಳನ್ನು ಬದಲಿಸಬೇಕು ಎಂದು ಶಿಫಾರಸು ಮಾಡಿದೆ. ಹೀಗಾಗಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ಸೇವಾ ನಿಯಮಗಳಲ್ಲಿ ಬದಲಾವಣೆ ಆಗಬೇಕಿದ್ದು, ಹುದ್ದೆ ಆಧಾರಿತ, ಕೆಲಸ ಆಧಾರಿತ ವೃತ್ತಿ ಸೂಚಕಗಳಿಂದ ಹೊರಬರಬೇಕಿದೆ ಎಂದು ಅಭಿಪ್ರಾಯ ಪಟ್ಟಿರುವ ವರದಿಯು, ನಿಂದನಾತ್ಮಕ ಪದಗಳಿಗೆ ಪರ್ಯಾಯವಾಗಿ ಬಳಸಬಹುದಾದ ಪದಗಳನ್ನು ಪಟ್ಟಿ ಮಾಡಿದೆ.

### ನ್ಯಾ. ಗವಾಯಿ ಸೂಚನೆ

ಇತ್ತೀಚೆಗೆ ನಿವೃತ್ತರಾದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರು, ತಾವು ನಿವೃತ್ತರಾಗುವ ಮುನ್ನ ಈ ವರದಿಯನ್ನು ಎಲ್ಲ ರಾಜ್ಯಗಳ ಹೈಕೋರ್ಟ್‌ಗಳಿಗೂ ಕಳುಹಿಸಿದ್ದಾರೆ. 'ಆಡಳಿತದ ಪರಿಭಾಷೆಯನ್ನು ಬದಲಿಸುವಂಥ ಸಣ್ಣ ಕ್ರಿಯೆಯ ಮೂಲಕ ನ್ಯಾಯಾಂಗದಲ್ಲಿರುವ ಪ್ರತಿ ವ್ಯಕ್ತಿಯ ಘನತೆ ಮತ್ತು ಗೌರವವನ್ನು ಆತ ಯಾವುದೇ ಹುದ್ದೆಯಲ್ಲಿದ್ದರೂ ಎತ್ತಿಹಿಡಿಯಬೇಕಿದೆ. ಹೀಗಾಗಿ, ಆದಷ್ಟು ಬೇಗ ಸೇವಾ ನಿಯಮಗಳಿಗೆ ತಿದ್ದುಪಡಿ ತರಬೇಕು' ಎಂದು ಸೂಚಿಸಿದ್ದಾರೆ.



ಆಧಾರ: ರಿಫಾರ್ಮಿಂಗ್ ಅಡ್ಮಿನಿಸ್ಟ್ರೇಟಿವ್ ನಾಮನ್‌ಕ್ಲೇಚರ್ ಇನ್ ದ ಇಂಡಿಯನ್ ಜ್ಯುಡೀಷಿಯರಿ; ಎಂಬೆಡ್ಡಿಂಗ್ ಡಿಗ್ನಿಟಿ ಆ್ಯಂಡ್ ಈಕ್ವಾಲಿಟಿ ಇನ್ ಸರ್ವೀಸ್ ರೂಲ್ಸ್

### ವರದಿ ಶಿಫಾರಸು ಮಾಡಿರುವ ಪರ್ಯಾಯ ಪದಗಳು

| ಹಾಲಿ ಪದ | ಪರ್ಯಾಯ ಪದ |
|---|---|
| ಬಸ್ತಾ ಬರ್ದಾರ್ | ಡಾಕ್ಯುಮೆಂಟ್ ಹ್ಯಾಂಡ್ಲರ್ (ದಾಖಲೆಗಳ ನಿರ್ವಾಹಕ) |
| ಬಂಡಲ್ ಲಿಫ್ಟರ್ | ಮೆಟೀರಿಯಲ್ ಕೋಆರ್ಡಿನೇಟರ್ (ಸಾಮಗ್ರಿ ಸಮನ್ವಯಕಾರ) |
| ಚೋಬದಾರ್ | ಸೆರಿಮೋನಿಯಲ್ ಅಸಿಸ್ಟೆಂಟ್ (ಶಿಷ್ಟಾಚಾರ ಸಹಾಯಕ) |
| ಚೌಕಿದಾರ್ | ಸೆಕ್ಯೂರಿಟಿ ಪರ್ಸನೆಲ್ (ಭದ್ರತಾ ಸಿಬ್ಬಂದಿ) |
| ಕೂಲಿ | ಫ್ರೇಟ್ ಅಸಿಸ್ಟೆಂಟ್ (ಸರಕು ಸಹಾಯಕ) |
| ಕೋರ್ಸ್ ಸರ್ವೆಂಟ್ | ಜ್ಯುಡೀಷಿಯಲ್ ಸಪೋರ್ಟ್ ಸ್ಟಾಫ್ (ನ್ಯಾಯಾಂಗ ನೆರವು ಸಿಬ್ಬಂದಿ) |
| ಸೈಕಲ್ ಸವಾರ್ | ಲಾಜಿಸ್ಟಿಕ್ಸ್ ಅಸಿಸ್ಟೆಂಟ್ (ಸಾಗಣೆ ಸಹಾಯಕ) |
| ದಫ್ತರಿ/ದಫ್ತರ್‌ಬಂದ್/ ದಫಾದಾರ್ | ರೆಕಾರ್ಡ್ಸ್ ಅಸಿಸ್ಟೆಂಟ್/ಕೋರ್ಟ್ ಕೀಪರ್ (ದಾಖಲೆಗಳ ಸಹಾಯಕ) |
| ದರಬಾನ್ | ಆ್ಯಕ್ಸೆಸ್ ಕಂಟ್ರೋಲ್ ಆಫೀಸರ್ (ನಿಯಂತ್ರಣಾಧಿಕಾರಿ) |
| ಧೋಬಿ | ಲಾಂಡ್ರಿ ಆಪರೇಟರ್ (ಬಟ್ಟೆ ನಿರ್ವಾಹಕ) |
| ಡ್ರೈವರ್ | ಟ್ರಾನ್ಸ್‌ಪೋರ್ಟ್ ಅಸಿಸ್ಟೆಂಟ್/ಷೋಫರ್ (ಸಾರಿಗೆ ಸಹಾಯಕ/ಚಾಲಕ) |
| ಫರಾಶ್/ಫ್ರಾಶ್ | ಮೇಂಟೆನನ್ಸ್ ಅಸಿಸ್ಟೆಂಟ್/ ಸೂಪರ್‌ವೈಸರ್ (ನಿರ್ವಹಣಾ ಸಹಾಯಕ/ ಕೊಠಡಿಗಳ ಉಸ್ತುವಾರಿ ) |
| ಹಲಾಲ್‌ಖೋರ್ | ಸ್ಯಾನಿಟೇಷನ್ ಅಟೆಂಡೆಂಟ್ (ನೈರ್ಮಲ್ಯ ಪಾಲಕ) |
| ಹಮಾಲ್ | ಲಾಜಿಸ್ಟಿಕ್ಸ್ ಸ್ಟಾಫ್ (ಸಾರಿಗೆ ಸಿಬ್ಬಂದಿ) |
| ಹವಿಲ್ದಾರ್ | ಸೆಕ್ಯೂರಿಟಿ ಸೂಪರ್‌ವೈಸರ್ (ಭದ್ರತಾ ಉಸ್ತುವಾರಿ) |
| ಜಮದಾರ್ (ಸಫಾಯಿವಾಲಾ) | ಸೂಪರ್‌ವೈಸರ್ (ಕ್ಲೀನಿಂಗ್ ಸರ್ವಿಸಸ್) (ಸ್ವಚ್ಛತಾ ಸೇವೆಯ ಉಸ್ತುವಾರಿ) |
| ಜಮದಾರ್ | ಆಪರೇಷನ್ಸ್ ಸೂಪರ್‌ವೈಸರ್/ಅಷರ್ (ಕಾರ್ಯಾಚರಣೆ ಉಸ್ತುವಾರಿ/ ದ್ವಾರಾಧಿಕಾರಿ) |
| ಮಾಲನ್ | ಹಾರ್ಟಿಕಲ್ಚರ್ ಅಟೆಂಡೆಂಟ್/ಲಾನ್ ಅಟೆಂಡೆಂಟ್ (ಉದ್ಯಾನ ಪಾಲಕಿ) |
| ಮಾಲಿ | ಹಾರ್ಟಿಕಲ್ಚರ್ ಅಟೆಂಡೆಂಟ್/ಲಾನ್ ಅಟೆಂಡೆಂಟ್ (ಉದ್ಯಾನ ಪಾಲಕ) |
| ಮಶಾಲ್ಚಿ | ಕಿಚನ್ ಅಸಿಸ್ಟೆಂಟ್ (ಅಡುಗೆ ಸಹಾಯಕ/ಸಹಾಯಕಿ) |
| ಮುಲಿಯಾ | ಯೂನಿಟ್ ವರ್ಕರ್ (ಕಾರ್ಮಿಕ) |
| ನಾಯ್ಕ್ | ಜ್ಯುಡೀಷಿಯಲ್ ಪ್ರಾಸೆಸ್ ಅಸಿಸ್ಟೆಂಟ್ (ನ್ಯಾಯಾಂಗ ಪ್ರಕ್ರಿಯೆ ಸಹಾಯಕ) |
| ಪ್ಯೂನ್/ಆರ್ಡರ್ಲೀ | ಆಫೀಸ್ ಅಸಿಸ್ಟೆಂಟ್/ಕೋರ್ಟ್ ಅಟೆಂಡೆಂಟ್ (ಕಚೇರಿ ಸಹಾಯಕ/ ನ್ಯಾಯಾಲಯ ಪಾಲಕ) |
| ರೂಮ್ ಬಾಯ್ | ಹೌಸ್‌ಕೀಪಿಂಗ್ ಅಟೆಂಡೆಂಟ್ (ಮನೆವಾರ್ತೆ ಪಾಲಕ) |
| ಸಫಾಯಿವಾಲ/ಸಫಾಯಿ ಕರ್ಮಚಾರಿ | ಕ್ಲೀನಿಂಗ್ ಅಟೆಂಡೆಂಟ್/ಸೂಪರ್‌ವೈಸರ್ (ಸ್ವಚ್ಛತಾ ಪಾಲಕ/ಉಸ್ತುವಾರಿ) |
| ಸ್ಕ್ಯಾವೆಂಜರ್ | ಸ್ಯಾನಿಟೇಷನ್ ಅಟೆಂಡೆಂಟ್ (ನೈರ್ಮಲ್ಯ ಪಾಲಕ) |
| ಸೇವಕ | ಸರ್ವಿಸ್ ಪರ್ಸನೆಲ್ (ಸೇವಾ ಸಿಬ್ಬಂದಿ) |
| ಸ್ವೀಪರ್ | ಕ್ಲೀನಿಂಗ್ ಅಟೆಂಡೆಂಟ್/ಸ್ಯಾನಿಟೇಷನ್ ಅಟೆಂಡೆಂಟ್ (ಸ್ವಚ್ಛತಾ/ ನೈರ್ಮಲ್ಯ ಪಾಲಕ/ಪಾಲಕಿ) |
| ವಾಚ್ ಆ್ಯಂಡ್ ವಾರ್ಡ್ | ಸೆಕ್ಯೂರಿಟಿ ಸೂಪರ್‌ವೈಸರ್ (ಭದ್ರತಾ ಉಸ್ತುವಾರಿ) |
| ವಾಟರ್‌ಮ್ಯಾನ್/ಭಿಶ್ತಿ | ವಾಟರ್ ಸಪ್ಲೈ ಅಸಿಸ್ಟೆಂಟ್ (ನೀರು ಪೂರೈಕೆ ಸಹಾಯಕ) |

## ವಸಾಹತುಶಾಹಿ ಆಡಳಿತದ ಅವಹೇಳನಕಾರಿ ಪದಗಳು

1 **ಕೋರ್ಟ್ ಸರ್ವೆಂಟ್ (ನ್ಯಾಯಾಲಯ ಸಹಾಯಕ):** ಸುಪ್ರೀಂ ಕೋರ್ಟ್, ಅಲಹಾಬಾದ್, ದೆಹಲಿ, ಗುವಾಹಟಿ, ಕರ್ನಾಟಕ ಮತ್ತು ಮಣಿಪುರ ಹೈಕೋರ್ಟ್‌ಗಳಲ್ಲಿ ಇದರ ಬಳಕೆ ಇದೆ. ಬ್ರಿಟನ್ ಸಾಂವಿಧಾನಿಕ ಚೌಕಟ್ಟಿನಲ್ಲಿ ಈ ಪದ ಬಳಕೆಯ ಇತಿಹಾಸವಿದೆ. ಕಾನೂನಾತ್ಮಕವಾಗಿ ಈ ಪದವು ಸಂವಿಧಾನದಲ್ಲಿ ಹೇಳಲಾದ ಸಮಾನತೆ ಮತ್ತು ಘನತೆಯ ಮಾನದಂಡಗಳಿಗೆ ವಿರುದ್ಧವಾಗಿದೆ

2 **ಚೋಬದಾರ್:** ಬಾಂಬೆ ಹೈಕೋರ್ಟ್, ಗುಜರಾತ್ ಮತ್ತು ಮದ್ರಾಸ್ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಈ ಪದವನ್ನು ಕಾಣಬಹುದು. ಚೋಬದಾರ್ ಅಂದರೆ ಬೆಳ್ಳಿಯ ದಂಡವನ್ನು ಹಿಡಿಯುವ ವ್ಯಕ್ತಿ ಮತ್ತು ಪ್ರಭಾವಿ ಅಥವಾ ಉನ್ನತ ಹುದ್ದೆಯನ್ನು ಹೊಂದಿರುವ ವ್ಯಕ್ತಿಯ ಸೇವಕ. ನ್ಯಾಯಾಲಯದಲ್ಲಿ ಇದೀಗ ಶಿಷ್ಟಾಚಾರದ ಭಾಗ. ಅತ್ಯಂತ ಮುಖ್ಯ, ಪ್ರಭಾವಿ ವ್ಯಕ್ತಿಯನ್ನು ಕಾಯುವವನು ಎಂಬ ವಿಶ್ಲೇಷಣೆ ಇರುವುದರಿಂದ ಈ ಪದವು ನಿಂದನಾತ್ಮಕವಾದುದು

3 **ಚೌಕೀದಾರ್:** ಕಾವಲುಗಾರ ಅಥವಾ ಆರೈಕೆದಾರ ಎಂಬುದು ಇದರ ಅರ್ಥ. ಕರ್ನಾಟಕ, ಅಲಹಾಬಾದ್, ಆಂಧ್ರ ಪ್ರದೇಶ, ಬಾಂಬೆ, ಛತ್ತೀಸಗಢ, ಗುವಾಹಟಿ, ಹಿಮಾಚಲ ಪ್ರದೇಶ, ಜಾರ್ಖಂಡ್, ಮಧ್ಯಪ್ರದೇಶ, ಮಣಿಪುರ, ಮೇಘಾಲಯ, ಒಡಿಶಾ, ಪಟ್ನಾ, ಪಂಜಾಬ್ ಮತ್ತು ಹರಿಯಾಣ, ಸಿಕ್ಕಿಂ ಮತ್ತು ಉತ್ತರಾಖಂಡ ಹೈಕೋರ್ಟ್‌ಗಳಲ್ಲಿ ಇದು ಬಳಕೆಯಲ್ಲಿದೆ. ಈ ಪದದ ಮೂಲವು ಯಜಮಾನಿಕೆ ಮತ್ತು ವಶಾಹತುಶಾಹಿ ಕಾಲಕ್ಕೆ ಸೇರಿದ್ದು, ಆ ಕಾಲದಲ್ಲಿ ಜಮೀನ್ದಾರ ಅಥವಾ ಅಧಿಕಾರಿಯ ಆಸ್ತಿಯನ್ನು ಕಾಯುತ್ತಿದ್ದವ ಚೌಕೀದಾರ

4 **ಕೂಲಿ:** ಅಲಹಾಬಾದ್ ಹೈಕೋರ್ಟ್ ಅಧಿಕಾರಿಗಳು ಸಿಬ್ಬಂದಿ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ಕೂಲಿ ಪದದ ಮೂಲ ಭಾರತದಲ್ಲಿರುವ ಕೋಲಿ ಜಾತಿ, ತಮಿಳು ಪದ 'ಕುಲಿ' (ಸಂಬಳ ಅಥವಾ ಕಾರ್ಮಿಕ) ಮತ್ತು ಟರ್ಕಿ ಪದ 'ಕುಲಿ'ಯಲ್ಲಿದೆ (ಗುಲಾಮ) ಎಂದು ಹೇಳಲಾಗುತ್ತದೆ. ಈ ಪದವು ದಿನಗೂಲಿ ನೌಕರರನ್ನು ಸೂಚಿಸುತ್ತದೆ. ಆದರೆ, ಇದು ಮನುಷ್ಯರನ್ನು ಘನತೆಯಿಂದ ಕಾಣುವ ಬದಲು, ಅವರ ಶ್ರಮವನ್ನು ಸರಕಿನ ರೀತಿಯಲ್ಲಿ ಬಿಂಬಿಸುತ್ತದೆ

5 **ದರಬಾನ್:** ಬಾಂಬೆ ಹೈಕೋರ್ಟ್, ಕಲ್ಕತ್ತಾ ಹೈಕೋರ್ಟ್, ಗುವಾಹಟಿ ಹೈಕೋರ್ಟ್ ನಿಯಮಗಳಲ್ಲಿ ಇದು ಬಳಕೆಯಲ್ಲಿದೆ. ದರಬಾನ್ ಎಂದರೆ ದ್ವಾರಪಾಲನೆಗಾಗಿ ನಿಯೋಜಿಸಿರುವ ಸೇವಕ ಎಂದರ್ಥ. ಇದು ದಾಸ್ಯದ ವೃತ್ತಿಯಾಗಿರುವುದರಿಂದ ಒಂದು ರೀತಿಯಲ್ಲಿ ಅವಮಾನ ಮಾಡಿದಂತಾಗುತ್ತದೆ

6 **ಹವೀಲ್ದಾರ್:** ಬಾಂಬೆ, ಗುಜರಾತ್ ಮತ್ತು ಆಂಧ್ರ ಪ್ರದೇಶದ ಹೈಕೋರ್ಟ್ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ಇದರ ಮೂಲ ಹಿಂದಿಯ ಹವಾಲ್ದಾರ್ ಪದ. ಬ್ರಿಟಿಷರ ಕಾಲದಲ್ಲಿ ಇದು ಸೇನಾ ರ‍್ಯಾಂಕ್‌ನ ಹುದ್ದೆ, ಈಗ ಡಿ ದರ್ಜೆಯ ಹುದ್ದೆಯಾಗಿದೆ

7 **ನಾಯ್ಕ್/ನಾಯಕ್:** ಬಾಂಬೆ, ಗುಜರಾತ್ ಹೈಕೋರ್ಟ್‌ಗಳಲ್ಲಿ ಇದರ ಬಳಕೆ ಇದೆ. ವಿಜಯನಗರ ಆಡಳಿತದಲ್ಲಿ ಚಾಲ್ತಿಯಲ್ಲಿದ್ದ ಪದ. 'ನಾಯಕ'ರು ಸೇನಾ ಮುಖಂಡರು ಮತ್ತು ಆಡಳಿತಗಾರರಾಗಿ ಕಾರ್ಯನಿರ್ವಹಿಸಿದವರು. ಮರಾಠಾ ಸೇನೆಯಲ್ಲೂ ನಾಯ್ಕ್ ಪದ ಬಳಕೆಯಲ್ಲಿತ್ತು, ಅಧಿಕಾರಿಗಳಿಗೆ ನೀಡಲಾಗುತ್ತಿದ್ದ ಪದವಿ ಆಗಿತ್ತು. ಬ್ರಿಟಿಷರ ಆಡಳಿತದಲ್ಲೂ ಇದು ಮುಂದುವರಿದಿತ್ತು. ವಸಾಹತುಶಾಹಿ ಆಡಳಿತದಲ್ಲಿ ಪೊಲೀಸ್ ಮತ್ತು ಸೇನಾ ಹುದ್ದೆಗಳನ್ನು ಬಿಂಬಿಸುವ ಈ ಪದವು ನಾಗರಿಕ–ನ್ಯಾಯಾಂಗ ವ್ಯವಸ್ಥೆಗೆ ಸರಿ ಹೊಂದುವುದಿಲ್ಲ

8 **ಪ್ಯೂನ್:** ಕರ್ನಾಟಕ ಸೇರಿದಂತೆ ಬಹುತೇಕ ಎಲ್ಲ ಹೈಕೋರ್ಟ್‌ಗಳಲ್ಲಿ ಇದನ್ನು ಬಳಸಲಾಗುತ್ತಿದೆ. ಪ್ಯೂನ್ ಎಂದರೆ ದಾಖಲೆಗಳನ್ನು ಕೊಂಡೊಯ್ಯುವ ವ್ಯಕ್ತಿ ಅಥವಾ ಕ್ಲರ್ಕ್ ಸಹಾಯಕ ಎಂದರ್ಥ. ಈ ಪದವು ಶ್ರೇಣೀಕರಣ ಮತ್ತು ಗುಲಾಮಗಿರಿಯನ್ನು ಬಿಂಬಿಸುತ್ತದೆ

9 **ರೂಮ್ ಬಾಯ್:** ಮದ್ರಾಸ್ ಹೈಕೋರ್ಟ್‌ನಲ್ಲಿ ಇದು ಬಳಕೆಯಲ್ಲಿದೆ. ಬ್ರಿಟಿಷರ ಕಾಲದಲ್ಲಿ ಮನೆಕೆಲಸಗಳನ್ನು ಮಾಡುತ್ತಿದ್ದ ಪುರುಷ ಸೇವಕರಿಗೆ ಈ ರೀತಿ ಕರೆಯುತ್ತಿದ್ದರು. ಇದು ಕೂಡ ಸೇವಕತನವನ್ನು ಪ್ರತಿಪಾದಿಸುತ್ತದೆ

10 **ವಾಚ್ ಆ್ಯಂಡ್ ವಾರ್ಡ್:** ಮದ್ರಾಸ್ ಹೈಕೋರ್ಟ್‌ನ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ಇಂಗ್ಲೆಂಡ್‌ನಲ್ಲಿ 13ನೇ ಶತಮಾನದಲ್ಲಿ ಹುಟ್ಟಿದ ಪದ ಇದು. ಅಂದರೆ ಭದ್ರತಾ ಸಿಬ್ಬಂದಿ ಅಥವಾ ಕಾವಲುಗಾರ. ಆದರೆ, ಈ ಪದಗಳು ವ್ಯಕ್ತಿಯನ್ನು ಭದ್ರತಾ ವೃತ್ತಿಪರರನ್ನಾಗಿ ಬಿಂಬಿಸುವುದಿಲ್ಲ. ಕಾವಲುಗಾರರನ್ನಾಗಿ ತೋರಿಸುತ್ತದೆ

## ಕೀಳು ಕೆಲಸ / ಗುಲಾಮಗಿರಿ ಬಿಂಬಿಸುವ ಪದಗಳು

1 **ಬಸ್ತಾ ಬರ್ದಾರ್/ಬಂಡಲ್ ಲಿಫ್ಟರ್:** ಅಲಹಾಬಾದ್, ರಾಜಸ್ಥಾನ ಮತ್ತು ಉತ್ತರಾಖಂಡ ಹೈಕೋರ್ಟ್ ಸೇವಾ ನಿಯಮಗಳಲ್ಲಿ ಇದರ ಬಳಕೆ ಇದೆ. ನ್ಯಾಯಾಲಯದಲ್ಲಿ ಕಾನೂನು ದಾಖಲೆಗಳು ಸಾಗಣೆ ಮತ್ತು ಅವುಗಳ ನಿರ್ವಹಣೆಯ ಕೆಲಸವನ್ನು ಇದು ವಿವರಿಸುತ್ತದೆ. ಇದು ವ್ಯಕ್ತಿಯೊಬ್ಬನ ಗುರುತನ್ನು ಸಂಪೂರ್ಣವಾಗಿ ಮರೆಮಾಡುತ್ತದೆ. ಬದಲಿಗೆ ಆತ ಮಾಡುವ ಕೆಲಸವನ್ನು ಸೂಚಿಸುತ್ತದೆ. ಇದು ಸಂವಿಧಾನದ ಸಮಾನತೆ, ಘನತೆ ಮತ್ತು ಜೀವನದ ಹಕ್ಕುಗಳಿಗೆ ವಿರುದ್ಧವಾದುದು

2 **ಫರಾಶ್:** ಉತ್ತರ ಭಾರತದ ಬಹುತೇಕ ಎಲ್ಲ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ನ್ಯಾಯಾಲಯಕ್ಕೆ ಸಂಬಂಧಿಸಿದ ಎಲ್ಲ ಬೀಗದ ಕೈಗಳನ್ನು ನಿರ್ವಹಿಸುವ ಅಂದರೆ, ಬೆಳಿಗ್ಗೆ ಬಾಗಿಲು ತೆಗೆಯುವುದು ಸಂಜೆ, ಬಾಗಿಲು ಹಾಕುವ ಜವಾಬ್ದಾರಿ ಹೊಂದಿರುವ ವ್ಯಕ್ತಿಗೆ ಫರಾಶ್ ಎನ್ನಲಾಗುತ್ತದೆ. ಮೊಘಲ್ ಆಡಳಿತದಿಂದ ಬಳಕೆಗೆ ಬಂದ ಪದ ಇದು. ಇದು ಕೂಡ ವ್ಯಕ್ತಿಗಿಂತ ಆತ ನಡೆಸುವ ಕೆಲಸವನ್ನೇ ಪ್ರತಿಪಾದಿಸುತ್ತದೆ

3 **ಮಶಾಲ್ಚಿ:** ಮಣಿಪುರ ಮತ್ತು ಆಂಧ್ರ ಪ್ರದೇಶದ ಹೈಕೋರ್ಟ್ ದಾಖಲೆಗಳಲ್ಲಿ ಬಳಕೆ; ಪಾತ್ರೆ ತೊಳೆಯುವವನು ಮತ್ತು ಬೆಳಕಿನ ದೊಂದಿಗಳನ್ನು ನಿರ್ವಹಿಸುವವನು ಎನ್ನುವ ಅರ್ಥ ಇದೆ. ನ್ಯಾಯಾಂಗದ ಅಧಿಕಾರಿಗಳ ಮನೆಕೆಲಸ ಸಹಾಯಕರಿಗೆ ಬಳಸಲಾಗುವ ಈ ಪದವು ಮಾಲೀಕ, ಸೇವಕ ಎನ್ನುವ ಊಳಿಗಮಾನ್ಯ ಹಾಗೂ ವಸಾಹತುಶಾಹಿ ಧೋರಣೆಯನ್ನು ಪ್ರತಿನಿಧಿಸುತ್ತದೆ

4 **ಹಮಾಲ್ (ಸರಕು ಸಾಗಣೆ ಮಾಡುವವರು):** ಬಾಂಬೆ ಹೈಕೋರ್ಟ್‌ನಲ್ಲಿ ಬಳಕೆ; ಇದು ಸಾಂಕೇತಿಕ ಹಿಂಸೆ ಮತ್ತು ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಸೂಚಿಸುತ್ತಿದ್ದು, ಡಾ.ಬಿ. ಆರ್.ಅಂಬೇಡ್ಕರ್ ಅವರು ಹೇಳುವಂತೆ 'ಶ್ರೇಣೀಕರಣ'ದ ಪ್ರತಿಬಿಂಬವಾಗಿದೆ

5 **ಮುಲಿಯಾ (ಕೆಳಹಂತದ ಕೃಷಿ ಕೂಲಿ ಕಾರ್ಮಿಕ):** ಒಡಿಶಾ ಹೈಕೋರ್ಟ್ (ಸಿಬ್ಬಂದಿ ನೇಮಕಾತಿ ಮತ್ತು ಸೇವಾ) ನಿಯಮಗಳು–2019ರ ದಾಖಲೆಯಲ್ಲಿ ಬಳಕೆಯಾಗಿದೆ. ಈ ಪದವನ್ನು ನ್ಯಾಯಾಲಯದಲ್ಲಿ ಬಳಸುವುದರಿಂದ ಉದ್ಯೋಗಿಯ ಸಾಮರ್ಥ್ಯವನ್ನು ಕುಗ್ಗಿಸಿದಂತಾಗುತ್ತದೆ; ಅವರಿಗೆ ಯಾವ ಕೌಶಲವೂ ಇಲ್ಲ ಎನ್ನುವಂತಾಗುತ್ತದೆ

6 **ಸೇವಕ್ (ಸೇವೆ ಮಾಡುವವನು):** ಸಿಕ್ಕಿಂ, ಅಲಹಾಬಾದ್, ಉತ್ತರಾಖಂಡ್ ಹೈಕೋರ್ಟ್‌ಗಳಲ್ಲಿ ಬಳಕೆ; ಸೇವೆ ಮಾಡುವುದು ಎಂದರೆ, ಕಡೆಗಣಿಸಲ್ಪಟ್ಟ ಕೆಲಸಗಳನ್ನು ಮಾಡುವವನು ಎಂಬ ಅರ್ಥ ಇದೆ. ಇದು ಭ್ರಾತೃತ್ವ ಮತ್ತು ಪರಸ್ಪರ ಗೌರವಕ್ಕೆ ಚ್ಯುತಿ ತರುವಂಥ ಪದವಾಗಿದೆ

## ಜಾತಿ ಆಧಾರಿತ ನಿಂದನಾತ್ಮಕ ಪದಗಳು

1 **ಧೋಬಿ:** ಕರ್ನಾಟಕ, ತೆಲಂಗಾಣ ಹೈಕೋರ್ಟ್ ಸೇವಾ ನಿಯಮಗಳಲ್ಲಿ ಈ ಪದವನ್ನು ಬಳಸಲಾಗಿದೆ. ಅಗಸ ವೃತ್ತಿ ಮಾಡುವವರನ್ನು ಧೋಬಿ ಎನ್ನಲಾಗುತ್ತದೆ. ಜಾತಿ ಆಧಾರಿತ ಪದವನ್ನು ವೃತ್ತಿಗೆ ಬಳಸುವುದರಿಂದ ಸಂವಿಧಾನದ 14, 15, 17 ಮತ್ತು 21ನೇ ವಿಧಿಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ

2 **ಹಲಾಲ್‌ಖೋರ್:** ಬಾಂಬೆ ಹೈಕೋರ್ಟ್‌ನಲ್ಲಿ ಇದನ್ನು ಬಳಸಲಾಗುತ್ತಿದೆ. 'ಪ್ರಾಮಾಣಿಕವಾಗಿ ದುಡಿದು ಜೀವನ ನಡೆಸುವವನು' ಎಂಬುದು ಇದರ ಅರ್ಥ. ಇತಿಹಾಸದಲ್ಲಿ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಮತ್ತು ನೈರ್ಮಲ್ಯ ಕಾರ್ಮಿಕರಾಗಿ ದುಡಿಯುತ್ತಿದ್ದ ದಲಿತ ಮುಸ್ಲಿಮರನ್ನು ಹೀಗೆ ಕರೆಯಲಾಗುತ್ತಿತ್ತು

3 **ಮಾಲನ್:** ಈ ಪದವು ಆಂಧ್ರಪ್ರದೇಶ ಹೈಕೋರ್ಟ್‌ನಲ್ಲಿ ಬಳಕೆಯಲ್ಲಿದೆ. 'ಮಾಲಿ' ಪದದ ಮಹಿಳಾ ರೂಪ. ಇದು ಲಿಂಗ ಆಧಾರಿತ ಮತ್ತು ಜಾತಿ ಆಧಾರಿತ ತಾರತಮ್ಯವನ್ನು ಮಾಡುತ್ತದೆ

4 **ಸ್ಕ್ಯಾವೆಂಜರ್:** ಆಂಧ್ರ ಮತ್ತು ಮದ್ರಾಸ್ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಇದರ ಉಲ್ಲೇಖ ಇದೆ. ನ್ಯಾಯಾಲಯಗಳ ಶೌಚಾಲಯಗಳನ್ನು ಸ್ವಚ್ಛಗೊಳಿಸುವ, ಕಸ ತೆರವುಗೊಳಿಸುವ ಮತ್ತು ಕಚೇರಿಗಳಲ್ಲಿ ಸ್ವಚ್ಛತೆ ಕಾಪಾಡುವ ವೃತ್ತಿಯಲ್ಲಿರುವವರನ್ನು ಈ ರೀತಿ ಕರೆಯಲಾಗುತ್ತದೆ. ಈ ಪದವು ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿ ತೊಡಗಿರುವ ವ್ಯಕ್ತಿಯ ಘನತೆಯನ್ನು ಕುಂದಿಸುತ್ತದೆ

## ಸಾಮಾಜಿಕ ಗ್ರಹಿಕೆಯ ಪದಗಳು

1 **ಭಿಶ್ತಿ:** ಅಲಹಾಬಾದ್ ಮತ್ತು ಉತ್ತರಾಖಂಡ ಹೈಕೋರ್ಟ್‌ಗಳ ಸೇವಾ ನಿಯಮಗಳಲ್ಲಿ ಇದನ್ನು ಬಳಸಲಾಗಿದೆ. ಇದರ ಅರ್ಥ ಕುಡಿಯುವ ನೀರು ಪೂರೈಸುವವರು. ಇತಿಹಾಸದಲ್ಲಿ ಭಿಶ್ತಿಗಳು ಎಂದರೆ ದಾರಿ ಮಧ್ಯ ಸಿಕ್ಕಿ ಹಾಕಿಕೊಂಡವರಿಗೆ 'ಮಶಾಕ್ಸ್' ಎಂದು ಕರೆಯಲಾಗುವ ಮೇಕೆಯ ಚರ್ಮದಲ್ಲಿ ಮಾಡಿದ ಚೀಲದಲ್ಲಿ ಕುಡಿಯುವ ನೀರು ಪೂರೈಸುತ್ತಿದ್ದವರು. ಈ ಪದವು ಸಕಾರಾತ್ಮಕವಾಗಿದ್ದರೂ ಇದು ಜಾತಿ ಆಧಾರಿತ ವೃತ್ತಿಯನ್ನು ಬಿಂಬಿಸುತ್ತದೆ. ಈ ಕೆಲಸವನ್ನು ದಲಿತ ಸಮುದಾಯವದರೇ ಹೆಚ್ಚಾಗಿ ಮಾಡುತ್ತಿದ್ದರು

2 **ಜಮದಾರ್:** ಬಹುತೇಕ ಎಲ್ಲ ಹೈಕೋರ್ಟ್‌ಗಳಲ್ಲಿ ಇದರ ಬಳಕೆ ಇದೆ. ಈ ಹುದ್ದೆಯಲ್ಲಿ ಇರುವವರಿಗೆ ನಿರ್ದಿಷ್ಟ ಪಾತ್ರ ಮತ್ತು ಜವಾಬ್ದಾರಿಗಳನ್ನು ವ್ಯಾಖ್ಯಾನಿಸಲಾಗಿಲ್ಲ. ಸ್ವಚ್ಛತೆ, ಉಸ್ತುವಾರಿ, ನಿರ್ವಹಣೆ ಸೇರಿದಂತೆ ವಿವಿಧ ಕೆಲಸಗಳನ್ನು ಈ ಹುದ್ದೆಯಲ್ಲಿದ್ದವರು ಮಾಡುತ್ತಾರೆ. ಇತಿಹಾಸದಲ್ಲಿ ಇದು ಅಸ್ಪೃಶ್ಯತೆಯೊಂದಿಗೆ ತಳಕುಹಾಕಿಕೊಂಡಿದ್ದ ಜವಾಬ್ದಾರಿ

## ಪದಬಂಧ 6236


ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಈಕೆ ಮಾವನ ಹೆಂಡತಿ (2)
3.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
5.ಹಿಂದಿನಿಂದ ಉಳಿದು ಬಂದ ಪ್ರಾಣಿ ಸಸ್ಯಗಳ ಅವಶೇಷ (5)
6.ಸಂಸ್ಕೃತ ಅಥವಾ ಪ್ರಾಕೃತದಿಂದ ಹುಟ್ಟಿದ ಅಪಭ್ರಂಶ ಶಬ್ದ (3)
7.ಇದು ಮಣ್ಣಿಗೆ ಸಂಬಂಧಿಸಿದ್ದು (3)
8.ಸಮಾಜದ ಎಲ್ಲರಿಗೂ ಸಂಬಂಧಿಸಿದ್ದು (5)
9.ರಾಜಿಗೊಂದು ಪರ್ಯಾಯ ಪದ (3)
10.ಕಡಿದಾದ ಕೊರಕಲು (3)
13.ಉದಾಹರಣೆಯಿಂದ ಕೂಡಿದುದು (5)
14.ರಾತ್ರಿಯನ್ನು ಹೀಗೂ ಹೇಳುತ್ತಾರೆ (2)
15.ಗೆಲುವಿನ ವಿರುದ್ಧ ಪದ (2)

**ಮೇಲಿಂದ ಕೆಳಕ್ಕೆ**

1.ಎಣಿಕೆಗೆ ಮೀರಿದುದು (4)
2.ತನ್ನ ರಕ್ಷಣೆಗೆ ಅಥವಾ ಇತರರನ್ನು ಹೊಡೆಯಲು ಬಳಸುವ ಸಾಧನ (3)
4.ಸೋಲು ಹೀಗೆ ಬಂದಿದೆ (4)
5.ಅಂತ್ಯ ಅಥವಾ ಕೊನೆ ಎಂದರೂ ಆದೀತು (5)
7.ಈತ ಅಡುಗೆಯಲ್ಲಿ ನುರಿತವನು (5)
9.ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ (4)
11.ಜಲಪಾತವಿಲ್ಲಿ ಕಾಣುತ್ತಿದೆ (4)
12.ಅಪಹಾಸ್ಯ ಮಾಡುವವನು (3)



6235ನೇ

## ❖ ವಿರಳ ಲೋಹಕ್ಕೆ ಉತ್ತೇಜನ: ₹7,280 ಕೋಟಿ ಮೊತ್ತದ ಯೋಜನೆಗೆ ಪ್ರಧಾನಿ ನೇತೃತ್ವದ ಸಂಪುಟ ಒಪ್ಪಿಗೆ

**ಸಂದರ್ಭ: ದೇಶದಲ್ಲಿ 'ವಿರಳ ಲೋಹದ ಶಾಶ್ವತ ಅಯಸ್ಕಾಂತ' ತಯಾರಿಕೆಗೆ ಉತ್ತೇಜನ ನೀಡಲು ₹7,280 ಕೋಟಿ ಮೊತ್ತದ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟದ ಸಭೆಯು ಒಪ್ಪಿಗೆ ನೀಡಿದೆ.**

- ಇದು ಚೀನಾ ಮೇಲಿನ ಭಾರತದ ಅವಲಂಬನೆಯನ್ನು ಕಡಿಮೆ ಮಾಡಲು ನೆರವಾಗಲಿದೆ ಎಂದು ವಿಶ್ಲೇಷಿಸಲಾಗಿದೆ.
- ವಿರಳ ಲೋಹದ ಶಾಶ್ವತ ಆಯ ಸ್ಕಾಂತಗಳು ವಿದ್ಯುತ್ ಚಾಲಿತ ವಾಹನ, ನವೀಕರಿಸಬಹುದಾದ ಇಂಧನ, ಎಲೆಕ್ಟ್ರಾನಿಕ್ಸ್, ರಕ್ಷಣಾ ಉಪಕರಣಗಳು ಸೇರಿ ಹಲವು ವಲಯಗಳ ಪಾಲಿಗೆ ಬಹಳ ಮಹತ್ವದವು.
- 'ಈ ಯೋಜನೆಯು ವಿರಳ ಲೋಹದ ಶಾಶ್ವತ ಅಯಸ್ಕಾಂತ ತಯಾರಿಕೆಯನ್ನು ಉತ್ತೇಜಿಸಲಿದೆ. ವಾರ್ಷಿಕ ಆರು ಸಾವಿರ ಟನ್‌ನಷ್ಟು ಉತ್ಪಾದನೆಯ ಗುರಿಯನ್ನು ಹೊಂದಲಾಗಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದ್ದಾರೆ.
- ವಿರಳ ಲೋಹದ ಆಕ್ಸೈಡುಗಳನ್ನು ಲೋಹಗಳನ್ನಾಗಿ ಪರಿವರ್ತಿಸುವ, ಲೋಹಗಳನ್ನು ಮಿಶ್ರಲೋಹಗಳನ್ನಾಗಿ ಪರಿವರ್ತಿಸುವ, ಮಿಶ್ರಲೋಹಗಳನ್ನು ಅಯಸ್ಕಾಂತಗಳನ್ನಾಗಿ ಮಾಡುವ ತಯಾರಿಕಾ ಘಟಕಗಳ ಸ್ಥಾಪನೆಗೆ ಈ ಯೋಜನೆಯು ನೆರವು ನೀಡಲಿದೆ.
- ಯೋಜನೆಯ ಅಡಿಯಲ್ಲಿ ಒಟ್ಟು ಉತ್ಪಾದನಾ ಗುರಿಯನ್ನು ಐದು ಫಲಾನುಭವಿಗಳಿಗೆ ಹಂಚಿಕೆ ಮಾಡುವ ಉದ್ದೇಶ ಇದೆ. ಇದಕ್ಕಾಗಿ ಜಾಗತಿಕ ಬಿಡ್ ನಡೆಸಲಾಗುತ್ತದೆ. ಪ್ರತಿ ಫಲಾನುಭವಿಗೂ ವಾರ್ಷಿಕ 1,200 ಟನ್ ತಯಾರಿಕೆಯ ಗುರಿಯನ್ನು ಹಂಚಿಕೆ ಮಾಡಲಾಗುತ್ತದೆ. ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ಶೀಘ್ರವೇ ಹೊರಡಿಸಲಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.
- ಯೋಜನೆಯ ಒಟ್ಟು ಮೊತ್ತವಾದ ₹7,280 ಕೋಟಿಯಲ್ಲಿ ಮಾರಾಟ ಆಧಾರಿತ ಉತ್ತೇಜನ ಮೊತ್ತವಾದ ₹6,450 ಕೋಟಿ ಕೂಡ ಸೇರಿದೆ.
- ವಿದ್ಯುತ್ ಚಾಲಿತ ವಾಹನಗಳಿಗೆ, ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸುವ ಇಂಧನಕ್ಕೆ, ಗ್ರಾಹಕ ಬಳಕೆ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವ ಕಾರಣದಿಂದಾಗಿ ದೇಶದಲ್ಲಿ ವಿರಳ ಲೋಹದ ಶಾಶ್ವತ ಅಯಸ್ಕಾಂತಗಳಿಗೆ ಬೇಡಿಕೆಯು 2030ರ ವೇಳೆಗೆ ದುಪ್ಪಟ್ಟಾಗುವ ಅಂದಾಜು ಇದೆ.
- ಈಗ ಇವುಗಳನ್ನು ಚೀನಾ ಸೇರಿದಂತೆ ಬೇರೆ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಶಾಶ್ವತ ಅಯಸ್ಕಾಂತಗಳ ಪೂರೈಕೆದಾರ ದೇಶಗಳ ಪೈಕಿ ಚೀನಾ ಬಹಳ ಪ್ರಮುಖವಾಗಿದೆ. ಅದು ಇವುಗಳ ರಫ್ತಿನ ಮೇಲೆ ನಿರ್ಬಂಧ ವಿಧಿಸಿರುವುದರಿಂದಾಗಿ ಭಾರತದ ಆಟೊಮೊಬೈಲ್, ಎಲೆಕ್ಟ್ರಾನಿಕ್ಸ್ ಸೇರಿದಂತೆ ಕೆಲವು ವಲಯಗಳಿಗೆ ತೊಂದರೆ ಆಗಿದೆ.

## ❖ ಅಕ್ಕಿ ಉತ್ಪಾದನೆ ಹೆಚ್ಚಳ

**ಸಂದರ್ಭ: ಮುಂಗಾರು ಹಂಗಾಮಿನಲ್ಲಿ ದೇಶದಲ್ಲಿ ಅಕ್ಕಿ ಉತ್ಪಾದನೆಯು ದಾಖಲೆಯ 12.45 ಕೋಟಿ ಟನ್ ಆಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಹೇಳಿದೆ. ಇದು ಹಿಂದಿನ ವರ್ಷದ ಇದೇ ಅವಧಿಯ ಉತ್ಪಾದನೆಗೆ ಹೋಲಿಸಿದರೆ ಶೇಕಡ 1.4ರಷ್ಟು ಹೆಚ್ಚು.**

- ಆದರೆ ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು ಮತ್ತು ಹತ್ತಿಯ ಉತ್ಪಾದನೆಯು ಕಡಿಮೆ ಆಗಿದೆ. 2025–26ನೇ ವರ್ಷದ ಮುಂಗಾರು ಹಂಗಾಮಿನಲ್ಲಿ ದೇಶದ ಒಟ್ಟು ಆಹಾರ ಧಾನ್ಯ ಉತ್ಪಾದನೆಯು 17.33 ಕೋಟಿ ಟನ್ ಆಗಿದೆ ಎಂದು ಸಚಿವಾಲಯ ಸಿದ್ಧಪಡಿಸಿರುವ ಮೊದಲ ಮುಂಗಡ ಅಂದಾಜಿನಲ್ಲಿ ಹೇಳಲಾಗಿದೆ.
- ಹಿಂದಿನ ವರ್ಷದ ಮುಂಗಾರು ಹಂಗಾಮಿನಲ್ಲಿ ದೇಶದಲ್ಲಿ 16.95 ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆ ಆಗಿತ್ತು. ಹಿಂದಿನ ವರ್ಷದ ಮುಂಗಾರು ಹಂಗಾಮಿನಲ್ಲಿ ಅಕ್ಕಿಯ ಉತ್ಪಾದನೆಯು 12.28 ಕೋಟಿ ಟನ್‌ಗಳಷ್ಟು ಇತ್ತು.

Dr. Rajkumar IAS/KAS Academy

- ಮುಂಗಾರು ಹಂಗಾಮಿನ ಬೆಳೆಗಳನ್ನು ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಕೊಯ್ಲು ಮಾಡಲಾಗುತ್ತದೆ. ಅಕ್ಕಿಯು ಮುಂಗಾರು ಹಂಗಾಮಿನ ಪ್ರಮುಖ ಬೆಳೆಯಾಗಿದೆ.
- 'ದೇಶದ ಕೆಲವು ಭಾಗಗಳಲ್ಲಿ ಸುರಿದ ಅತಿವೃಷ್ಟಿಯು ಬೆಳೆಗಳಿಗೆ ಹಾನಿ ಉಂಟುಮಾಡಿದೆ. ಆದರೆ ಹೆಚ್ಚಿನ ಪ್ರದೇಶಗಳು ಉತ್ತಮ ಮುಂಗಾರು ಮಳೆಯಿಂದಾಗಿ ಪ್ರಯೋಜನ ಪಡೆದಿವೆ. ಇದರಿಂದಾಗಿ ಒಟ್ಟಾರೆಯಾಗಿ ಬೆಳೆ ಹೆಚ್ಚಾಗಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

## ❖ ಸಫ್ರಾನ್ ಘಟಕಕ್ಕೆ ಪ್ರಧಾನಿ ಚಾಲನೆ

**ಸಂದರ್ಭ: ಹೈದರಾಬಾದ್‌ನಲ್ಲಿ ನಿರ್ಮಾಣವಾಗಿರುವ ಫ್ರಾನ್ಸ್‌ನ ಸಫ್ರಾನ್ ವಿಮಾನ ತಯಾರಿಕಾ ಘಟಕಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಚಾಲನೆ ನೀಡಿದರು.**

- ಬಳಿಕ ಮಾತನಾಡಿದ ಅವರು, 'ಹೂಡಿಕೆದಾರರಿಗೆ ಭಾರತವು ನಂಬಿಕಸ್ಥ ಪಾಲುದಾರ. ಹೂಡಿಕೆದಾರ ರೆಂದರೆ ಸಹ ಸೃಷ್ಟಿಕರ್ತರಿದ್ದಂತೆ' ಎಂದು ಬಣ್ಣಿಸಿದರು.
- 'ಈ ಘಟಕವು ವಾಣಿಜ್ಯ ವಿಮಾನಗಳಲ್ಲಿ ಬಳಸುವ ಲೀಪ್ ಎಂಜಿನ್‌ಗಳನ್ನು ತಯಾರಿಸಲಿದೆ ಮತ್ತು ಯುವಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಲಿದೆ' ಎಂದು ಅವರು ಬುಧವಾರ ಹೇಳಿದರು.
- 'ದೇಶದ ನಾಗರಿಕ ವಿಮಾನಯಾನ ವಲಯವು ವೇಗಗತಿಯಲ್ಲಿ ಬೆಳವಣಿಗೆ ಹೊಂದುತ್ತಿದೆ. ಈ ನಿಟ್ಟಿನಲ್ಲಿ ಸಫ್ರಾನ್ ಘಟಕವು ವಿಮಾನಗಳ ಎಂಜಿನ್, ಬಿಡಿಭಾಗಗಳು ಮತ್ತು ಪ್ರೊಪಲ್ಷನ್ ವ್ಯವಸ್ಥೆಯಲ್ಲಿ ಹೊಸ ಹೊಸ ವಿನ್ಯಾಸಗಳನ್ನು ಆವಿಷ್ಕರಿಸಬೇಕು' ಎಂದರು.
- ಸಫ್ರಾನ್ ಏರ್‌ಕ್ರಾಫ್ಟ್ ಎಂಜಿನ್ ಸರ್ವೀಸಸ್ ಇಂಡಿಯಾ (ಎಸ್‌ಎಇಎಸ್‌ಐ) ಲೀಪ್ ಎಂಜಿನ್‌ಗಳ ಜಗತ್ತಿನ ಅತಿ ದೊಡ್ಡ ಎಂಆರ್‌ಒ (ಎಂಜಿನ್‌ಗಳ ನಿರ್ವಹಣೆ, ದುರಸ್ತಿ) ಘಟಕವಾಗಿದೆ. ಇದು 2026ರಿಂದ ಕಾರ್ಯಾರಂಭಿಸಲಿದ್ದು, ವಿಮಾನಯಾನ ಕ್ಷೇತ್ರದಲ್ಲಿ ದೇಶದ ಸಾಮರ್ಥ್ಯವನ್ನು ಬಲಪಡಿಸಲಿದೆ.
- ನೂತನ ಘಟಕವು ವಾರ್ಷಿಕ ಗರಿಷ್ಠ 300 ಲೀಪ್ (ಎಲ್‌ಇಎಪಿ) ಎಂಜಿನ್‌ಗಳ ಸರ್ವೀಸ್ ಮಾಡುವಂತೆ ವಿನ್ಯಾಸಗೊಳಿಸಲಿದೆ. 1,000ಕ್ಕೂ ಹೆಚ್ಚು ತಂತ್ರಜ್ಞರು, ಎಂಜಿನಿಯರ್‌ಗಳಿಗೆ ಉದ್ಯೋಗ ನೀಡಲಿದೆ ಎಂದು ಪ್ರಧಾನ ಮಂತ್ರಿಯವರ ಕಾರ್ಯಾಲಯವು ತಿಳಿಸಿದೆ.

**ಬೆಂಗಳೂರು–ಹೈದರಾಬಾದ್ ಡಿಫೆನ್ಸ್ ಕಾರಿಡಾರ್‌ಗೆ ಒತ್ತಾಯ**

- ಬೆಂಗಳೂರು–ಹೈದರಾಬಾದ್ ಪ್ರದೇಶವನ್ನು 'ಏರೋಸ್ಪೇಸ್ ಮತ್ತು ಡಿಫೆನ್ಸ್ ಕಾರಿಡಾರ್' ಎಂದು ಘೋಷಿಸುವಂತೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದರು.
- ಸಫ್ರಾನ್ ಘಟಕಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕಳೆದ ಕೆಲವು ವರ್ಷಗಳಲ್ಲಿ ತೆಲಂಗಾಣದ ಏರೊಸ್ಪೇಸ್ ಮತ್ತು ಡಿಫೆನ್ಸ್ ವಲಯದಿಂದ ರಫ್ತು ದ್ವಿಗುಣವಾಗಿದೆ. ಕಳೆದ 9 ತಿಂಗಳಲ್ಲಿ ಸುಮಾರು ₹30,000 ಕೋಟಿ ಔಷಧ ರಫ್ತಾಗಿದೆ' ಎಂದು ತಿಳಿಸಿದರು.
- 'ನಾಗರಿಕ ವಿಮಾನಯಾನ ಸಚಿವಾಲಯದಿಂದ ತೆಲಂಗಾಣವು ಏರೊಸ್ಪೇಸ್ ಪ್ರಶಸ್ತಿ ಪಡೆದಿದೆ. ಏರೊಸ್ಪೇಸ್ ವಲಯದಲ್ಲಿ ಹೂಡಿಕೆಗೆ ಕೌಶಲ ಅಭಿವೃದ್ಧಿ ಅಗತ್ಯ. ಹೀಗಾಗಿ ಬೆಂಗಳೂರು–ಹೈದರಾಬಾದ್ ಪ್ರದೇಶವನ್ನು ಏರೋಸ್ಪೇಸ್ ಮತ್ತು ಡಿಫೆನ್ಸ್ ಕಾರಿಡಾರ್ ಎಂದು ಘೋಷಿಸಬೇಕು' ಎಂದು ಮನವಿ ಮಾಡಿದರು. ತೆಲಂಗಾಣದ ಏರೊಸ್ಪೇಸ್ ಮತ್ತು ರಕ್ಷಣಾ ವಲಯದ ಬೆಳವಣಿಗೆಯಲ್ಲಿ ಸಫ್ರಾನ್ ಘಟಕವು ಮಹತ್ವ ಮೈಲುಗಲ್ಲಾಗಲಿದೆ ಎಂದು ತಿಳಿಸಿದರು.

Dr. Rajkumar IAS KAS Academy

## ❖ 'ಫಾರಂ 6 ಪರಿಶೀಲನೆ: ಆಯೋಗದ ಹಕ್ಕು'

**ಸಂದರ್ಭ: ವ್ಯಕ್ತಿಯು ಈ ದೇಶ ಪೌರ ಹೌದೋ ಅಲ್ಲವೋ ಎನ್ನುವುದನ್ನು ಆಧಾರ್ ಕಾರ್ಡ್ ಮಾತ್ರವೇ ನಿರ್ಧರಿಸುವುದಿಲ್ಲ. ಈ ಚೀಟಿ ಇರುವುದು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು. ಒಂದು ವೇಳೆ ಪಕ್ಕದ ದೇಶಕ್ಕೆ ಸೇರಿದ ವ್ಯಕ್ತಿಯೊಬ್ಬರು ನಮ್ಮ ದೇಶದಲ್ಲಿ ಕಾರ್ಮಿಕನಾಗಿ ದುಡಿಯುತ್ತಿದ್ದರೆ, ಆತನನ್ನು ನಮ್ಮ ದೇಶದ ಮತದಾರನನ್ನಾಗಿ ಮಾಡಬೇಕೆ?ಸೂರ್ಯ ಕಾಂತ್, ಸಿಜೆಐ.**



- 'ದೇಶದಲ್ಲಿ ಈ ಹಿಂದೆ ಎಂದೂ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ನಡೆಸಿಲ್ಲ ಎನ್ನುವ ಕಾರಣಕ್ಕಾಗಿ ವಿವಿಧ ರಾಜ್ಯಗಳಲ್ಲಿ ಚುನಾ ವಣಾ ಆಯೋಗವು ಎಸ್‌ಐಆರ್ ಪ್ರಕ್ರಿಯೆ ನಡೆಸಲು ಈಗ ತೆಗೆದುಕೊಂಡಿರುವ ನಿರ್ಧಾರದ ಸಾಂವಿಧಾನಿಕ ಸಿಂಧುತ್ವ ವನ್ನು ವಿಚಾರಣೆಗೆ ಒಳಪಡಿಸಲು ಸಾಧ್ಯವಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.
- ಎಸ್‌ಐಆರ್ ನಡೆಸುವ ಆಯೋಗದ ನಿರ್ಧಾರದ ಸಾಂವಿಧಾನಿಕ ಸಿಂಧುತ್ವದ ಬಗ್ಗೆ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ಕುರಿತ ಅಂತಿಮ ವಿಚಾರಣೆಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠವು ಬುಧವಾರ ಆರಂಭಿಸಿತು.
- 'ಫಾರಂ 6ರಲ್ಲಿ (ತಾನು ಮತದಾರ ಎಂಬ ಬಗ್ಗೆ ವ್ಯಕ್ತಿಯು ನೋಂದಣಿ ಮಾಡಿಕೊಳ್ಳಲು ಭರ್ತಿ ಮಾಡಬೇಕಾದ ನಮೂನೆ) ನಮೂದು ಮಾಡಲಾದ ಮಾಹಿತಿಗಳು ಸರಿ ಇದೆಯೇ ಇಲ್ಲವೇ ಎಂಬ ಬಗ್ಗೆ ನಿರ್ಧಾರ ಕೈಗೊಳ್ಳುವ ಅಧಿಕಾರ ಆಯೋಗಕ್ಕೆ ಇದೆ' ಎಂದು ಪೀಠ ಅಭಿಪ್ರಾಯಪಟ್ಟಿತು.
- ಅರ್ಜಿಯೊಂದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ವ್ಯಕ್ತಿ ಸಲ್ಲಿಸಿದ ಫಾರಂ 6 ಅನ್ನು ಸ್ವೀಕರಿಸುವುದಕ್ಕೆ ಮತ್ತು ನಿಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಲು, ನಿಮ್ಮ ಪ್ರಕಾರ ಚುನಾವಣಾ ಆಯೋಗವು ಅಂಚೆ ಕಚೇರಿಯೇ?' ಎಂದು ಪೀಠ ಕೇಳಿತು.
- ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರರ ಪರ ವಕೀಲ ಕಪಿಲ್ ಸಿಬಲ್, 'ಪ್ರಾಥಮಿಕ ವಾಗಿ ಆಯೋಗದ ಕೆಲಸ ಅಂಚೆ ಕಚೇರಿ ಯದ್ದೇ ಹೌದು. ಆದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅಲ್ಲವಷ್ಟೆ' ಎಂದರು. ಇದಕ್ಕೆ ಉತ್ತರಿಸಿದ ಪೀಠ, 'ನಮೂನೆಯಲ್ಲಿನ ಮಾಹಿತಿಗಳನ್ನು ಸರಿಪಡಿಸುವುದಕ್ಕೆ ಆಯೋಗಕ್ಕೆ ಸಾಂವಿಧಾನಿಕ ಹಕ್ಕು ಇದೆ' ಎಂದಿತು.

## ❖ ಸಿಂದರೋವ್‌ಗೆ ವಿಶ್ವಕಪ್ ಕಿರೀಟ: ಗೌರವಕ್ಕೆ ಪಾತ್ರರಾದ ಅತಿ ಕಿರಿಯ ಆಟಗಾರ

**ಸಂದರ್ಭ: ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಅವರು ವೇಗದ ಆಟಗಳ ಟೈಬ್ರೇಕರ್‌ನಲ್ಲಿ ಚೀನಾದ ವೇಯಿ ಯಿ ಅವರನ್ನು ಸೋಲಿಸಿ ಫಿಡೆ ಚೆಸ್ ವಿಶ್ವಕಪ್ ಗೆದ್ದುಕೊಂಡರು. 19 ವರ್ಷ ವಯಸ್ಸಿನ ಸಿಂದರೋವ್ ವಿಶ್ವಕಪ್ ಗೆದ್ದ ಅತಿ ಕಿರಿಯ ಆಟಗಾರ ಎಂಬ ಗೌರವಕ್ಕೂ ಭಾಜನರಾದರು.**

- ಇವರಿಬ್ಬರ ನಡುವಣ ಎರಡು ಕ್ಲಾಸಿಕಲ್ ಆಟಗಳು ಡ್ರಾ ಆಗಿ ಸ್ಕೋರ್ 1–1 ಸಮಬಲವಾಗಿತ್ತು. ಟೈಬ್ರೇಕರ್‌ನಲ್ಲಿ ವೇಯಿ ಯಿ ಅವರು ಮೊದಲ ಆಟವನ್ನು ಸುಲಭವಾಗಿ ಡ್ರಾ ಮಾಡಿಕೊಂಡರು. ಆದರೆ ಉಜ್ಬೇಕಿ ಸ್ತಾನದ ಆಟಗಾರ ಕಪ್ಪು ಕಾಯಿಗಳಲ್ಲಿ ಆಡಿ ಎದುರಾಳಿಯ ರಕ್ಷಣೆ ಭೇದಿಸಿ 60 ನಡೆಗಳಲ್ಲಿ ಎರಡನೇ ಆಟ ಗೆದ್ದುಕೊಂಡು ಒಟ್ಟು 2.5–1.5 ರಿಂದ ಪಂದ್ಯ ಗೆದ್ದರು.

- ಸಿಂದರೋವ್ ಅವರು ವಿಶ್ವನಾಥನ್ ಆನಂದ್ ಟ್ರೋಫಿಯ ಜೊತೆ ₹1.07 ಕೋಟಿ ಬಹುಮಾನ ತಮ್ಮದಾಗಿಸಿ ಕೊಂಡರು. ನಾಕೌಟ್ ಮಾದರಿಯ ಈ ಟೂರ್ನಿಯಲ್ಲಿ ಉಜ್ಬೇಕಿಸ್ತಾನದ ಆಟಗಾರ 16ನೇ ಶ್ರೇಯಾಂಕ ಪಡೆದಿದ್ದರು. ಚೀನಾದ ಆಟಗಾರ ಸುಮಾರು ₹76 ಲಕ್ಷ ಬಹುಮಾನ ಗಳಿಸಿದರು.



ವಿಶಾಖನ್

- ಸಿಂದರೋವ್ ಮತ್ತು ವೇಯಿ ಯಿ ಇಬ್ಬರೂ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದಿದ್ದಾರೆ. ಮೂರನೇ ಸ್ಥಾನ ಪಡೆದ ರಷ್ಯಾದ ಇಸಿಪಂಕೊ ಅವರೂ ಸೈಪ್ರಸ್‌ನಲ್ಲಿ ಮುಂದಿನ ಫೆಬ್ರವರಿ–ಮಾರ್ಚ್‌ನಲ್ಲಿ ನಿಗದಿಯಾಗಿರುವ ಎಂಟು ಆಟಗಾರರ ಟೂರ್ನಿಯಲ್ಲಿ ಆಡುವ ಅವಕಾಶ ಗಳಿಸಿದ್ದಾರೆ.
- ಸದ್ಯ ಈ ಮೂವರ ಜೊತೆ (ಸಿಂದರೋವ್, ವೇಯಿ ಯಿ, ಇಸಿಪಂಕೊ) ಜೊತೆ ಅಮೆರಿಕದ ಫ್ಯಾಬಿಯಾನೊ ಕರುವಾನ, ನೆದರ್ಲೆಂಡ್ಸ್‌ನ ಅನಿಶ್ ಗಿರಿ, ಜರ್ಮನಿಯ ಮಥಾಯಿಸ್ ಬ್ಲೂಬಾಮ್ ಅವರೂ ಅರ್ಹತೆ ಗಳಿಸಿದ್ದಾರೆ. ಚೆಸ್ ಸರ್ಕಿಟ್‌ನಲ್ಲಿ ಉತ್ತಮ ಸಾಧನೆ ತೋರಿರುವ ಭಾರತದ ಪ್ರಜ್ಞಾನಂದ ಮತ್ತು ಜಪಾನ್‌ನ ಹಿಕಾರು ನಕಾಮುರಾ ಅವರೂ ಅರ್ಹತೆ ಪಡೆಯುವುದು ಬಹುತೇಕ ಖಚಿತವಾಗಿದೆ.
- ನೊದಿರ್ಬೆಕ್ ಅಬ್ದುಸತ್ತಾರೋವ್ ನಂತರ ಸಿಂದರೋವ್ ಅವರು ಉಜ್ಬೇಕಿಸ್ತಾನದ ಎರಡನೇ ಪ್ರಮುಖ ಆಟಗಾರ ಎನಿಸಿದ್ದಾರೆ.

## ❖ ಈಜು: ಹಿತಶ್ರೀಗೆ ಮತ್ತೊಂದು ಚಿನ್ನ

**ಸಂದರ್ಭ: ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ಈಜುಪಟುಗಳು ಬಸವನಗುಡಿ ಈಜು ಕೇಂದ್ರದಲ್ಲಿ (ಬಿಎಸಿ) ನಡೆಯುತ್ತಿರುವ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕನೇ ದಿನವೂ ಆಕರ್ಷಕ ಪ್ರದರ್ಶನ ಮುಂದುವರಿಸಿದರು.**

- ಹಿತಶ್ರೀ ಎನ್. ಅವರು 17 ವರ್ಷದೊಳಗಿನ ಬಾಲಕಿಯರ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ ಹಾಗೂ ಆರ್ಯನ್ ಎ. ಪಾಟೀಲ್ 17 ವರ್ಷದೊಳಗಿನ ಬಾಲಕರ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.
- ಹಿತಶ್ರೀ ಅವರು 17 ವರ್ಷದೊಳಗಿನ ಬಾಲಕಿಯರ 400 ಮೀ. ಮೆಡ್ಲೆಯಲ್ಲಿ 5ನಿ. 32.65 ಸೆಕೆಂಡುಗಳಲ್ಲಿ ಗುರಿತಲುಪಿದರು. ಡಿಕೆವಿ ಅಕ್ವಾಟಿಕ್‌ನ ಪ್ರತೀಕ್ಷಾ ಗೌಡ (5ನಿ. 36.10ಸೆ.) ಹಾಗೂ ಬಿಎಸಿನ ಆಸ್ರಾ ಸುಧೀರ್ (5ನಿ. 41.24ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು. ಬಾಲಕರ ವಿಭಾಗದ ಈ ಸ್ಪರ್ಧೆಯಲ್ಲಿ ಮೂರೂ ಪ್ರಶಸ್ತಿ ಬಿಸಿಎ ಈಜುಪಟುಗಳ ಪಾಲಾದವು. ಸೂರ್ಯ ಜೆ.ಟಿ. (4ನಿ.40.67ಸೆ.) ಸ್ವರ್ಣಗೆದ್ದರೆ, ರಾಘವ್ ಎಸ್. (4ನಿ.44.16ಸೆ.) ಹಾಗೂ ಯಶ್ ಕಾರ್ತಿಕ್ (4ನಿ.51.41ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು.
- ಆರ್ಯನ್ ಅವರು 26.16ಸೆಕೆಂಡುಗಳಲ್ಲಿ ಸ್ಪರ್ಧೆ ಮುಗಿಸಿದರು. ಅನೀಶ್ ಎ. ಕೋರೆ (26.39ಸೆ.) ರಜತ ಪದಕಕ್ಕೆ ಹಾಗೂ ಅನ್ವಿತ್ ಆರ್.ಬಿ. ಕಂಚಿಗೆ ಕೊರಳೊಡ್ಡಿದರು. ಬಿಎಸಿನ ವಿಶಾಖನ್ ಶರವಣನ್ ಅವರು 17 ವರ್ಷದೊಳಗಿನ ಬಾಲಕರ 50 ಮೀ. ಹಾಗೂ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಚಿನ್ನ ಗೆದ್ದರು.

Dr Rajkumar IAS Academy

## ❖ ರೈತರಿಗೆ ₹1033 ಕೋಟಿ

**ಸಂದರ್ಭ: ಮುಂಗಾರು ಹಂಗಾಮಿ ನಲ್ಲಾದ ಅತಿವೃಷ್ಟಿಯಿಂದ ಬೆಳೆನಷ್ಟ ಅನುಭವಿಸಿದ 27 ಜಿಲ್ಲೆಗಳ 14.24 ಲಕ್ಷ ರೈತರಿಗೆ ರಾಜ್ಯ ಸರ್ಕಾರ ₹1,033.60 ಕೋಟಿ ಪರಿಹಾರ ನೀಡಿದ್ದು, ಎಲ್ಲ ರೈತರ ಬ್ಯಾಂಕ್ ಖಾತೆಗಳಿಗೆ 24 ಗಂಟೆಗಳಲ್ಲಿ ಈ ಮೊತ್ತ ಜಮೆಯಾಗಲಿದೆ.**

- ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ರಾಜ್ಯ ವಿಪತ್ತು ನಿರ್ವಹಣಾ ನಿಧಿಯ (ಎಸ್‌ಡಿಆರ್‌ಎಫ್) ₹1,218 ಕೋಟಿ ಮೊತ್ತದ ಹೊರತಾಗಿ ರಾಜ್ಯ ಸರ್ಕಾರ ಪ್ರತಿ ಹೆಕ್ಟೇರ್‌ಗೆ ₹8,500 ಹೆಚ್ಚುವರಿ ಪರಿಹಾರ ಘೋಷಿಸಿದೆ. ಈ ವಿಶೇಷ ಪ್ಯಾಕೇಜ್ ವಿತರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.
- ,'ಮುಂಗಾರಿನಲ್ಲಿ 82.56 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಜೂನ್ ನಿಂದ ಸೆಪ್ಟೆಂಬರ್ ಅವಧಿ ಯಲ್ಲಿನ ಅತಿವೃಷ್ಟಿ ಯಿಂದ 14.58 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ನಷ್ಟವಾಗಿತ್ತು. ₹10,748 ಕೋಟಿ ಹಾನಿ ಅಂದಾಜಿಸಲಾಗಿತ್ತು.
- ಅಲ್ಲದೇ 'ಮುಖ್ಯವಾಗಿ ತೊಗರಿ 5.36 ಲಕ್ಷ ಹೆಕ್ಟೇರ್, ಹೆಸರು ಕಾಳು 2.63 ಲಕ್ಷ ಹೆಕ್ಟೇರ್, ಹತ್ತಿ 2.68 ಲಕ್ಷ ಹೆಕ್ಟೇರ್ ಹಾಗೂ ಮೆಕ್ಕೆಜೋಳ 1.21 ಲಕ್ಷ ಹೆಕ್ಟೇರ್ ಹಾನಿಯಾಗಿರುವುದು ಜಂಟಿ ಸಮೀಕ್ಷೆಯಲ್ಲಿ ದೃಢಪಟ್ಟಿತ್ತು' ಎಂದರು.
- ಎಸ್‌ಡಿಆರ್‌ಎಫ್ ಮಾನದಂಡಗಳ ಪ್ರಕಾರ ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತ ವಾಗಿ 14.24 ಲಕ್ಷ ರೈತರಿಗೆ ₹1,218.03 ಕೋಟಿ ಪರಿಹಾರ ವಿತರಿಸಲಾಗಿದೆ. ಈಗ ನೀಡುತ್ತಿರುವ ಹೆಚ್ಚುವರಿ ಪರಿಹಾರ ₹1,033.60 ಕೋಟಿ ಸೇರಿ ಒಟ್ಟು ₹2,251.63 ಕೋಟಿ ನೀಡಿದಂತಾಗುತ್ತದೆ.

### ಬೆಳೆ ಹಾನಿ ಪರಿಶೀಲನೆಗೆ ಕೇಂದ್ರ ತಂಡ

- ಬೆಳೆ ಹಾನಿ ಪರಿಶೀಲಿಸಲು ಕೇಂದ್ರ ಸರ್ಕಾರ ಅಂತರ ಸಚಿವಾಲಯ ತಂಡವನ್ನು ರಚಿಸಿದ್ದು, ಕರ್ನಾಟಕಕ್ಕೆ ಶೀಘ್ರ ಭೇಟಿ ನೀಡಿ, ಪರಿಶೀಲನೆ ನಡೆಸಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಮಂತ್ರಿ ಅವರನ್ನು ಭೇಟಿ ಮಾಡಿ ಬೆಳೆಹಾನಿ ಪರಿಹಾರವಾಗಿ ರಾಜ್ಯಕ್ಕೆ ನೀಡಬೇಕಾದ ಬಾಕಿ ಇರುವ ₹614.90 ಕೋಟಿ, ಹಾನಿಗೊಳಗಾದ ಆಸ್ತಿಗಳ ಪುನರ್ ನಿರ್ಮಾಣಕ್ಕೆ ₹1,521.67 ಕೋಟಿ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದ್ದಾರೆ ಎಂದರು.
- ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬೆಳೆ ಕೊಯ್ಲಿನ ಹಂತಕ್ಕೆ ಬಂದಾಗ ಭಾರಿ ಮಳೆಯಿಂದ ಹೆಚ್ಚಿನ ಹಾನಿ ಸಂಭವಿಸಿದೆ. ಕೃಷ್ಣಾ ಮತ್ತು ಭೀಮಾ ಜಲಾನಯನ ಪ್ರದೇಶಗಳಲ್ಲಿ ನಿರಂತರ ಒಳ ಹರಿವು ಹೆಚ್ಚಳದಿಂದ ಕಲಬುರಗಿ, ಯಾದಗಿರಿ ಮತ್ತು ಬೀದರ ಜಿಲ್ಲೆಗಳಲ್ಲಿ ತೊಗರಿ ಮತ್ತು ಹತ್ತಿ ಬೆಳೆಗಳು ನಷ್ಟವಾಗಿವೆ ಎಂದು ಮಾಹಿತಿ ನೀಡಿದರು.

## ❖ ಸಿಎನ್‌ಆರ್ ರಾವ್‌ಗೆ ಶಿವಶ್ರೀ ಪ್ರಶಸ್ತಿ

**ಸಂದರ್ಭ: ನ್ಯಾ.ಶಿವರಾಜ್ ವಿ. ಪಾಟೀಲ ಪ್ರತಿಷ್ಠಾನದಿಂದ ನೀಡುವ 2025ನೇ ಸಾಲಿನ ಶಿವಶ್ರೀ ಪ್ರಶಸ್ತಿಗೆ ವಿಜ್ಞಾನಿ ಸಿಎನ್‌ಆರ್ ರಾವ್ ಅವರು ಭಾಜನರಾಗಿದ್ದಾರೆ.**

- ನಗರದ ಪ್ಯಾಲೇಸ್ ರಸ್ತೆಯಲ್ಲಿ ರುವ ಕಿಂಗ್ಸ್‌ಕೋರ್ಟ್ ಮಿನಿಹಾಲ್‌ನಲ್ಲಿ ನ.29ರಂದು ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.
- ಸುಪ್ರೀಂಕೋರ್ಟ್‌ನ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಪ್ರಶಸ್ತಿ ಪ್ರದಾನ ಮಾಡುವರು. ವಿಶ್ರಾಂತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ ಅಧ್ಯಕ್ಷತೆ ವಹಿಸುವರು. ಹಿರಿಯ ನ್ಯಾಯವಾದಿ ಉದಯಹೊಳ್ಳ ಅತಿಥಿಯಾಗಿ ಭಾಗವಹಿಸುವರು ಎಂದು ಪ್ರತಿಷ್ಠಾನದ ದಾವಣಗೆರೆ ಜಿಲ್ಲಾ ಸಂಚಾಲಕ ಎಲ್.ಎಚ್. ಅರುಣ್‌ಕುಮಾರ್ ತಿಳಿಸಿದ್ದಾರೆ.

## ❖ ಸಹಜೀವನಕ್ಕೂ ಕಲಂ 498 ಎ ಅನ್ವಯ

**ಸಂದರ್ಭ: 'ವಿವಾಹಿತ ಮಹಿಳೆಯ ಮೇಲಿನ ಕ್ರೌರ್ಯ ಮತ್ತು ಕಿರುಕುಳ ತಡೆಯುವ ಉದ್ದೇಶದಿಂದ ಭಾರತೀಯ ದಂಡ ಸಂಹಿತೆ ಕಾಯ್ದೆಗೆ ಸೇರ್ಪಡೆ ಮಾಡಲಾಗಿರುವ ಕಲಂ 498 'ಎ' ಕಾನೂನು ಬದ್ಧವಾಗಿ ವಿವಾಹ ವಾಗಿರುವ ಪತಿಗೆ ಮಾತ್ರವೇ ಸೀಮಿತವಾಗುವುದಿಲ್ಲ. ಬದಲಿಗೆ, ಮದುವೆಯ ಗುಣ ಲಕ್ಷಣಗಳನ್ನು ಹೊಂದಿ ಬಾಳುವೆ ನಡೆಸುವ ಲಿವ್–ಇನ್ (ಸಹಜೀವನ) ಸಂಬಂಧಗಳಿಗೂ ಅನ್ವಯವಾಗುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.**

- 'ನನ್ನ ಎರಡನೇ ಪತ್ನಿ (ಅರ್ಜಿ ದಾರರು ಪ್ರತಿಪಾದಿಸಿರುವ ಸ್ವ–ಇಚ್ಛಾ ಸಹವಾಸದಲ್ಲಿದ್ದ) ನನ್ನ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ಮತ್ತು ಇದಕ್ಕೆ ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ 54 ವರ್ಷದ ಹೃದ್ರೋಗ ತಜ್ಞರೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ತಿರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತ ಮಹತ್ವದ ಆದೇಶ ಪ್ರಕಟಿಸಿದೆ.
- 'ಈ ಪ್ರಕರಣದಲ್ಲಿ ದೂರುದಾರ 49 ವರ್ಷದ ಮಹಿಳೆ ಮೇಲ್ಮನವಿದಾರರನ್ನು 2010ರ ಅಕ್ಟೋಬರ್ 17ರಂದು ಹಿಂದೂ ಧಾರ್ಮಿಕ ವಿಧಿ ವಿಧಾನಗಳ ಅನ್ವಯ ಮದುವೆ ಯಾಗಿದ್ದಾಗಿ ಹೇಳಿಕೊಂಡಿದ್ದಾರೆ. ಆದರೆ, ಮೇಲ್ಮನವಿದಾರ ಪತಿ ಇದನ್ನು ಅಲ್ಲಗಳೆದು ಲಿವ್–ಇನ್ ಸಂಬಂಧ ಹೊಂದಿದ್ದಾಗಿ ಪ್ರತಿಪಾದಿಸಿದ್ದಾರೆ. ಅಷ್ಟಕ್ಕೂ ಇಬ್ಬರೂ ಒಟ್ಟಾಗಿ ನೆಲಸಿ, ಸಹಬಾಳ್ವೆಯಿಂದ ನಡೆದುಕೊಂಡಿದ್ದಾರೆ. ಸಾಮಾಜಿಕವಾಗಿ ಪತಿ-ಪತ್ನಿ ಎಂದೇ ಗುರುತಿಸಿಕೊಂಡು ಜವಾಬ್ದಾರಿಗಳನ್ನು ನಿರ್ವಹಿಸಿರುವುದು ಸ್ಪಷ್ಟವಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.
- 'ಇವರಿಬ್ಬರ ಸಂಬಂಧ ಆರು ವರ್ಷಗಳ ನಂತರ ಪರಸ್ಪರ ಕಲಹಗಳ ಪರಿಣಾಮ ಹದಗೆಟ್ಟಿದೆ. ಮೇಲ್ಮನವಿದಾರ ವೈದ್ಯರು ಎರಡನೇ ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡಿ ಆಕೆಯನ್ನು ಕೊಲೆ ಮಾಡಲು ಯತ್ನಿಸಿರುವ ಆರೋಪ ಎದುರಿಸುತ್ತಿದ್ದಾರೆ. ಹೀಗಾಗಿ, ಪತಿ-ಪತ್ನಿ ಹೊಂದಾಣಿಕೆಯನ್ನು ತೆರೆದಿಡುವ ಇಂತಹ ಸಂಬಂಧಗಳಲ್ಲೂ ಕ್ರೌರ್ಯ ಎಸಗಿರುವುದು ಸಾಬೀತಾದಲ್ಲಿ ಭಾರತೀಯ ದಂಡ ಸಂಹಿತೆ–1860ರ ಕಲಂ 498(ಎ) ಅಡಿ ಶಿಕ್ಷೆ ದೊರೆಯಲಿದೆ. ಈ ರೀತಿಯ ಆರೋಪ ಹೊತ್ತ ಪ್ರಕರಣ ಗಳಲ್ಲಿ ಕಾನೂನುಬದ್ಧ ಪತಿ–ಪತ್ನಿಯ ಸಂಬಂಧ ಹೊಂದಿರಲೇಬೇಕೆಂಬ ಅವಶ್ಯಕತೆ ಇಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

## ❖ 114 'ಆಯುಷ್ಮಾನ್ ಆರೋಗ್ಯ ಮಂದಿರ': ಕಲಬೆರಕೆಯ ಔಷಧ ಮಾರಿದರೆ ಜೀವಾವಧಿ ಶಿಕ್ಷೆ; ಕಾಯ್ದೆಗೆ ತಿದ್ದುಪಡಿ

**ಸಂದರ್ಭ: 15ನೇ ಹಣಕಾಸು ಆಯೋಗದ ಅನುದಾನದಲ್ಲಿ 2025-26ನೇ ಸಾಲಿನಲ್ಲಿ ರಾಜ್ಯದಾದ್ಯಂತ 114 'ಆಯುಷ್ಮಾನ್ ಆರೋಗ್ಯ ಮಂದಿರ'ಗಳ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ₹74.10 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ.**

- ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ಜನರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡಲು ಈ ಆರೋಗ್ಯ ಮಂದಿರಗಳನ್ನು ನಿರ್ಮಿಸಲಾಗುವುದು' ಎಂದರು.
- 'ಕೆಟಿಟಿಪಿ ಕಾಯ್ದೆ ಹಾಗೂ ನಿಯಮಗಳ ಅನುಸಾರ ಟೆಂಡರ್ ಆಹ್ವಾನಿಸಿ ಕಟ್ಟಡಗಳನ್ನು ನಿರ್ಮಿಸಲಾಗುವುದು. ಇಂತಹ ಮಂದಿರಗಳ ನಿರ್ಮಾಣ ಆಯುಷ್ಮಾನ್ ಭಾರತ ಯೋಜನೆಯ ಪ್ರಮುಖ ಅಂಶವಾಗಿದ್ದು, ಜನ ಕೇಂದ್ರಿತ ಚಿಕಿತ್ಸಾ ಸೌಲಭ್ಯ ಕಲ್ಪಿಸುವುದು ಉದ್ದೇಶ' ಎಂದರು.

- 'ಕಲಬೆರಕೆಯ ಔಷಧ ಅಥವಾ ಸೌಂದರ್ಯವರ್ಧಕವನ್ನು ಮಾರಾಟ ಮಾಡುವವರಿಗೆ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ 'ಔಷಧಗಳು ಮತ್ತು ಸೌಂದರ್ಯವರ್ಧಕಗಳು (ಕರ್ನಾಟಕ ತಿದ್ದುಪಡಿ) ಮಸೂದೆ– 2025'ಗೆ ಅನುಮೋದನೆ ನೀಡಲಾಗಿದೆ. ಬೆಳಗಾವಿ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಾಗುವುದು' ಎಂದರು.
- 'ಕೇಂದ್ರದ ಔಷಧ ಪ್ರಯೋಗಾಲಯಗಳ ಮತ್ತು ಔಷಧ ಮತ್ತು ಸೌಂದರ್ಯವರ್ಧಕಗಳ ಇಲಾಖೆಯ ನಿರ್ದೇಶಕರ ಕೆಲಸ ಕಾರ್ಯಗಳನ್ನು ರಾಜ್ಯ ಸರ್ಕಾರ ನಿಗದಿಪಡಿಸಿದ ಪ್ರಾಧಿಕಾರ ನಿರ್ವಹಿಸಲು ಕೂಡಾ ಮಸೂದೆ ಅವಕಾಶ ಮಾಡಿಕೊಡಲಿದೆ. ಕಲಬೆರಕೆಯ ಔಷಧ ಮತ್ತು ಸೌಂದರ್ಯವರ್ಧಕ ಹೊಂದಿರುವ ಅಪರಾಧಗಳನ್ನು ಜಾಮೀನುರಹಿತ ಅಪರಾಧವೆಂದು ಪರಿಗಣಿಸುವ ಪ್ರಸ್ತಾವವೂ ಮಸೂದೆಯಲ್ಲಿದೆ' ಎಂದರು.

**ಸಂಪುಟ ಸಭೆಯ ಇತರ ನಿರ್ಣಯಗಳು**

- ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಚೆಕ್-ಡ್ಯಾಂಗಳ ನಿರ್ಮಾಣ, ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ₹200 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಒಪ್ಪಿಗೆ
- ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಕೆಲವು ನಗರ ಸ್ಥಳೀಯ ಸಂಸ್ಥೆಗಳನ್ನು ಮತ್ತು ಕೆಲವು ಗ್ರಾಮಗಳನ್ನು ಸೇರ್ಪಡೆಗೊಳಿಸಿ 'ಬೃಹತ್ ಮೈಸೂರು ಮಹಾನಗರಪಾಲಿಕೆ'ಯಾಗಿ ಪರಿವರ್ತನೆ
- ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು 'ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ' ಎಂದು ಮರು ನಾಮಕರಣ ಮಾಡಲು 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳು (ಎರಡನೇ ತಿದ್ದುಪಡಿ) ಮಸೂದೆ– 2025'ಕ್ಕೆ ಒಪ್ಪಿಗೆ.
- ಕರ್ನಾಟಕ 'ರಾಜ್ಯ ಹಜ್ ಸಮಿತಿ ನಿಯಮಾವಳಿ– 2025'ಕ್ಕೆ ಅನುಮೋದನೆ
- ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದ ಸ.ನಂ.47ರಲ್ಲಿ 3-12 ಎಕರೆ ಜಮೀನನ್ನು ಬಸ್ ನಿಲ್ದಾಣ ಮತ್ತು ಬಸ್ ಡಿಪೋ ನಿರ್ಮಾಣಕ್ಕೆ ಕೆಎಸ್‌ಆರ್‌ಟಿಸಿಗೆ ಉಚಿತವಾಗಿ ಮಂಜೂರು
- ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ-ಭಟ್ಕಳ ವಿಧಾನಸಭಾ ಕ್ಷೇತ್ರದ ಮುಳ್ಕೊಡು ಗ್ರಾಮದ ಸಮೀಪ ಶರಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ (ಉಪ್ಪು ನೀರು ತಡೆ ಅಣೆಕಟ್ಟು) ₹200 ಕೋಟಿ ಅಂದಾಜು ಮೊತ್ತದಲ್ಲಿ ನಿರ್ಮಾಣ
- ಚಂದ್ರಗುತ್ತಿ ಶ್ರೀ ರೇಣುಕಾಂಬ ಅಭಿವೃದ್ಧಿ ಪ್ರಾಧಿಕಾರ ಮಸೂದೆ– 2025ಕ್ಕೆ ಅನುಮೋದನೆ
- ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಹೊರವಲಯದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ನೂತನ ಸ್ಯಾಟ್ ಲೈಟ್ ಬಸ್ ನಿಲ್ದಾಣ ₹ 17.50 ಕೋಟಿ ಮೊತ್ತದಲ್ಲಿ ನಿರ್ಮಾಣ
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 1,000 ಚಾಲಕರ ನೇಮಕಾತಿಗೆ 2019ರಲ್ಲಿ ಹೊರ ಡಿಸಿದ್ದ ಪ್ರಕಟಣೆಯಂತೆ ನೇಮಕಾತಿ ಪ್ರಕ್ರಿಯೆ ನಡೆಸಲು ಒಪ್ಪಿಗೆ
- ಕಬಿನಿ ಎಡದಂಡೆ ನಾಲೆಯ ಡೀಪ್ ಕಟ್ ಭಾಗಕ್ಕೆ ಕಟ್ ಆ್ಯಂಡ್ ಕವರ್ ಹಾಗೂ ಅಡ್ಡಮೋರಿಗಳ ನಿರ್ಮಾಣ ಕಾಮಗಾರಿ ಮತ್ತು ಕಬಿನಿ ಎಡದಂಡೆ ನಾಲೆಯ ವಿತರಣಾ ಕಾಲುವೆ-1 ರಿಂದ 19ರವರೆಗಿನ ಅಭಿವೃದ್ಧಿ ಕಾಮಗಾರಿಗಳನ್ನು ₹ 50 ಕೋಟಿಯಲ್ಲಿ ಕೈಗೊಳ್ಳಲು ಸಹಮತಿ

**ಗ್ರಾ.ಪಂಗಳಿಗೆ ಪಟ್ಟಣ ಪಂಚಾಯಿತಿ ಭಾಗ್ಯ**

- ಬೀದರ್ ಜಿಲ್ಲೆಯ ಕಮಠಾಣಾ, ಹುಲಸೂರು, ಮೈಸೂರು ಜಿಲ್ಲೆಯ ಸಾಲಿಗ್ರಾಮ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತ್ಯಾಮಗೊಂಡ್ಲು, ಯಾದಗಿರಿ ಜಿಲ್ಲೆಯ ಸಗರ (ಬಿ), ವಡಗೇರಾ, ಬೆಳಗಾವಿ ಜಿಲ್ಲೆಯ ಅಂಕಲಿ, ಸುರೇಬಾನ, ಮನಿಹಾಳ, ಕಟಕೋಳ, ಉತ್ತರಕನ್ನಡ ಜಿಲ್ಲೆಯ ಮಾವಳ್ಳಿ-2 ಮತ್ತು ಮಾವಳ್ಳಿ-2 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.
- ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಹಾಗೂ ಬೆಳಗಾವಿ ಜಿಲ್ಲೆಯ ರಾಮದುರ್ಗ ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವಗಳಿಗೂ ಸಭೆ ಅನುಮೋದನೆ ನೀಡಿದೆ.

**ಅದಿರು ಅಕ್ರಮ ರಫ್ತು ತಡೆಗೆ ನೀತಿ**

- ರಾಜ್ಯದ 13 ಕಿರು ಬಂದರುಗಳ ಮೂಲಕ ಕಬ್ಬಿಣದ ಅದಿರು ಅಕ್ರಮ ರಫ್ತು ತಡೆಯಲು 'ಕರ್ನಾಟಕ ಕಿರು ಬಂದರುಗಳಲ್ಲಿ ಕಬ್ಬಿಣದ ಅದಿರು ನಿರ್ವಹಣಾ ನೀತಿ- 2025' ಎಂಬ ಪ್ರಮಾಣಿತ ಕಾರ್ಯನಿರ್ವಹಣಾ ವಿಧಾನ (ಎಸ್‌ಒಪಿ) ಜಾರಿ ತರಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.
- ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, 'ರಾಜ್ಯದಿಂದ ಅಕ್ರಮವಾಗಿ ಅದಿರುಗಳ ಸಾಗಣೆ ಮತ್ತು ರಫ್ತು ತಡೆಯಲು ರೂಪುರೇಷೆ ಸಿದ್ಧಪಡಿಸುವ ಉದ್ದೇಶದಿಂದ 10 ಸಣ್ಣ ಬಂದರುಗಳಿಂದ ಕಬ್ಬಿಣದ ಅದಿರು ರಫ್ತು ನಿಷೇಧಿಸಿ 2010ರ ಜುಲೈ 26ರಂದು ಸರ್ಕಾರ ಆದೇಶ ಹೊರಡಿಸಿತ್ತು.
- ಆದರೂ, ಕೇಂದ್ರ ಸರ್ಕಾರದ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಈ ಬಂದರುಗಳಿಂದ ಕಬ್ಬಿಣದ ಅದಿರು ರಫ್ತು ಮಾಡಲು ಸುಪ್ರೀಂ ಕೋರ್ಟ್ 2022ರಲ್ಲಿ ಅನುಮತಿ ನೀಡಿತ್ತು. ಹೊಸ ನೀತಿ ಜಾರಿಗೆ ಬರಲಿರುವ ಕಾರಣ ಈ ಆದೇಶವನ್ನು ಹಿಂಪಡೆಯಲಾಗುವುದು' ಎಂದರು.
- 'ಅದಿರು ಅಕ್ರಮ ಸಾಗಣೆಗೆ ಸಂಬಂಧಿಸಿದ ಹಲವು ಪ್ರಕರಣಗಳು ನ್ಯಾಯಾಲಯಗಳಲ್ಲಿ ಮತ್ತು ಲೋಕಾಯುಕ್ತದಲ್ಲಿ ವಿಚಾರಣೆ ಬಾಕಿಯಿದೆ. ಹೀಗಾಗಿ, ಹೊಸ ನೀತಿಯನ್ನು ಪೂರ್ವಾನ್ವಯವಾಗಿ ಜಾರಿಗೆ ತರಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಹೊಸ ನೀತಿ ಜಾರಿಗೆ ಬರಲಿದೆ' ಎಂದು ಅವರು ವಿವರಿಸಿದರು.
- 'ಕಾರವಾರ, ತದಡಿ, ಭಟ್ಕಳ, ಮಲ್ಪೆ, ಹಳೇ ಮಂಗಳೂರು, ಬೇಲೆಕೇರಿ, ಹೊನ್ನಾವರ, ಕುಂದಾಪುರ, ಹಂಗಾರಕಟ್ಟೆ ಮತ್ತು ಪಡುಬಿದ್ರಿ ಬಂದರುಗಳಿಂದ ಕಬ್ಬಿಣದ ಅದಿರು ರಫ್ತು ಮಾಡುವುದನ್ನು 2010ರ ಆದೇಶದಲ್ಲಿ ನಿಷೇಧಿಸಿತ್ತು. ರಾಜ್ಯದಲ್ಲಿ ಒಟ್ಟು 13 ಪ್ರಮುಖವಲ್ಲದ ಬಂದರುಗಳಿವೆ' ಎಂದರು.
- 'ಹೊಸ ನೀತಿಯಡಿ ನೋಂದಣಿ ಶುಲ್ಕ, ಕಬ್ಬಿಣದ ಅದಿರನ್ನು ನಿರ್ವಹಿಸಲು ಭೂಮಿ ಹಂಚಿಕೆಗಾಗಿ ಪರವಾನಗಿ ಶುಲ್ಕ, ಬಂದರಿನಲ್ಲಿ ಸರಕುಗಳ ಸಾಗಣೆ ಅಥವಾ ನಿರ್ವಹಣೆಯ ಸೇವೆಗಳಿಗೆ ವಿಧಿಸುವ ಶುಲ್ಕ, ಕನಿಷ್ಠ ಗ್ಯಾರಂಟಿ ಠೇವಣಿ, ಭದ್ರತಾ ಠೇವಣಿ, ನಿಯಮ ಪಾಲಿಸದಿದ್ದರೆ ದಂಡ ವಿಧಿಸಲಾಗುವುದು. ಮಾಲಿನ್ಯ ತಗ್ಗಿಸುವಿಕೆ, ಸುರಕ್ಷತೆ ಮತ್ತು ಮೇಲ್ವಿಚಾರಣೆ ಶುಲ್ಕದ ಮೂಲಕ ಸರ್ಕಾರಕ್ಕೆ ಪ್ರತಿ ಟನ್‌ಗೆ ₹ 13ರಂತೆ ಆದಾಯ ಬರಲಿದೆ' ಎಂದು ಸಚಿವರು ವಿವರಿಸಿದರು.

**13 ಕಿರು ಬಂದರುಗಳು**

- **ಕಾರವಾರ, ಹೊನ್ನಾವರ, ಮಲ್ಪೆ, ಬೇಲೆಕೇರಿ, ಮಂಕಿ, ಪಡುಬಿದ್ರಿ, ಕೇಣಿ, ಭಟ್ಕಳ, ಹಳೇ ಮಂಗಳೂರು, ತದಡಿ, ಕುಂದಾಪುರ, ಪಾವಿನಕುರ್ವೆ, ಹಂಗಾರಕಟ್ಟೆ**

## ❖ ಕಾವೇರಿ ತಂತ್ರಾಂಶ: ಪರಿಷ್ಕರಣೆಗೆ ನಿರ್ದೇಶನ

**ಸಂದರ್ಭ: 'ಚಾಲ್ತಿಯಲ್ಲಿರುವ ಕಾವೇರಿ 2.0 ತಂತ್ರಾಂಶದ ಕಾನೂನಿನಲ್ಲಿ, 'ಮ್ಯುಟೇಷನ್ ಆಧಾರಿತ ಸಿವಿಲ್ ಕೋರ್ಟ್ ಡಿಕ್ರಿ' ಎಂಬ ಹೊಸ ಕಾರ್ಯ ನಿರ್ವಹಣಾ ಶೀರ್ಷಿಕೆಯನ್ನೂ ಸೇರ್ಪಡೆ ಮಾಡಿ ಪರಿಷ್ಕರಿಸಬೇಕು' ಎಂದು ಹೈಕೋರ್ಟ್, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಇಲಾಖೆಗೆ ನಿರ್ದೇಶಿಸಿದೆ.**

- 'ಸಿವಿಲ್ ವ್ಯಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಅಂಗೀಕರಿಸಿದ ರಾಜಿ ಡಿಕ್ರಿಯ ಅನುಸಾರ ನಮ್ಮ ಹೆಸರಿಗೆ ಖಾತಾ ವರ್ಗಾವಣೆ ಮಾಡಲು ನಿರ್ದೇಶಿಸಬೇಕು' ಎಂದು ಕೋರಿ ಬಂಟ್ವಾಳ ತಾಲ್ಲೂಕಿನ ನರಿಕೊಂಬು ಗ್ರಾಮದ ಗಿಲ್ಬರ್ಟ್ ವಾಝ್ ಸೇರಿದಂತೆ ಐವರು ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.
- 'ಸದ್ಯ ಕಾವೇರಿ 2.0 ಮಾರಾಟ, ಗಿಫ್ಟ್ ಡೀಡ್, ಅಡಮಾನ, ಪಿತ್ರಾರ್ಜಿತ ಆಸ್ತಿ ಕುರಿತ ಚಟುವಟಿಕೆಗಳನ್ನು ಆಧರಿಸಿದೆ ಮತ್ತು ಇದರಲ್ಲಿ ಆಸ್ತಿ ವಿವಾದಗಳ ಕುರಿತಂತೆ ಸಿವಿಲ್ ನ್ಯಾಯಾಲಯಗಳ ತೀರ್ಪುಗಳನ್ನು ಪರಿಶೀಲಿಸಲು ಯಾವುದೇ ಅವಕಾಶವಿಲ್ಲ. ಇದರಿಂದಾಗಿ ನಾಗರಿಕರು, ನ್ಯಾಯಾಲಯಗಳು ನಿರ್ಣಾಯಕವಾಗಿ ನಿರ್ಧರಿಸಿದ ವಿಷಯಗಳಿಗೆ ಹಲವು ಅನುಮೋದನೆಗಳು, ಪರಿಶೀಲನೆಗಳು ಮತ್ತು ಪ್ರಮಾಣೀಕರಣಗಳನ್ನು ಪಡೆಯಬೇಕೆಂದು ಸೂಚಿಸುತ್ತದೆ. ಹಾಗಾಗಿ, ಹಾಲಿ ತಂತ್ರಾಂಶದಲ್ಲಿ ಗೊಂದಲ ಉಂಟು ಮಾಡುತ್ತಿರುವ ಕಾರಣ ಪರಿಷ್ಕರಣೆ ಅತ್ಯಗತ್ಯವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

**'ಖಚಿತಪಡಿಸಿಕೊಳ್ಳಬೇಕು'**

- 'ಕೋರ್ಟ್ ತೀರ್ಪುಗಳು ಮತ್ತು ಆಡಳಿತಾತ್ಮಕ ನಿರ್ಣಯಗಳನ್ನು ಜಾರಿಗೊಳಿಸುವ ಮಧ್ಯೆ ಸಮನ್ವಯ ಸ್ಥಾಪಿಸಲು ಮತ್ತು ಸಿವಿಲ್ ನ್ಯಾಯಾಲಯದ ತೀರ್ಪುಗಳು ರಾಜ್ಯದ ಡಿಜಿಟಲ್ ಆದಾಯ ಮೂಲಸೌಕರ್ಯದಲ್ಲಿ ಸ್ವಯಂಚಾಲಿತವಾಗಿ ಮನ್ನಣೆ ಪಡೆಯುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ (ಸಿಎಸ್‌ಜಿ) ಸಹಯೋಗದೊಂದಿಗೆ ಕಾನೂನಿನ ಪರಿಷ್ಕರಣೆ ಮಾಡಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

## ❖ ಬಹುಪತ್ನಿತ್ವ ನಿಷೇಧ ಮಸೂದೆಗೆ ಒಪ್ಪಿಗೆ ಅಸ್ಸಾಂ ವಿಧಾನಸಭೆ ಅಂಗೀಕರಿಸಿದೆ

**ಸಂದರ್ಭ: ಬಹುಪತ್ನಿತ್ವವನ್ನು ಅಪರಾಧವೆಂದು ಪರಿಗಣಿಸಿ ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ವಿಧಿಸುವ ಅವಕಾಶವನ್ನು ಮಸೂದೆಯಲ್ಲಿ ಕಲ್ಪಿಸಲಾಗಿದೆ.**

- ಈ ಮಸೂದೆಯು ಇಸ್ಲಾಂಗೆ ವಿರುದ್ಧವಾಗಿಲ್ಲ ಎಂದು ಸ್ಪಷ್ಟಪಡಿಸಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಮತ್ತು ಇತರೆ ಎಲ್ಲ ಸಮುದಾಯದವರು ಈ ಮಸೂದೆಯ ವ್ಯಾಪ್ತಿಯಡಿ ಬರಲಿದ್ದಾರೆ ಎಂದರು.

- ಮುಂದಿನ ವರ್ಷ ನಡೆಯಲಿರುವ ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದು ಮುಖ್ಯಮಂತ್ರಿಯಾದರೆ, ರಾಜ್ಯದಲ್ಲಿ ಏಕರೂಪದ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸು ವುದಾಗಿ ಹಿಮಂತ ಹೇಳಿದರು.
- 'ವಂಚಿಸಿ ಮದುವೆಯಾಗುವವರ ವಿರುದ್ಧದ ಮಸೂದೆಯನ್ನು ಫೆಬ್ರುವರಿ ಅಂತ್ಯದಲ್ಲಿ ಜಾರಿಗೆ ತರುವ ಯೋಜನೆ ಇದೆ ಎಂದು ಅವರು ಹೇಳಿದರು.

## ❖ 'ಪಶ್ಚಿಮ ಬಂಗಾಳದಲ್ಲಿ 26 ಲಕ್ಷ ಮತದಾರರು ಹೊಂದಿಕೆ ಆಗುತ್ತಿಲ್ಲ'

**ಸಂದರ್ಭ: ಪಶ್ಚಿಮ ಬಂಗಾಳದಲ್ಲಿನ ಈಗಿನ ಮತದಾರರ ಪಟ್ಟಿಯಲ್ಲಿರುವ ಹೆಸರುಗಳ ಪೈಕಿ 26 ಲಕ್ಷ ಮತದಾರರ ಹೆಸರುಗಳು 2002ರ ಪಟ್ಟಿಯೊಂದಿಗೆ ಹೊಂದಿಕೆಯಾಗುತ್ತಿಲ್ಲ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.**

- 2002 ಮತ್ತು 2006ರಲ್ಲಿ ವಿವಿಧ ರಾಜ್ಯಗಳಲ್ಲಿ ನಡೆದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್ಐಆರ್) ಈಗ ನಡೆಯುತ್ತಿರುವ ಎಸ್ಐಆರ್ ಪ್ರಕ್ರಿಯೆಯ ಜತೆ ಹೋಲಿಸಿ ನೋಡಲಾಗುತ್ತಿದೆ. ಈ ವೇಳೆ ಪಶ್ಚಿಮ ಬಂಗಾಳದಲ್ಲಿ ಇಷ್ಟು ವ್ಯತ್ಯಾಸ ಕಂಡುಬಂದಿದೆ ಎಂದು ಅಧಿಕಾರಿ ಯೊಬ್ಬರು ಮಾಹಿತಿ ನೀಡಿದ್ದಾರೆ.
- 6 ಕೋಟಿ ಅರ್ಜಿ ಡಿಜಿಟಲೀಕರಣ: ಹಾಲಿ ನಡೆಯುತ್ತಿರುವ ಎಸ್ಐಆರ್ ಪ್ರಕ್ರಿಯೆ ಅಡಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಆರು ಕೋಟಿಗೂ ಹೆಚ್ಚು ಗಣತಿ ನಮೂನೆಗಳ ಡಿಜಿಟಲೀಕರಣ ಮಾಡಲಾಗಿದೆ. ಒಮ್ಮೆ ಈ ಕಾರ್ಯ ಪೂರ್ಣಗೊಂಡ ಬಳಿಕ ನಮೂನೆಗಳನ್ನು ಮ್ಯಾಪಿಂಗ್ ಮಾಡಲಾಗುತ್ತದೆ. ಅಲ್ಲಿ ಅವುಗಳನ್ನು ಹಿಂದಿನ ಎಸ್ಐಆರ್ ದಾಖಲೆಗಳೊಂದಿಗೆ ಹೊಂದಿಸಿ ಪರಿಶೀಲಿಸಲಾಗುತ್ತದೆ ಎಂದು ಆಯೋಗದ ಮೂಲಗಳು ತಿಳಿಸಿವೆ. ಡಿಜಿಟಲೀಕರಣ ಕಾರ್ಯ ಮುಂದುವರಿದಂತೆ ಈ ವ್ಯತ್ಯಾಸ ಮತ್ತಷ್ಟು ಹಿಗ್ಗಬಹುದು ಎಂದು ಹೇಳಿದ್ದಾರೆ.

## ❖ ಕ್ಲೇಮ್‌ಗೆ ಏಕೀಕೃತ ಪೋರ್ಟಲ್: ಎಲ್ಲ ಬಗೆಯ ಹಣಕಾಸು ಆಸ್ತಿಗಳ ಕ್ಲೇಮ್‌ಗೆ ನೆರವು: ಸರ್ಕಾರದ ಮಾಹಿತಿ

**ಸಂದರ್ಭ: ಕ್ಲೇಮ್ ಮಾಡಿಕೊಳ್ಳದಿದ್ದ ಒಟ್ಟು ₹1,887 ಕೋಟಿಯನ್ನು ಅಭಿಯಾನ ಆರಂಭವಾದ ನಂತರದಲ್ಲಿ ಸಂಬಂಧಪಟ್ಟವರಿಗೆ ಮರಳಿಸಲಾಗಿದೆ.**

- ಬ್ಯಾಂಕ್ ಠೇವಣಿಗಳು, ಪಿಂಚಣಿ ನಿಧಿಗಳು, ಷೇರುಗಳು, ಕಂಪನಿಗಳು ನೀಡುವ ಲಾಭಾಂಶ (ಡಿವಿಡೆಂಡ್) ಸೇರಿದಂತೆ ವಿವಿಧೆಡೆ ಇರುವ, ಕ್ಲೇಮ್ ಮಾಡಿರದ ಹಣಕಾಸಿನ ಆಸ್ತಿಗಳನ್ನು ಕ್ಲೇಮ್ ಮಾಡುವ ಪ್ರಕ್ರಿಯೆ ಯನ್ನು ಸುಲಭವಾಗಿಸುವ ಏಕೀಕೃತ ಪೋರ್ಟಲ್ ಒಂದನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
- ಕೇಂದ್ರ ಹಣಕಾಸು ಸಚಿವಾಲಯವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಜೊತೆಗೂಡಿ ಈ ಪೋರ್ಟಲ್ ಅಭಿವೃದ್ಧಿಪಡಿಸಲು ಕೆಲಸ ಮಾಡುತ್ತಿದೆ ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ. ನಾಗರಾಜು ತಿಳಿಸಿದ್ದಾರೆ.
- ಈ ಪೋರ್ಟಲ್‌ಅನ್ನು ಶೀಘ್ರವೇ ಆರಂಭಿಸಲಾಗುತ್ತದೆ ಎಂದು ಅವರು ಪಂಜಾಬ್ ನ್ಯಾಷನಲ್ ಬ್ಯಾಂಕ್ ಆಯೋಜಿಸಿದ್ದ 'ನಿಮ್ಮ ಹಣ ನಿಮ್ಮ ಹಕ್ಕು' ಕಾರ್ಯಕ್ರಮದಲ್ಲಿ ಹೇಳಿದ್ದಾರೆ.
- 'ಹಣಕಾಸು ಸೇವೆಗಳ ಇಲಾಖೆಯು ಈ ಪೋರ್ಟಲ್ ವಿಚಾರವಾಗಿ ಆರ್‌ಬಿಐ ಜೊತೆ ಕೆಲಸ ಮಾಡುತ್ತಿದೆ. ಈ ಪೋರ್ಟಲ್‌ನ ಸಮನ್ವಯದ ಕೆಲಸವನ್ನು ಆರ್‌ಬಿಐ ನಿರ್ವಹಿಸಲಿದೆ' ಎಂದು ಅವರು ತಿಳಿಸಿದ್ದಾರೆ.

- ಕ್ಲೇಮ್ ಮಾಡಿರದ ಠೇವಣಿಗಳ ಕ್ಲೇಮ್‌ಗಾಗಿ ಆರ್‌ಬಿಐ 'ಉದ್ಗಮ್' ಪೋರ್ಟಲ್ ಆರಂಭಿಸಿದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) 'ಮಿತ್ರ' ಹೆಸರಿನ ಪೋರ್ಟಲ್ ಹೊಂದಿದೆ. ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) 'ಬಿಮಾ ಭರೋಸಾ' ಎಂಬ ಪೋರ್ಟಲ್ ಹೊಂದಿದೆ.
- ಹೊಸದಾಗಿ ಆರಂಭವಾಗಲಿರುವ ಏಕೀಕೃತ ಪೋರ್ಟಲ್ ಜನರಿಗೆ ತಮ್ಮ ಹಣವನ್ನು, ಹಣಕಾಸಿನ ಆಸ್ತಿಯನ್ನು ಕ್ಲೇಮ್ ಮಾಡುವ ಪ್ರಕ್ರಿಯೆಯನ್ನು ಸುಲಭ ವಾಗಿಸಲಿದೆ. ಕ್ಲೇಮ್ ವಿಚಾರವಾಗಿ ಇರುವ ಅರಿವಿನ ಕೊರತೆಯ ಕಾರಣದಿಂದಾಗಿ ದೊಡ್ಡ ಮೊತ್ತವು ಹಾಗೇ ಉಳಿದಿದೆ ಎಂದು ಅವರು ತಿಳಿಸಿದ್ದಾರೆ.
- ಕೇಂದ್ರ ಸರ್ಕಾರವು ಹಣಕಾಸಿನ ಒಳಗೊಳ್ಳುವಿಕೆಗೆ ಹಾಗೂ ಹಣಕಾಸಿನ ಶಿಕ್ಷಣಕ್ಕೆ ನಿರಂತರವಾಗಿ ಒತ್ತು ನೀಡುತ್ತಿದೆ. ಇದರ ಭಾಗವಾಗಿ ಜನರಿಗೆ ಅವರ ಉಳಿತಾಯದ ಹಣವನ್ನು ಪಡೆದುಕೊಳ್ಳಲು ನೆರವು ನೀಡಲು ಯತ್ನಿಸುತ್ತಿದೆ ಎಂದಿದ್ದಾರೆ.
- ಹಣಕಾಸಿನ ವಲಯದಲ್ಲಿ ಕ್ಲೇಮ್ ಆಗದೆ ಹಾಗೇ ಉಳಿದಿರುವ ಹಣವನ್ನು ಜನ ಕ್ಲೇಮ್ ಮಾಡುವಂತೆ ಉತ್ತೇಜನ ನೀಡುವ ಅಭಿಯಾನವೊಂದಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಕ್ಟೋಬರ್ 4ರಂದು ಚಾಲನೆ ನೀಡಿದ್ದಾರೆ.

## ❖ 'ಜಿಎಸ್‌ಟಿ ಇಳಿಕೆಯಿಂದ ಬೇಡಿಕೆ ಚುರುಕು'

**ಸಂದರ್ಭ: ಜಿಎಸ್‌ಟಿ ದರ ಇಳಿಕೆಯು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಅಕ್ಟೋಬರ್ ತಿಂಗಳ ವರದಿ ತಿಳಿಸಿದೆ.**

- ದೇಶದ ಆರ್ಥಿಕತೆ ಸ್ಥಿರವಾಗಿದೆ. ಪ್ರಸಕ್ತ ಆರ್ಥಿಕ ವರ್ಷದುದ್ದಕ್ಕೂ ಬೆಳವಣಿಗೆ ಕಾಯ್ದುಕೊಳ್ಳಲಿದೆ ಎಂದು ತಿಳಿಸಿದೆ.
- ಜಿಎಸ್‌ಟಿ ಇಳಿಕೆ ಕೂಡ ಚಿಲ್ಲರೆ ಹಣದುಬ್ಬರದ ಇಳಿಕೆಗೆ ನೆರವಾಗಿದೆ. ಇತ್ತೀಚೆಗಿನ ತೆರಿಗೆ ಸುಧಾರಣೆಗಳಿಂದ ಕುಟುಂಬದ ಮಟ್ಟದಲ್ಲಿ ವೆಚ್ಚಕ್ಕೆ ಹೆಚ್ಚು ಹಣ ಉಳಿಯುತ್ತಿದೆ ಎಂದು ತಿಳಿಸಿದೆ.
- ಜಾಗತಿಕ ಮಾರುಕಟ್ಟೆಗಳಲ್ಲಿ ವ್ಯಾಪಾರ ಅನಿಶ್ಚಿತತೆ ಉಂಟಾಗಿದೆ. ಇದು ಪ್ರಗತಿಯನ್ನು ಮಂದಗೊಳಿಸಿದೆ. ಆದರೂ, ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಿಂದ ಶೇ 7.5ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಇದು ದೇಶದ ಆರ್ಥಿಕ ಚಟುವಟಿಕೆಯ ಸದೃಢತೆಯನ್ನು ಸೂಚಿಸುತ್ತಿದೆ ಎಂದು ಹೇಳಿದೆ.
- ಸೆಪ್ಟೆಂಬರ್ ತ್ರೈಮಾಸಿಕದ ಜಿಡಿಪಿ ಪ್ರಗತಿ ಅಂಕಿ–ಅಂಶಗಳು ಶುಕ್ರವಾರ ಪ್ರಕಟವಾಗಲಿವೆ.
- ವ್ಯಾಪಾರ ನಿಯಮಗಳಲ್ಲಿ ಅನಿಶ್ಚಿತತೆ, ಜಾಗತಿಕ ರಾಜಕೀಯ ಬಿಕ್ಕಟ್ಟು, ಷೇರುಪೇಟೆಯ ಏರಿಳಿತ ಸೇರಿದಂತೆ ಜಾಗತಿಕ ಅನಿಶ್ಚಿತತೆಯು ದೇಶದ ರಫ್ತು, ಬಂಡವಾಳ ಒಳಹರಿವು ಮತ್ತು ಹೂಡಿಕೆದಾರರ ಭಾವನೆ ಮೇಲೆ ಪರಿಣಾಮ ಬೀರಿವೆ ಎಂದು ತಿಳಿಸಿದೆ.
- ಕಾರ್ಪೊರೇಟ್ ಕಂಪನಿಗಳ ಕಾರ್ಯಾಚರಣೆ ಆರೋಗ್ಯಕರವಾಗಿದ್ದು, ಸುಸ್ಥಿರ ಲಾಭ ಕಂಡಿವೆ. ಹೊಸದಾಗಿ ಬಂದಿರುವ ಕಾರ್ಮಿಕ ಸಂಹಿತೆಗಳು 'ವಿಕಸಿತ ಭಾರತ'ದ ಗುರಿಗೆ ನೆರವಾಗಿವೆ ಎಂದು ತಿಳಿಸಿದೆ.

## ❖ ‘ನಿರುದ್ಯೋಗಿಯಾಗಿದ್ದರೂ ಜೀವನಾಂಶ ಕಡ್ಡಾಯ’

**ಸಂದರ್ಭ: ‘ಪತಿ ನಿರುದ್ಯೋಗಿಯಾಗಿದ್ದರೂ ಪತ್ನಿಗೆ ಜೀವನಾಂಶ ಪಾವತಿಸುವುದು ಕಡ್ಡಾಯ’ ಎಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಪ್ರಕರಣವೊಂದರಲ್ಲಿ ತೀರ್ಪು ನೀಡಿದೆ.**

- ‘ಪತಿ ದೈಹಿಕವಾಗಿ ದುಡಿಯಲು ಸಮರ್ಥನಿದ್ದರೂ ನಿರುದ್ಯೋಗದ ಕಾರಣ ನೀಡಿ ಪತ್ನಿಗೆ ಜೀವನಾಂಶ ನೀಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.
- ನ್ಯಾಯಮೂರ್ತಿ ಸೌರವ್ ಲವಾನಿಯಾ ನೇತೃತ್ವದ ಏಕ ಸದಸ್ಯ ಪೀಠವು ಈ ಮಹತ್ವದ ತೀರ್ಪು ನೀಡಿದೆ. ಪತ್ನಿಗೆ ತಿಂಗಳಿಗೆ ₹2,500 ಮಧ್ಯಂತರ ಪರಿಹಾರ ನೀಡುವಂತೆ ಕುಟುಂಬ ನ್ಯಾಯಾಲಯ ನೀಡಿದ ತೀರ್ಪನ್ನು ಪ್ರಶ್ನಿಸಿ, ವ್ಯಕ್ತಿಯೊಬ್ಬರು ಹೈಕೋರ್ಟ್‌ನ ಲಖನೌ ಪೀಠದ ಮೊರೆಹೋಗಿದ್ದರು.
- ಪತ್ನಿ ಮತ್ತು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು ಪತಿಯ ಪವಿತ್ರ ಕರ್ತವ್ಯ. ನಿರುದ್ಯೋಗದ ನೆಪವೊಡ್ಡಿ ಅವರಿಗೆ ಹಣಕಾಸು ನೆರವು ನಿರಾಕರಿಸುವುದು ತಪ್ಪು. ದೈಹಿಕವಾಗಿ ಸಮರ್ಥನಿರುವ ವ್ಯಕ್ತಿ ಕೂಲಿ ಮಾಡಿಯಾದರೂ ತನ್ನ ಕುಟುಂಬವನ್ನು ಸಲಹಬೇಕು. ನಿರುದ್ಯೋಗದ ಕಾರಣ ನೀಡಿ, ಪತ್ನಿಗೆ ಕಾನೂನುಬದ್ಧವಾಗಿ ನೀಡಬೇಕಿರುವ ಜೀವನಾಂಶ ನಿರಾಕರಿಸುವಂತಿಲ್ಲ’ ಎಂದು ಕೋರ್ಟ್ ಹೇಳಿದೆ.
- ಆಹಾರ, ಆಶ್ರಯಕ್ಕಾಗಿ ಪತ್ನಿ ಮತ್ತು ಮಕ್ಕಳು ಅಲೆದಾಡುವುದನ್ನು ತಪ್ಪಿಸಲು, ಜೀವನಾಂಶವನ್ನು ತ್ವರಿತವಾಗಿ ಪಾವತಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದರೆ ಅಥವಾ ವಿಳಂಬ ಮಾಡಿದರೆ ಅದು ಶಿಕ್ಷಾರ್ಹ ಅಪರಾಧ ಎಂದು ದೂರುದಾರನಿಗೆ ಕೋರ್ಟ್ ಎಚ್ಚರಿಕೆ ನೀಡಿತು.
- ಪಂಜಾಬ್‌ನ ಜಲಂಧರ್‌ನ ಮಹಿಳೆ 2013ರಲ್ಲಿ ವಿವಾಹವಾಗಿದ್ದರು. ‘ಪತಿ ಮತ್ತು ಅವರ ಕುಟುಂಬದವರಿಂದ ವರದಕ್ಷಿಣೆ ಕಿರುಕುಳ ಸಹಿಸಲಾಗದೆ 2021ರಲ್ಲಿ ಮನೆ ತೊರೆದು, ಪ್ರತ್ಯೇಕವಾಗಿ ವಾಸವಿದ್ದೆ.
- ಪತಿಯು ಹಣ್ಣಿನ ವ್ಯಾಪಾರ ಮಾಡಿ ತಿಂಗಳಿಗೆ ₹1 ಲಕ್ಷ ಸಂಪಾದನೆ ಮಾಡುತ್ತಾರೆ. ಅವರಿಂದ ಜೀವನಾಂಶ ಕೊಡಿಸಬೇಕು’ ಎಂದು ಮಹಿಳೆ ಕುಟುಂಬ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ‘ಈಗ ಹಣ್ಣಿನ ವ್ಯಾಪಾರ ಮಾಡುತ್ತಿಲ್ಲ. ನಿರುದ್ಯೋಗಿಯಾಗಿರುವುದರಿಂದ ಜೀವನಾಂಶ ಪಾವತಿಸಲು ಸಾಧ್ಯವಿಲ್ಲ’ ಎಂದು ಪತಿ ಕೋರ್ಟ್‌ಗೆ ತಿಳಿಸಿದ್ದರು.

## ❖ ‘ವಾಯು ಗುಣಮಟ್ಟ ಕುಸಿತ: ಯಾವ ಮಂತ್ರದಂಡ ಪ್ರಯೋಗಿಸಬೇಕು?’

**ಸಂದರ್ಭ: ‘ನ್ಯಾಯಾಂಗವು ಯಾವ ರೀತಿಯ ಮಂತ್ರದಂಡ ಪ್ರಯೋಗಿಸಬೇಕು? ವಾಯು ಗುಣಮಟ್ಟ ತೀರಾ ಹದಗೆಟ್ಟಿರುವುದು ದೆಹಲಿಗೆ ಮಾರಕ ಎಂದು ತಿಳಿದಿದೆ. ಆದರೆ, ಇದಕ್ಕೆ ಪರಿಹಾರವೇನು’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಪ್ರಶ್ನಿಸಿದರು.**

- ದೆಹಲಿ ಮತ್ತು ಎನ್‌ಸಿಆರ್‌ನಲ್ಲಿ ವಾಯು ಗುಣಮಟ್ಟ ಕುಸಿದಿರುವ ಕಾರಣ ಸಲ್ಲಿಸಲಾಗಿರುವ ಅರ್ಜಿಯೊಂದರ ವಿಚಾರಣೆಯನ್ನು ಡಿ.3ರಂದು ನಡೆಸಲು ಸಿಜೆಐ ಮತ್ತು ನ್ಯಾಯಮೂರ್ತಿ ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠವು ಒಪ್ಪಿಗೆ ನೀಡಿದೆ. ‘ಈ ವಿಚಾರದ ಬಗ್ಗೆ ನಿರಂತರವಾಗಿಯೇ ಮೇಲ್ವಿಚಾರಣೆ ನಡೆಸಬೇಕು’ ಎಂದಿದೆ.
- ‘ವಾಯು ಗುಣಮಟ್ಟ ಎಷ್ಟು ಹದಗೆಟ್ಟಿದೆ ಎಂದರೆ, ದೆಹಲಿಯಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಇದೆ’ ಎಂದು ಹೇಳಿದ ವಕೀಲ ಅಪರಾಜಿತ ಸಿಂಗ್ ಮಾತುಗಳನ್ನು ಪೀಠ ಉಲ್ಲೇಖಿಸಿತು.
- ‘ನಾವು ಏನು ನಿರ್ದೇಶನ ನೀಡಬೇಕು? ನಾವು ಕೆಲವು ನಿರ್ದೇಶನಗಳನ್ನು ನೀಡುತ್ತೇವೆ ಎಂದಿಟ್ಟುಕೊಳ್ಳಿ... ಆ ತಕ್ಷಣವೇ ನಾವು ಉತ್ತಮ ಗುಣಮಟ್ಟದ ಗಾಳಿಯನ್ನು ಉಸಿರಾಡುತ್ತೇವೆಯೇ? ಸರ್ಕಾರವು ಯಾವ ರೀತಿಯ ಸಮಿತಿಯನ್ನು ರಚಿಸುತ್ತದೆಯೋ ನೋಡೋಣ’ ಎಂದು ಸಿಜೆಐ ಹೇಳಿದರು.

## ❖ 'ಡಿಜಿಟಲ್ ಕಂಟೆಂಟ್ ನಿಯಂತ್ರಣಕ್ಕೆ ಸ್ವಾಯತ್ತ ಪ್ರಾಧಿಕಾರ ಅಗತ್ಯ'

**ಸಂದರ್ಭ: ಡಿಜಿಟಲ್ ಕಂಟೆಂಟ್‌ಗಳ ಪ್ರಸಾರಕ್ಕೆ ಸಂಬಂಧಿಸಿದಂತೆ ಕಂಟೆಂಟ್ ಕ್ರಿಯೇಟರ್‌ಗಳು ಹಾಗೂ ಸಂಬಂಧಪಟ್ಟ ಡಿಜಿಟಲ್ ವೇದಿಕೆಗಳನ್ನೇ ಹೊಣೆಯಾಗಿಸಲು ಪ್ರತ್ಯೇಕ ಸ್ವಾಯತ್ತ ಸಂಸ್ಥೆ ಹಾಗೂ ಪ್ರಾಧಿಕಾರ ರಚಿಸಬೇಕಾದ ಅಗತ್ಯವನ್ನು ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ.**

- 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಅಭಿಪ್ರಾಯ
- ಅಭಿವ್ಯಕ್ತಿ ಸ್ವಾತಂತ್ರ್ಯ–ಸಮಾಜದ ಹಿತದೃಷ್ಟಿ, ಮಕ್ಕಳ ರಕ್ಷಣೆಯ ನಡುವಿನ ಸಮತೋಲನ ಕಾಯ್ದುಕೊಳ್ಳಲು ಇಂಥ ಸ್ವಾಯತ್ತ ಸಂಸ್ಥೆಯನ್ನು ರೂಪಿಸುವ ಅಗತ್ಯವಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠ ಹೇಳಿದೆ.
- ಕಂಟೆಂಟ್ ಕ್ರಿಯೇಟರ್ ಸಮಯ್ ರೈನಾ ಅವರ 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಕಾರ್ಯಕ್ರಮದಲ್ಲಿ ಪ್ರಸಾರ ಮಾಡಿದ ಅಶ್ಲೀಲ ಕಂಟೆಂಟ್‌ಗೆ ಸಂಬಂಧಿಸಿದಂತೆ ಪಾಡ್‌ಕಾಸ್ಟರ್ ರಣವೀರ್ ಅಲಹಾಬಾದಿಯಾ ಹಾಗೂ ಇತರರು ತಮ್ಮ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿದೆ.
- ಕೇಂದ್ರ ಸರ್ಕಾರದ ಪರವಾಗಿ ಹಾಜರಾಗಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹಾಗೂ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಡಿಜಿಟಲ್ ವೇದಿಕೆಗಳ ವಸ್ತುವಿಷಯ ಕಡಿವಾಣಕ್ಕೆ ಹೊಸ ಮಾರ್ಗಸೂಚಿ ರೂಪಿಸಲಾಗಿದ್ದು, ಅದರ ಜಾರಿಗೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸುತ್ತಿರುವುದಾಗಿ ನ್ಯಾಯಪೀಠಕ್ಕೆ ತಿಳಿಸಿದರು.
- ಈ ವೇಳೆ, 'ದೇಶವಿರೋಧಿ ವಿಚಾರವೂ ಸೇರಿದಂತೆ ಯಾವುದೇ ರೀತಿಯ ಅಶ್ಲೀಲ ವಿಚಾರವನ್ನು ಒಂದು ಬಾರಿ ಡಿಜಿಟಲ್ ವೇದಿಕೆಗೆ ಅಪ್‌ಲೋಡ್ ಮಾಡಿದರೆ ಅದು ವೇಗವಾಗಿ ಹರಿದಾಡುತ್ತದೆ. ಈ ಸ್ವರೂಪದ ವಸ್ತುವಿಷಯಗಳ ಮೇಲ್ವಿಚಾರಣೆ, ನಿಗ್ರಹಕ್ಕೆ ಪ್ರತ್ಯೇಕ ಸ್ವಾಯತ್ತ ಸಂಸ್ಥೆ ಅಥವಾ ಪ್ರಾಧಿಕಾರ ಇರಬೇಕು. ಅದು ಯಾವುದೇ ಆನ್‌ಲೈನ್ ವೇದಿಕೆ ಬಳಕೆದಾರರು ಹಾಗೂ ರಾಜ್ಯ ಆಡಳಿತದ ಪ್ರಭಾವದಿಂದ ಮುಕ್ತವಾಗಿರಬೇಕು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.
- ಜತೆಗೆ ಅಶ್ಲೀಲ ವಿಚಾರಕ್ಕೆ ಸಂಬಂಧಿಸಿದ ಕಂಟೆಂಟ್‌ಗಳನ್ನು ವೀಕ್ಷಿಸಲು ವಿಧಿಸಿರುವ ಬಳಕೆದಾರನ ವಯಸ್ಸಿನ ಮಿತಿಯನ್ನು ಖಾತರಿಪಡಿಸಿಕೊಳ್ಳಲು ಆಧಾರ್ ಕಾರ್ಡ್ ದೃಢೀಕರಣವನ್ನು ನಿಗದಿಪಡಿಸುವುದು ಸೂಕ್ತ ಎಂಬ ಸಲಹೆಯನ್ನೂ ನ್ಯಾಯಪೀಠ ನೀಡಿದೆ.

## ❖ 'ಅಂಗವಿಕಲರ ಗೌರವ ರಕ್ಷಣೆಗೆ ಕಾನೂನು ರಚಿಸಿ'

**ಸಂದರ್ಭ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆಗೆ ಕಾಯ್ದೆ ಇರುವಂತೆಯೇ ಅಂಗವಿಕಲರ ಗೌರವ ಮತ್ತು ಘನತೆಯನ್ನು ಕಾಪಾಡಲು ಕಠಿಣ ಕಾನೂನು ರೂಪಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸಲಹೆ ನೀಡಿದೆ.**

- ಕಾರ್ಯಕ್ರಮವೊಂದರಲ್ಲಿ ಕೆಲವು ಹಾಸ್ಯನಟರು ಅಂಗವಿಕಲ ವ್ಯಕ್ತಿ ಒಬ್ಬರನ್ನು ಅಪಹಾಸ್ಯ ಮಾಡಿದ್ದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿತ್ತು. ಇದರಿಂದ ವ್ಯಕ್ತಿಯ ಘನತೆ ಹಾಗೂ ಜೀವಿಸುವ ಹಕ್ಕಿಗೆ ಚ್ಯುತಿ ತರಲಾಗಿದೆ ಎಂದು ಆರೋಪಿಸಿ ಕ್ಯೂರ್ ಎಸ್‌ಎಂಎ ಫೌಂಡೇಷನ್ ಸಂಸ್ಥೆಯು ರಿಟ್ ಅರ್ಜಿ ಸಲ್ಲಿಸಿ, ಕ್ರಮಕ್ಕೆ ಆಗ್ರಹಿಸಿತ್ತು.
- ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ, ಅಂಗವಿಕಲರಾಗಿದ್ದರೂ ಹಲವು ಸಾಧನೆಗೈದಿರುವಂತಹ ವ್ಯಕ್ತಿಗಳನ್ನು ಕರೆದು ಆತಿಥ್ಯ ವಹಿಸಿ, ಅವರ ಆದರ್ಶಪ್ರಾಯ ಜೀವನದ ಬಗ್ಗೆ ತಿಂಗಳಲ್ಲಿ ಎರಡು ಕಾರ್ಯಕ್ರಮ ಗಳನ್ನಾದರೂ ಪ್ರದರ್ಶಿಸುವಂತೆ ಕಂಟೆಂಟ್ ಕ್ರಿಯೇಟರ್ ಸಮಯ್ ರೈನಾ ಹಾಗೂ ಇತರೆ ಕೆಲವು ಹಾಸ್ಯ ನಟರಿಗೆ ಸೂಚಿಸಿದೆ. ಇಂಥ ಕಾರ್ಯಕ್ರಮಗಳ ಮೂಲಕ ಅಂಗವಿಕಲರ ಚಿಕಿತ್ಸೆಗೆ ನಿಧಿ ಸಂಗ್ರಹಿಸುವ ಸಲಹೆಯನ್ನೂ ನೀಡಿದೆ.

## ❖ 5 ವರ್ಷ: 42 ಸಾವಿರ ಮಂದಿಗೆ ಹಾವು ಕಡಿತ

**ಸಂದರ್ಭ: ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, ಐದು ವರ್ಷಗಳಲ್ಲಿ 42 ಸಾವಿರಕ್ಕೂ ಅಧಿಕ ಮಂದಿ ಹಾವು ಕಡಿತಕ್ಕೆ ಒಳಗಾಗಿದ್ದಾರೆ.**

- ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, ಐದು ವರ್ಷಗಳಲ್ಲಿ 42 ಸಾವಿರಕ್ಕೂ ಅಧಿಕ ಮಂದಿ ಹಾವು ಕಡಿತಕ್ಕೆ ಒಳಗಾಗಿದ್ದಾರೆ.
- ನಾಯಿ ಕಡಿತದ ಜತೆಗೆ ಹಾವು ಕಡಿತ ಪ್ರಕರಣಗಳೂ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿವೆ. ಆರೋಗ್ಯ ಇಲಾಖೆ ಪ್ರಕಾರ, ಈ ವರ್ಷ 18 ಸಾವಿರಕ್ಕೂ ಅಧಿಕ ಮಂದಿ ಹಾವು ಕಡಿತಕ್ಕೆ ಒಳಗಾಗಿದ್ದಾರೆ.
- ವರ್ಷವೊಂದರಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗುತ್ತಿದೆ. ಇದೇ ವೇಳೆ ಕಡಿತದಿಂದ ಮೃತಪಡುವವರ ಸಂಖ್ಯೆಯೂ ಹೆಚ್ಚಳವಾಗುತ್ತಿದ್ದು, ಐದು ವರ್ಷಗಳಲ್ಲಿ 267 ಮಂದಿ ಸಾವಿಗೀಡಾಗಿದ್ದಾರೆ.



**ವರ್ಷವಾರು ಹಾವು ಕಡಿತ ಪ್ರಕರಣ**

| ವರ್ಷ | ಹಾವು ಕಡಿತ | ಮರಣ |
|---|---|---|
| 2021 | 950 | 00 |
| 2022 | 3,439 | 17 |
| 2023 | 6,596 | 19 |
| 2024 | 13,235 | 100 |
| 2025 | 18,611 | 131 |

- ರಾಜ್ಯದಲ್ಲಿ ಹಾವು ಕಡಿತವನ್ನು 'ಘೋಷಿತ ಕಾಯಿಲೆ'ಯಡಿ ತರಲಾ ಗಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆ ಗಳ ಜತೆಗೆ ಖಾಸಗಿ ಆಸ್ಪತ್ರೆಗಳೂ ಕಡ್ಡಾಯ ವಾಗಿ ಈ ಪ್ರಕರಣಗಳ ಮಾಹಿತಿಯನ್ನು ಇಲಾಖೆಗೆ ಒದಗಿಸಬೇಕಿದೆ.
- ಇದರಿಂದಾಗಿ ರಾಜ್ಯದ ವಿವಿಧೆಡೆ ವರದಿಯಾಗುತ್ತಿರುವ ಪ್ರಕರಣಗಳ ನಿಖರ ಮಾಹಿತಿ ಇಲಾಖೆಗೆ ಲಭ್ಯವಾಗುತ್ತಿದೆ. ಪರಿಣಾಮ, 2021ರಲ್ಲಿ ಸಾವಿರದ ಗಡಿಯ ಆಸುಪಾಸಿನಲ್ಲಿದ್ದ ಹಾವು ಕಡಿತ ಪ್ರಕರಣಗಳ ಸಂಖ್ಯೆ, ಈಗ ಗಣನೀಯ ಏರಿಕೆಯಾಗಿದೆ.
- **ಚಿಕಿತ್ಸೆಗೆ ವ್ಯವಸ್ಥೆ:** 2030ರ ವೇಳೆಗೆ ಹಾವು ಕಡಿತ ಮರಣವನ್ನು ಅರ್ಧದಷ್ಟು ಇಳಿಸುವ ಗುರಿಯನ್ನು ಇಲಾಖೆ ಹಾಕಿಕೊಂಡಿದೆ. ಇದಕ್ಕೆ ಪೂರಕವಾಗಿ ಹಾವು ಕಡಿತಕ್ಕೆ ಒಳಗಾದವರಿಗೆ ಆಂಬುಲೆನ್ಸ್ ಸೇವೆ ಹಾಗೂ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ.
- 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಹಾವು ಕಡಿತ ಪ್ರಕರಣಗಳ ಚಿಕಿತ್ಸೆಯನ್ನು ಸೇರ್ಪಡೆ ಮಾಡಲಾಗಿದೆ. ಈ ಚಿಕಿತ್ಸೆಗೆ ದರ ನಿಗದಿಪಡಿಸಿರುವ ಇಲಾಖೆ, ಮುಂಗಡ ಹಣಕ್ಕೆ ಬೇಡಿಕೆ ನೀಡದೆ ಚಿಕಿತ್ಸೆ ಒದಗಿಸುವಂತೆ ಆದೇಶ ಹೊರಡಿಸಿದೆ. ಹಾವು ಕಡಿತಕ್ಕೊಳಗಾದ ಸಂತ್ರಸ್ತರಿಗೆ ನೀಡಿದ ಚಿಕಿತ್ಸೆಗಾಗಿ ಆಸ್ಪತ್ರೆಯ ಶುಲ್ಕವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಮೂಲಕ ಸರ್ಕಾರವೇ ನಿಗದಿತ ಆಸ್ಪತ್ರೆಗೆ ಮರುಪಾವತಿ ಮಾಡಲಿದೆ.
- ಹಾವು ಕಡಿತ ಪ್ರಕರಣಗಳಲ್ಲಿ ದಿನವೊಂದಕ್ಕೆ ಸಾಮಾನ್ಯ ವಾರ್ಡ್‌ಗೆ ಸರ್ಕಾರಿ ಆಸ್ಪತ್ರೆಗೆ ₹1,350 ನಿಗದಿಪಡಿಸಿದರೆ, ಈ ಶುಲ್ಕ ಖಾಸಗಿ ಆಸ್ಪತ್ರೆಗೆ ₹ 2,300 ಇದೆ. ವೆಂಟಿಲೇಟರ್ ರಹಿತ ಐಸಿಯು ವಾರ್ಡ್‌ಗೆ ಕ್ರಮವಾಗಿ ₹2,700 ಮತ್ತು ₹8,800 ಗೊತ್ತುಪಡಿಸಲಾಗಿದೆ. ವೆಂಟಿಲೇಟರ್ ಸಹಿತ ಐಸಿಯು ವಾರ್ಡ್‌ಗೆ ₹3,375 ಹಾಗೂ ₹10,350 ನಿಗದಿಪಡಿಸಲಾಗಿದೆ.
- 'ಹಾವು ಕಡಿತ ಪ್ರಕರಣಗಳಲ್ಲಿ ಮರಣ ತಡೆಗೆ ಎಲ್ಲೆಡೆ ಚಿಕಿತ್ಸೆ ಲಭ್ಯತೆಗೆ ವ್ಯವಸ್ಥೆ ಮಾಡಲಾಗಿದೆ. ಹಾವು ಕಡಿತಕ್ಕೆ ಒಳಗಾದವರು ಚಿಕಿತ್ಸೆ ಪಡೆಯುವುದು ವಿಳಂಬವಾದಲ್ಲಿ ಜೀವಕ್ಕೆ ತೊಂದರೆಯಾಗುತ್ತದೆ. ಘೋಷಿತ ರೋಗವೆಂದು ಗುರುತಿಸಿದ್ದರಿಂದ ಹಾವು ಕಡಿತದಿಂದ ಉಂಟಾಗುತ್ತಿದ್ದ ಪ್ರಾಣ ಹಾನಿ ತಡೆಯಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಒಂದು ವೇಳೆ ಹಾವು ಕಡಿತದಿಂದ ವ್ಯಕ್ತಿ ಮರಣ ಹೊಂದಿದಲ್ಲಿ 'ಸಾವಿನ ಲೆಕ್ಕಗಳ ವರದಿ' (ಡೆತ್ ಆಡಿಟ್) ಮಾಡಿಸಲಾಗುತ್ತಿದೆ. ಇದರಿಂದಾಗಿ ಹಾವು ಕಡಿತದ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತಿದೆ' ಎಂದು ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

**ಉಚಿತವಾಗಿ 'ಆ್ಯಂಟಿ ಸ್ನೇಕ್ ವೆನಮ್'**

- ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತಕ್ಕೆ 'ಆ್ಯಂಟಿ ಸ್ನೇಕ್ ವೆನಮ್' ಔಷಧವನ್ನು ಉಚಿತವಾಗಿ ಒದಗಿಸಲಾಗುತ್ತದೆ. ಹಾವಿನ ನಂಜಿನ ಲಕ್ಷಣಗಳು ವ್ಯಕ್ತಿಗೆ ಕಂಡುಬಂದಲ್ಲಿ ತಕ್ಷಣ ರೋಗಿಯ ಅಥವಾ ಸಂಬಂಧಿಕರ ಒಪ್ಪಿಗೆ ಪತ್ರ ಪಡೆದು ಈ ಔಷಧ ನೀಡಲಾಗುತ್ತದೆ.
- ಹಾವು ಕಡಿತದ ಚಿಕಿತ್ಸೆ ಬಗ್ಗೆ ರಾಜ್ಯದಲ್ಲಿ ಸರ್ಕಾರಿ ವೈದ್ಯಾಧಿಕಾರಿಗಳು ಹಾಗೂ ಇತರೇ ಆರೋಗ್ಯ ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ.

## ❖ 'ದಿತ್ವಾ' ನಾಳೆ ಚೆನ್ನೈಗೆ ಅಪ್ಪಳಿಸುವ ಸಾಧ್ಯತೆ

**ಸಂದರ್ಭ: ಶ್ರೀಲಂಕಾದಲ್ಲಿ ಭಾರಿ ಮಳೆ ಹಾಗೂ ಪ್ರವಾಹಕ್ಕೆ ಕಾರಣವಾಗಿರುವ 'ದಿತ್ವಾ' ಚಂಡಮಾರುತವು ನವೆಂಬರ್ 30ರಂದು ತಮಿಳುನಾಡು ಮತ್ತು ಪುದುಚೇರಿಗೆ ಅಪ್ಪಳಿಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.**

- ಪುದುಚೇರಿಯ ಆಗ್ನೇಯಕ್ಕೆ 430 ಕಿ.ಮೀ. ಮತ್ತು ಚೆನ್ನೈನಿಂದ ದಕ್ಷಿಣಕ್ಕೆ 530 ಕಿ.ಮೀ. ದೂರದಲ್ಲಿದ್ದ ಚಂಡಮಾರುತವು ಶ್ರೀಲಂಕಾ ಕರಾವಳಿ ಮತ್ತು ಬಂಗಾಳ ಕೊಲ್ಲಿ ಮೂಲಕ ಚಲಿಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.
- ಅಲ್ಲದೇ ಭಾನುವಾರ ಬೆಳಿಗ್ಗೆ ಉತ್ತರ ತಮಿಳುನಾಡು, ಪುದುಚೇರಿ ಹಾಗೂ ಆಂಧ್ರ ಪ್ರದೇಶದ ಕರಾವಳಿಗೆ ಅಪ್ಪಳಿಸ ಬಹುದು ಎಂದಿದೆ.
- ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಕರಾವಳಿ ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕೆ ವಹಿಸುವಂತೆ ಸರ್ಕಾರ ಎಚ್ಚರಿಸಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.
- ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮುನ್ನೆಚ್ಚರಿಕೆ ಕ್ರಮಗಳನ್ನು ಪರಿಶೀಲಿಸಿದರು. 'ನ.29 ಮತ್ತು 30ರಂದು ಕೆಲವು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ. ರೆಡ್ ಅಲರ್ಟ್ ಘೋಷಿಸಲಾದ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ನಡೆಸಿದ್ದೇನೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.
- ಶ್ರೀಲಂಕಾದಲ್ಲಿ 80 ಸಾವು (ಕೊಲಂಬೊ ವರದಿ): ಶ್ರೀಲಂಕಾದಲ್ಲಿ ಕಳೆದ ಕೆಲ ದಿನಗಳಿಂದ ಭಾರಿ ಮಳೆಯಾಗುತ್ತಿದ್ದು, ಪ್ರವಾಹ ಹಾಗೂ ಭೂಕುಸಿತದಿಂದ ಮೃತಪಟ್ಟವರ ಸಂಖ್ಯೆ 80ಕ್ಕೆ ಏರಿಕೆಯಾಗಿದೆ. 34 ಮಂದಿ ನಾಪತ್ತೆಯಾಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಕೇಂದ್ರ (ಡಿಎಂಸಿ) ತಿಳಿಸಿದೆ.
- 'ದಿತ್ವಾ' ಚಂಡಮಾರುತವು ಶ್ರೀಲಂಕಾದ ಪೂರ್ವ ಭಾಗದ ಟ್ರಿಂಕೊಮಲಿ ಜಿಲ್ಲೆಯತ್ತ ಚಲಿಸಿದೆ ಎಂದು ಹವಾಮಾನ ಇಲಾಖೆ ಶುಕ್ರವಾರ ಬೆಳಿಗ್ಗೆ ಪ್ರಕಟಿಸಿದೆ. ದೇಶದ ಬಹುತೇಕ ಭಾಗಗಳಲ್ಲಿ ಗಂಟೆಗೆ 80ರಿಂದ 90 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಭಾರಿ ಮಳೆ ಮುಂದುವರಿಯುವ ಮುನ್ಸೂಚನೆ ನೀಡಿದೆ. ಕೆಲವು ಪ್ರಾಂತ್ಯಗಳಲ್ಲಿ 200 ಮಿ.ಮೀ. ಮಳೆಯಾಗುವ ಸಾಧ್ಯತೆಯಿದೆ ಎಂದಿದೆ. ವಿಮಾನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದು, ತನ್ನ ಕೆಲವು ವಿಮಾನಗಳನ್ನು ಕೇರಳದ ಕೊಚ್ಚಿ ಮತ್ತು ತಿರುವನಂತಪುರದ ವಿಮಾನ ನಿಲ್ದಾಣಗಳಲ್ಲಿ ಇಳಿಸಲಾಗಿದೆ ಎಂದು ಶ್ರೀಲಂಕಾ ಏರ್‌ಲೈನ್ಸ್ ತಿಳಿಸಿದೆ.
- ಶುಕ್ರವಾರ ಎಲ್ಲ ರೈಲುಗಳ ಸಂಚಾರ ವನ್ನು ಸ್ಥಗಿತ ಗೊಳಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ. ಗಂಪೋಲಾ ಪ್ರಾಂತ್ಯದ ರೈಲು ನಿಲ್ದಾಣ ಜಲಾವೃತಗೊಂಡಿದ್ದು, ಹಲವು ರೈಲುಗಳು ನೀರಿನಲ್ಲಿ ಮುಳುಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಭಾರತ ನೆರವಿನ ಹಸ್ತ**

- 'ದಿತ್ವಾ'ದಿಂದ ತತ್ತರಿಸಿರುವ ಶ್ರೀಲಂಕಾಕ್ಕೆ ಭಾರತ ನೆರವಿನ ಹಸ್ತ ಚಾಚಿದ್ದು, ಅಗತ್ಯ ಪರಿಹಾರ ಸಾಮಗ್ರಿಗಳನ್ನು ಶುಕ್ರವಾರ ತಲುಪಿಸಿದೆ. ಪರಿಸ್ಥಿತಿಯನ್ನು ನಿಭಾಯಿಸಲು ಹೆಚ್ಚಿನ ಸಹಾಯ ಒದಗಿಸಲು ಭಾರತ ಸಿದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.
- ಶ್ರೀಲಂಕಾಕ್ಕೆ ನೆರವು ನೀಡಲು ಭಾರತವು 'ಆಪರೇಷನ್ ಸಾಗರ ಬಂಧು' ಆರಂಭಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ತಿಳಿಸಿದರು.
- ಭಾರತೀಯ ನೌಕಾಪಡೆಯ ಐಎನ್ಎಸ್ ವಿಕ್ರಾಂತ್ ಮತ್ತು ಐಎನ್ಎಸ್ ಉದಯಗಿರಿ ನೌಕೆಗಳ ಮೂಲಕ ಮೊದಲ ಹಂತದ ಪರಿಹಾರ ಸಾಮಗ್ರಿಗಳನ್ನು ಶ್ರೀಲಂಕಾಕ್ಕೆ ಕಳುಹಿಸಲಾಗಿದೆ ಎಂದರು. ಐಎನ್ಎಸ್ ವಿಕ್ರಾಂತ್ ನೌಕೆಯನ್ನು ಪೂರ್ವ ಕರಾವಳಿಯ ಟ್ರಿಂಕೊಮಲಿ ಪ್ರದೇಶದಲ್ಲಿ ಪ್ರವಾಹ ರಕ್ಷಣಾ ಕಾರ್ಯಾಚರಣೆಗೆ ಬಳಸಿಕೊಳ್ಳಲಾಗುವುದು ಎಂದು ಶ್ರೀಲಂಕಾದ ನೌಕಾಪಡೆ ತಿಳಿಸಿದೆ.
- ಭಾರತೀಯ ನೌಕಾಪಡೆಯ ಐಎನ್ಎಸ್ ವಿಕ್ರಾಂತ್ ಮತ್ತು ಐಎನ್ಎಸ್ ಉದಯಗಿರಿ ನೌಕೆಗಳ ಮೂಲಕ ಮೊದಲ ಹಂತದ ಪರಿಹಾರ ಸಾಮಗ್ರಿಗಳನ್ನು ಶ್ರೀಲಂಕಾಕ್ಕೆ ಕಳುಹಿಸಲಾಗಿದೆ ಎಂದರು. ಐಎನ್ಎಸ್ ವಿಕ್ರಾಂತ್ ನೌಕೆ ಯನ್ನು ಪೂರ್ವ ಕರಾವಳಿಯ ಟ್ರಿಂಕೊಮಲಿ ಪ್ರದೇಶದಲ್ಲಿ ಪ್ರವಾಹ ರಕ್ಷಣಾ ಕಾರ್ಯಾ ಚರಣೆಗೆ ಬಳಸಿಕೊಳ್ಳಲಾಗುವುದು ಎಂದು ಶ್ರೀಲಂಕಾದ ನೌಕಾಪಡೆ ತಿಳಿಸಿದೆ.

## ❖ ಜಿಡಿಪಿ ಪ್ರಗತಿ: ಭಾರತ ದಾಖಲೆ: ಹಣಕಾಸು ವರ್ಷದ ಮೊದಲಾರ್ಧದಲ್ಲೇ ಗುರಿ ಮೀರಿ ಸಾಧನೆ

ಸಂದರ್ಭ: **ಜಿಎಸ್‌ಟಿ ಕಡಿತವು ಹಬ್ಬದ ಸಂದರ್ಭದಲ್ಲಿ ಖರೀದಿಗೆ ದೊಡ್ಡ ಮಟ್ಟದಲ್ಲಿ ಉತ್ತೇಜನ ನೀಡಿದೆ. ಮೂರನೆಯ ತ್ರೈಮಾಸಿಕದಲ್ಲೂ ಗಣನೀಯ ಪ್ರಗತಿ ನಿರೀಕ್ಷಿಸಬಹುದು ರುಮ್ಕಿ ಮಜುಂದಾರ್,ಅರ್ಥಶಾಸ್ತ್ರಜ್ಞೆ, ಡೆಲಾಯ್ಟ್ ಇಂಡಿಯಾ.**

- ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಡಿತದಿಂದ ಆರ್ಥಿಕ ಚಟುವಟಿಕೆಗಳು ಚುರುಕುಗೊಂಡಿದ್ದು, ಇದರಿಂದ ದೇಶದ ಒಟ್ಟಾರೆ ಆಂತರಿಕ ಉತ್ಪನ್ನವು (ಜಿಡಿಪಿ) ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿ (ಜುಲೈ–ಸೆಪ್ಟೆಂಬರ್) ದಾಖಲೆ ಪ್ರಮಾಣದಲ್ಲಿ ಶೇ 8.2ಕ್ಕೆ ಏರಿಕೆಯಾಗಿದೆ.
- ಎರಡನೆಯ ತ್ರೈಮಾಸಿಕದ ಜಿಡಿಪಿ ದರವು ಕಳೆದ ಆರು ತ್ರೈಮಾಸಿಕಗಳಲ್ಲೇ ಗರಿಷ್ಠ ಮಟ್ಟದ್ದಾಗಿದೆ. ನಿರೀಕ್ಷೆಗೂ ಮೀರಿದ ಪ್ರಗತಿಯ ಮೂಲಕ ಭಾರತವು, ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಸ್ಥಾನವನ್ನು ಉಳಿಸಿಕೊಂಡಿದೆ. ಚೀನಾವು ಎರಡನೆಯ ತ್ರೈಮಾಸಿಕದಲ್ಲಿ ಶೇ 4.8ರಷ್ಟು ಜಿಡಿಪಿ ಪ್ರಗತಿ ದಾಖಲಿಸಿದೆ.
- ರಾಷ್ಟ್ರೀಯ ಅಂಕಿ ಅಂಶಗಳ ಇಲಾಖೆ ಬಿಡುಗಡೆ ಮಾಡಿರುವ ಅಂಕಿ ಅಂಶದಂತೆ, ವಾರ್ಷಿಕ ಗುರಿಯನ್ನು ಮೀರಿ, ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿಯೇ ಜಿಡಿಪಿ ಶೇ 8ರ ಗಡಿ ದಾಟಿದೆ. ಇದಕ್ಕೂ ಮುನ್ನ 2023–24ನೇ ಸಾಲಿನ ನಾಲ್ಕನೆಯ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಭಾರತವು 8.4ರಷ್ಟು ಜಿಡಿಪಿ ಪ್ರಗತಿ ದಾಖಲಾಗಿತ್ತು.

**ಜಿಡಿಪಿ: ಹೊಸ ದಾಖಲೆ ನಿರೀಕ್ಷೆ**

- ಜನವರಿಯಲ್ಲಿ ನಡೆದ ಆರ್ಥಿಕ ಸಮೀಕ್ಷೆಯಲ್ಲಿ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6.3ರಿಂದ 6.8ರ ನಡುವೆ ಇರಲಿದೆ ಎಂದು ಅಂದಾಜು ಮಾಡಲಾಗಿತ್ತು. ಆದರೆ, ಆರ್ಥಿಕ ವರ್ಷದ ಮೊದಲಾರ್ಧದಲ್ಲೇ ಇದು ಶೇ 8ರ ಗಡಿ ದಾಟಿದೆ. ಹೀಗಾಗಿ ಹಣಕಾಸು ವರ್ಷದ ಅಂತ್ಯಕ್ಕೆ ಗುರಿ ಮೀರಿ ಜಿಡಿಪಿ ದಾಖಲಾಗುವ ನಿರೀಕ್ಷೆ ಇದೆ. ಭಾರತೀಯ ರಿಸರ್ವ್ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.8ರಷ್ಟು ಜಿಡಿಪಿ ಅಂದಾಜು ಮಾಡಿದೆ.

## ❖ 'ಅಂಗನವಾಡಿಯಿಂದ ತಾಯಿ– ಶಿಶು ಮರಣ ಇಳಿಕೆ': ಐಸಿಡಿಎಸ್ ಸುವರ್ಣ ಮಹೋತ್ಸವ

**ಸಂದರ್ಭ: ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಕಾರ್ಯಕ್ರಮಗಳಿಂದ ಶಿಶು, ತಾಯಂದಿರ ಮರಣ ಹಾಗೂ ಅಪೌಷ್ಟಿಕತೆ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿದೆ. 69,922 ಅಂಗನವಾಡಿ ಕೇಂದ್ರಗಳಿಂದ 40 ಲಕ್ಷಕ್ಕೂ ಹೆಚ್ಚು ಮಹಿಳೆಯರು ಮತ್ತು ಮಕ್ಕಳಿಗೆ ಅನುಕೂಲವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.**

- ನಡೆದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸುವರ್ಣ ಮಹೋತ್ಸವ, ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಯೋಜನೆಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.
- 70ರ ದಶಕದಲ್ಲಿ ಮಹಿಳೆ ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆ, ಶಿಶು ಮತ್ತು ತಾಯಿ ಮರಣ ಹೆಚ್ಚಿದ ಸಂದರ್ಭದಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಈ ಕಾರ್ಯಕ್ರಮ ಜಾರಿಗೊಳಿಸಿದರು. ಟಿ.ನರಸೀಪುರ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ಮೊದಲು ಪ್ರಾರಂಭಗೊಂಡ ಅಂಗನವಾಡಿ ಕೇಂದ್ರ, 33 ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸಿತು. ಪ್ರಸ್ತುತ 69 ಸಾವಿರಕ್ಕೂ ಅಧಿಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದರು.



ಯೋಜನೆಗಳ ಪರಿಚಯ

- **ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರಿ ಸಂಘ:** ಈ ಸಂಘದಲ್ಲಿ ಫಲಾನುಭವಿಗಳು/ಸದಸ್ಯರು ಷೇರುದಾರರಾಗಿರುತ್ತಾರೆ. ಸಹಕಾರಿ ಬ್ಯಾಂಕ್ ಕನಿಷ್ಠ ₹1,000 ಕೋಟಿ ಬಂಡವಾಳ ಹೊಂದುವ ನಿರೀಕ್ಷೆಯಿದ್ದು, ರಾಜ್ಯದ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಹೆಚ್ಚಿಸಲು ಇದರಿಂದ ಅನುಕೂಲವಾಗುತ್ತದೆ.
- **ಅಕ್ಕ ಪಡೆ:** ತರಬೇತಿ ಪಡೆದ 10 ಮಹಿಳೆಯರನ್ನು ಒಳಗೊಂಡಿರುವ ಈ ಪಡೆಯು ಎರಡು ಪಾಳಿಗಳಲ್ಲಿ ದಿನದ 24X7 ಕಾರ್ಯನಿರ್ವಹಿಸುತ್ತದೆ. ಹೆಣ್ಣುಮಕ್ಕಳು, ಕೆಲಸ ಮಾಡುವ ಮಹಿಳೆಯರ ಸುರಕ್ಷತೆಯತ್ತ ಗಮನಹರಿಸಲಿದ್ದು, ಗೃಹ ಇಲಾಖೆಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸಲಿದೆ.

- ಮಹಿಳೆಯರಲ್ಲಿ ಶೇಕಡ ನೂರರಷ್ಟು ಸಾಕ್ಷರತೆ, ವೈಚಾರಿಕ ಹಾಗೂ ವೈಜ್ಞಾನಿಕ ಜ್ಞಾನ ಬರಬೇಕಿದೆ. ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸ್ವಾವಲಂಬಿಗಳಾಗದೆ ಹೋದರೆ, ಸಮಾಜ ಮುಂದುವರಿಯುವುದು ಕಷ್ಟ ಎಂದರು.
- ರಾಜ್ಯದ ಒಟ್ಟು 5,000 ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕೇಂದ್ರಗಳಲ್ಲಿ ಪ್ರಾರಂಭಿಸಲಾಗುವುದು ಎಂದರು. ಇದಕ್ಕೂ ಮುನ್ನ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಅಂಗನವಾಡಿ ಕಾರ್ಯಕರ್ತೆ ಯರ ಗೌರವ ಧನವನ್ನು ಒಂದು ಸಾವಿರ ರೂಪಾಯಿ ಹೆಚ್ಚಿಸುವಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗೆ ಮನವಿ ಮಾಡಿದರು.
- ಇದೇ ವೇಳೆ ಮಕ್ಕಳಿಗೆ ಶೌರ್ಯ ಪ್ರಶಸ್ತಿ, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ಹಾಗೂ ಹಿರಿಯ ನಾಗರಿಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ❖ ಜನರ ವೀಕ್ಷಣೆಗೆ ಯುದ್ಧನೌಕೆ

**ಸಂದರ್ಭ: ಭಾರತೀಯ ನೌಕಾಪಡೆಯ ಎರಡು ಕ್ಷಿಪಣಿ ನಿರೋಧಕ ಯುದ್ಧನೌಕೆಗಳು ಇಲ್ಲಿನ ಕಿಡ್ಡರ್‌ಪೋರ್ ಡಾಕ್‌ನ ಬರ್ತ್ 11 ತಲುಪಿದ್ದು, 'ನೌಕಾಪಡೆ ವಾರ' ಆಚರಣೆ ಪ್ರಯುಕ್ತ ನ.30ರವರೆಗೆ ಸಾರ್ವಜನಿಕ ವೀಕ್ಷಣೆಗೆ ಲಭ್ಯ ಇರಲಿವೆ.**

- ಬಂಗಾಳಕೊಲ್ಲಿಯಲ್ಲಿ ನಿಯೋಜಿಸಿ ರುವ ಐಎನ್‌ಎಸ್ ಖಂಜರ್ ಮತ್ತು ಐಎನ್‌ಎಸ್ ಕೋರಾ ಯುದ್ಧ ನೌಕೆಗಳನ್ನು ಸಾರ್ವಜನಿಕರ ವೀಕ್ಷಣೆಗಾಗಿ ಹೂಗ್ಲಿ ನದಿಯ ದಡದಲ್ಲಿರುವ ಮಹಾನಗರಕ್ಕೆ ತರಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಕೋಲ್ಕತ್ತದ ಕಿಡ್ಡರ್‌ಪೋರ್ ಡಾಕ್‌ನ ಬರ್ತ್‌ಗೆ ಬಂದ ಭಾರತೀಯ ನೌಕಾಪಡೆಯ ಯುದ್ಧನೌಕೆಗಳಿಗೆ ಎನ್‌ಸಿಸಿ ಕೆಡೆಟ್‌ಗಳು ಭೇಟಿ ನೀಡಿದರು ಪಿಟಿಐ ಚಿತ್ರ

- ಗ್ರೇ ಫೆರಾರಿ ಎಂಬ ಅಡ್ಡ ಹೆಸರಿನ ಐಎನ್‌ಎಸ್ ಖಂಜರ್ 1991ರಲ್ಲಿ ನಿಯೋಜಿಸಲಾದ ಪಿ–25 ವರ್ಗದ ಕ್ಷಿಪಣಿ ನಿರೋಧಕ ಯುದ್ಧನೌಕೆಯಾಗಿದೆ. ಗೂರ್ಖಾ ಯೋಧರು ಬಳಸುತ್ತಿದ್ದ ಸಾಂಪ್ರದಾಯಿಕ ಕತ್ತಿಯಾದ 'ಕೋರಾ'ದ ಹೆಸರನ್ನು ಇಡಲಾದ ಐಎನ್‌ಎಸ್ ಕೋರಾ 1998ರಲ್ಲಿ ನಿಯೋಜಿಸಲಾದ ಪಿ–25ಎ ವರ್ಗದ ಯುದ್ಧನೌಕೆಯಾಗಿದೆ.

## ❖ ವಿತ್ತೀಯ ಕೊರತೆ ₹8.25 ಲಕ್ಷ ಕೋಟಿ: ಕೇಂದ್ರದಿಂದ ರಾಜ್ಯಗಳಿಗೆ ₹8.34 ಲಕ್ಷ ಕೋಟಿ ತೆರಿಗೆ ಪಾಲು ವರ್ಗಾವಣೆ: ಸಿಜಿಎ

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದವರೆಗೆ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 52.6ರಷ್ಟಾಗಿದೆ.**

- ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಇದು ₹8.25 ಲಕ್ಷ ಕೋಟಿಯಾಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ವರದಿ ಶುಕ್ರವಾರ ತಿಳಿಸಿದೆ. 2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಶೇ 46.5 ರಷ್ಟಿತ್ತು.
- 2025–26ರಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4ಕ್ಕೆ (ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ₹15.69 ಲಕ್ಷ ಕೋಟಿ) ತಗ್ಗಿಸಲು ಸರ್ಕಾರ ಬಜೆಟ್‌ನಲ್ಲಿ ಗುರಿ ನಿಗದಿಪಡಿಸಲಾಗಿದೆ.
- ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಸರ್ಕಾರವು ₹18 ಲಕ್ಷ ಕೋಟಿ (ಶೇ 51.5) ವರಮಾನ ಸ್ವೀಕರಿಸಿದೆ. ಕೇಂದ್ರ ಸರ್ಕಾರ ಸ್ವೀಕರಿಸಿದ ಈ ಮೊತ್ತದ ಪೈಕಿ ₹12.74 ಲಕ್ಷ ಕೋಟಿ ತೆರಿಗೆ ವರಮಾನದಿಂದ ಸಂಗ್ರಹಿಸಿದೆ. ₹4.89 ಲಕ್ಷ ಕೋಟಿ ತೆರಿಗೆಯೇತರ ವರಮಾನ ಮತ್ತು ಇತರೆ ಮೂಲಗಳಿಂದ ₹37,095 ಕೋಟಿ ಸಂಗ್ರಹಿಸಿದೆ.
- ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳಿಗೆ ₹8.34 ಲಕ್ಷ ಕೋಟಿಯನ್ನು ತೆರಿಗೆ ಪಾಲಾಗಿ ವರ್ಗಾಯಿಸಿದೆ. ಇದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ₹1.11 ಲಕ್ಷ ಕೋಟಿಯಷ್ಟು ಅಧಿಕವಾಗಿದೆ ಎಂದು ತಿಳಿಸಿದೆ.
- ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹26.25 ಲಕ್ಷ ಕೋಟಿಯಾಗಿದೆ. ಈ ಪೈಕಿ ಬಡ್ಡಿಗೆ ₹6.73 ಲಕ್ಷ ಕೋಟಿ ಪಾವತಿಸಲಾಗಿದ್ದು, ₹2.46 ಲಕ್ಷ ಕೋಟಿ ಸಬ್ಸಿಡಿಗಳಿಗೆ ನೀಡಲಾಗಿದೆ ಎಂದು ತಿಳಿಸಿದೆ.

## ❖ 'ರಾಜ್ಯಗಳ ಬಂಡವಾಳ ವೆಚ್ಚ ಹೆಚ್ಚಳ ನಿರೀಕ್ಷೆ'

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯಗಳ ಬಂಡವಾಳ ವೆಚ್ಚವು ಶೇ 4ರಿಂದ ಶೇ 6ಕ್ಕೆ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು ಕ್ರಿಸಿಲ್ ರೇಟಿಂಗ್ಸ್ ಹೇಳಿದೆ.**

- ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬಂಡವಾಳ ವೆಚ್ಚವು ಶೇ 7ರಷ್ಟಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿಯ ಬಂಡವಾಳ ವೆಚ್ಚ ಕಡಿಮೆ ಎಂದು ಹೇಳಿದೆ. ವಸತಿ, ನಗರಾಭಿವೃದ್ಧಿ ಮತ್ತು ನೀರಾವರಿ ಸೇರಿದಂತೆ ನೀರು ಸರಬರಾಜು ಮತ್ತು ನೈರ್ಮಲ್ಯವು ಕೂಡ ಬಂಡವಾಳ ವೆಚ್ಚ ಹೆಚ್ಚಳಕ್ಕೆ ಕಾರಣವಾಗಿವೆ. ರಾಜ್ಯಗಳ ಬಂಡವಾಳ ವೆಚ್ಚದ ಶೇ 94ರಷ್ಟು ಪಾಲನ್ನು ಅಗ್ರ 18 ರಾಜ್ಯಗಳು ಹೊಂದಿವೆ.
- ಜಿಎಸ್‌ಟಿ ದರ ಪರಿಷ್ಕರಣೆಯ ಬಳಿಕ ವರಮಾನ ಸಂಗ್ರಹವು ಮಂದಗೊಂಡಿರುವುದರಿಂದ ರಾಜ್ಯಗಳ ವರಮಾನ ಕೊರತೆ ಹೆಚ್ಚುತ್ತಿದೆ. ಕೇಂದ್ರದಿಂದ ಅನುದಾನ ಹಂಚಿಕೆಯು ನಿಧಾನವಾಗಿದೆ. ಮತ್ತೊಂದೆಡೆ, ವಿವಿಧ ಯೋಜನೆಗಳಿಗೆ ಮೀಸಲಿಟ್ಟ ಮೊತ್ತ ಹಾಗೂ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚಿದ ಅನುದಾನದ ಹಂಚಿಕೆಯಿಂದಾಗಿ ವೆಚ್ಚವು ಶೇ 7ರಿಂದ ಶೇ 9ಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

## ❖ 'ಜಾಗತಿಕ ಚಿನ್ನದ ಬೆಲೆ ನಿರ್ಧಾರ ಭಾರತದ ಗುರಿ'

**ಸಂದರ್ಭ: ದೇಶದಲ್ಲಿ ಚಿನ್ನದ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ, ಜಾಗತಿಕ ಚಿನ್ನದ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ನಿರ್ಧರಿಸುವ ಸ್ಥಾನ ಹೊಂದುವ ಗುರಿಯನ್ನು ಭಾರತ ಹೊಂದಿದೆ ಎಂದು ಉದ್ಯಮದ ತಜ್ಞರು ಹೇಳಿದ್ದಾರೆ.**

- 'ಪ್ರಸ್ತುತ ದೇಶದಲ್ಲಿ ಚಿನ್ನದ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿಲ್ಲ. ಹೀಗಾಗಿ ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ನಿರ್ಧರಿಸಿದ ಬೆಲೆಗೆ ಚಿನ್ನ ಖರೀದಿ ಮಾಡುತ್ತಿದೆ. ಚಿನ್ನದ ಉತ್ಪಾದನೆ ಹೆಚ್ಚಳವಾದರೆ ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ನಿರ್ಧರಿಸುವ ಮಟ್ಟವನ್ನು ತಲುಪಲಿದೆ' ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ಭಾರತದ ಸಿಇಒ ಸಚಿನ್ ಜೈನ್ ಹೇಳಿದ್ದಾರೆ.
- ಹರಳು ಮತ್ತು ಚಿನ್ನಾಭರಣ ಸಮಾವೇಶದಲ್ಲಿ ಮಾತನಾಡಿದ ಅವರು, ವಿಕಸಿತ ಭಾರತ ಗುರಿ ಸಾಧನೆಗೆ ಗಣಿಗಾರಿಕೆ ಪ್ರಮುಖವಾದ ಅಂಶವಾಗಿದೆ. ಮುಂದಿನ ದಶಕದಲ್ಲಿ ಭಾರತದ ಗಣಿಗಾರಿಕೆಯಿಂದ ಉತ್ಪಾದನೆಯಾದ ಚಿನ್ನದಿಂದ ಅಂದಾಜು ಶೇ 20ರಷ್ಟು ದೇಶದ ಚಿನ್ನದ ಬೇಡಿಕೆಯನ್ನು ಪೂರೈಸುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.
- ಮುಂದಿನ ಎರಡರಿಂದ ಮೂರು ವರ್ಷದಲ್ಲಿ ಭಾರತವು, ಚಿನ್ನಾಭರಣಗಳ ಜಾಗತಿಕ ಹಬ್ ಆಗಿ ಹೊರಹೊಮ್ಮುವ ವಿಶ್ವಾಸವಿದೆ ಎಂದು ಹೇಳಿದ್ದಾರೆ.

## ❖ ಜಿಡಿಪಿ ಶೇ 7ರಷ್ಟು ನಿರೀಕ್ಷೆ: ಮೂಡೀಸ್

**ಸಂದರ್ಭ: ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ದೇಶದ ಆರ್ಥಿಕತೆ ₹357 ಲಕ್ಷ ಕೋಟಿ (4 ಟ್ರಿಲಿಯನ್ ಡಾಲರ್) ದಾಟುವ ನಿರೀಕ್ಷೆ ಇದೆ ವಿ. ಅನಂತ ನಾಗೇಶ್ವರನ್, ಮುಖ್ಯ ಆರ್ಥಿಕ ಸಲಹೆಗಾರ.**

- 'ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7ರಷ್ಟು ಮತ್ತು 2026ರಲ್ಲಿ ಶೇ 6.4ರಷ್ಟು ಕಾಣುವ ನಿರೀಕ್ಷೆ ಇದೆ' ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಮೂಡೀಸ್ ಹೇಳಿದೆ.
- ಭಾರತವು, ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ಏಷ್ಯಾ–ಪೆಸಿಫಿಕ್ ಪ್ರದೇಶದಾದ್ಯಂತ ಬೆಳವಣಿಗೆಯನ್ನು ಮುನ್ನಡೆಸಲಿದೆ ಎಂದು ಹೇಳಿದೆ.
- ಜಾಗತಿಕ ಅನಿಶ್ಚಿತತೆಯ ನಡುವೆಯೂ ದೇಶೀಯ ಬೇಡಿಕೆ ಹೆಚ್ಚಳದಿಂದ ಆರ್ಥಿಕ ಚಟುವಟಿಕೆ ಉತ್ತಮವಾಗಿದೆ. 2024ರಲ್ಲಿ ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಜಿಡಿಪಿ ಬೆಳವಣಿಗೆ ಶೇ 3.3ರಷ್ಟು ದಾಖಲಾಗಿತ್ತು. ಇದು 2025ರಲ್ಲಿ ಶೇ 3.6 ಮತ್ತು 2026ರಲ್ಲಿ ಶೇ 3.4ರಷ್ಟಾಗುವ ನಿರೀಕ್ಷೆ ಇದೆ ಎಂದು ಅಂದಾಜಿಸಿದೆ.

## ❖ ಸೀಹಾಕ್ ಹೆಲಿಕಾಪ್ಟರ್: ಒಪ್ಪಂದಕ್ಕೆ ಸಹಿ

**ಸಂದರ್ಭ: ಭಾರತೀಯ ನೌಕಾಪಡೆಗೆ 24 ಸೀಹಾಕ್ ಹೆಲಿಕಾಪ್ಟರ್‌ಗಳನ್ನು ಐದು ವರ್ಷಗಳಲ್ಲಿ ಪೂರೈಸಲು ಈ ಹಿಂದೆ ಮಾಡಿಕೊಂಡಿದ್ದ ಒಪ್ಪಂದದ ಮೊತ್ತವನ್ನು ₹7,995 ಕೋಟಿಗೆ ನಿಗದಿಪಡಿಸಿ, ಭಾರತ ಹಾಗೂ ಅಮೆರಿಕ ಸಹಿ ಮಾಡಿವೆ.**

- ಆಗಸ್ಟ್ ಅಂತ್ಯದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತೀಯ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಿದ ನಂತರ ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಸ್ವಲ್ಪ ಒಡಕು ಮೂಡಿರುವುದರ ಮಧ್ಯೆಯೇ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

## ❖ ಜಿಂದಾಲ್ ತೆಕ್ಕೆಗೆ ಗೋದ್ನಾ ವಿದ್ಯುತ್ ಯೋಜನೆ?

**ಸಂದರ್ಭ: 1,600 ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆ I ಪಿಪಿಪಿ ಮಾದರಿಯಲ್ಲಿ ಅನುಷ್ಠಾನ. ಛತ್ತೀಸಗಢದ ಗೋದ್ನಾದಲ್ಲಿ ಕರ್ನಾಟಕ ಸರ್ಕಾರ ಆರಂಭಿಸುತ್ತಿರುವ 1,600 ಮೆಗಾವಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಯು ಜಿಂದಾಲ್ ಸೌತ್ ವೆಸ್ಟ್ (ಜೆಎಸ್‌ಡಬ್ಲ್ಯು) ಎನರ್ಜಿ ಕಂಪನಿಯ ಪಾಲಾಗುವ ಸಾಧ್ಯತೆ ಹೆಚ್ಚಿದೆ.**

- ಹಲವು ವರ್ಷಗಳಿಂದ ನನೆಗುದಿಯಲ್ಲಿದ್ದ ಈ ಯೋಜನೆಗೆ ಮರುಜೀವ ನೀಡಿರುವ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್), ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಜಾರಿಗೊಳಿಸಲು ಟೆಂಡರ್ ಕರೆದಿತ್ತು. ಇದರಲ್ಲಿ ಜೆಎಸ್‌ಡಬ್ಲ್ಯು ಎನರ್ಜಿ ಮತ್ತು ದೈನಿಕ್ ಭಾಸ್ಕರ್ ಗ್ರೂಪ್‌ನ ಡಿಬಿ ಪವರ್ ಲಿಮಿಟೆಡ್ ಭಾಗವಹಿಸಿದ್ದವು.
- 'ಟೆಂಡರ್ ಷರತ್ತುಗಳ ಪ್ರಕಾರ ಜೆಎಸ್‌ಡಬ್ಲ್ಯು ಎನರ್ಜಿ ಕಂಪನಿ ಎಲ್ಲ ಅರ್ಹತೆಗಳನ್ನು ಹೊಂದಿದೆ. ಡಿಸೆಂಬರ್ ತಿಂಗಳಲ್ಲಿ ನಡೆಯುವ ಕೆಪಿಸಿಎಲ್‌ನ ಆಡಳಿತ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಟೆಂಡರ್ ಅನ್ನು ಅಂತಿಮಗೊಳಿಸಲಾಗುತ್ತದೆ ಎಂದು ನಿಗಮದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.
- 'ಜೆಎಸ್‌ಡಬ್ಲ್ಯು ಎನರ್ಜಿ ಕಂಪನಿಯು ಯೂನಿಟ್‌ಗೆ ₹4.05 ಹಾಗೂ ಡಿಬಿ ಪವರ್ ಲಿಮಿಟೆಡ್‌ನವರು ಒಂದು ಯೂನಿಟ್‌ಗೆ ₹4.20 ದರ ನಿಗದಿ ಮಾಡುವಂತೆ ಟೆಂಡರ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಯೋಜನೆ ಪೂರ್ಣಗೊಂಡ ನಂತರ ಅದಕ್ಕೆ ಒಟ್ಟಾರೆ ಎಷ್ಟು ವೆಚ್ಚವಾಗಿದೆ, ಕಲ್ಲಿದ್ದಲು ದರ ಎಷ್ಟಿದೆ ಎಂಬುದನ್ನು ಲೆಕ್ಕಾಚಾರ ಮಾಡಿ, ಅಂತಿಮವಾಗಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ದರ ನಿಗದಿ ಮಾಡಲಿದೆ' ಎಂದು ಅವರು ವಿವರಿಸಿದರು.
- 'ಸಾಮಾನ್ಯವಾಗಿ ಈ ರೀತಿಯ ದೊಡ್ಡ ಯೋಜನೆಗಳಲ್ಲಿ 25 ವರ್ಷಗಳ ಅವಧಿಗೆ ದರ ನಿಗದಿ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಯೋಜನೆಯ ವೆಚ್ಚ, ಕಲ್ಲಿದ್ದಲು ದರ, ಉತ್ಪಾದನಾ ವೆಚ್ಚ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯುತ್ ಖರೀದಿ ದರವನ್ನು ನಿಗದಿಪಡಿಸಲಾಗುತ್ತದೆ. ಟೆಂಡರ್ ನಲ್ಲಿ ಪ್ರಸ್ತಾಪ ಮಾಡಿರುವುದಕ್ಕಿಂತ ಕಡಿಮೆ ಆಗಬಹುದು ಅಥವಾ ಜಾಸ್ತಿಯೂ ಆಗಬಹುದು' ಎಂದು ಹೇಳಿದರು.
- ರಾಜ್ಯ ಸರ್ಕಾರ ಮೊದಲ ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಯೋಜನೆಗೆ ಸುಮಾರು ₹18 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಟೆಂಡರ್ ಪಡೆಯುವ ಖಾಸಗಿ ಕಂಪನಿ ಶೇ 74ರಷ್ಟು ಹಾಗೂ ಕೆಪಿಸಿಎಲ್ ಶೇ 26ರಷ್ಟು ಮೊತ್ತವನ್ನು ಭರಿಸಲಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಯೋಜನೆ ಪೂರ್ಣಗೊಳ್ಳಲು 45 ತಿಂಗಳು ಆಗಬಹುದು ಎಂದು ಅಂದಾಜಿಸಲಾಗಿದೆ.
- ಗೋದ್ನಾದಲ್ಲಿ ಈ ಯೋಜನೆಯನ್ನು ಆರಂಭಿಸುವ ಸಂಬಂಧ 2008ರಲ್ಲಿ ಆಗಿನ ಬಿಜೆಪಿ ಸರ್ಕಾರವು ಅಲ್ಲಿನ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಈ ಯೋಜನೆಗಾಗಿ 1,016 ಎಕರೆ ಖಾಸಗಿ ಜಮೀನು ಹಾಗೂ 160 ಎಕರೆ ಸರ್ಕಾರಿ ಜಮೀನನ್ನು 2013ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ಸುಮಾರು ₹220 ಕೋಟಿ ಖರ್ಚಾಗಿದೆ. ಈ ಯೋಜನೆಗೆ ಅಗತ್ಯವಿರುವ ನೀರನ್ನು ಮಹಾನದಿಯಿಂದ ನೀಡಲು ಛತ್ತೀಸಗಢ ಸರ್ಕಾರ ಸಮ್ಮತಿಸಿದೆ.
- **<u>ಕಲ್ಲಿದ್ದಲು ಹಂಚಿಕೆ:</u>** ಗೋದ್ನಾ ಸಮೀಪದಲ್ಲೇ ಎರಡು ಕಲ್ಲಿದ್ದಲು ಗಣಿಗಳನ್ನು ಕೇಂದ್ರ ಸರ್ಕಾರವು 2019ರಲ್ಲಿ ಕೆಪಿಸಿಎಲ್‌ಗೆ ಹಂಚಿಕೆ ಮಾಡಿದೆ. 1,600 ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿ ವರ್ಷಕ್ಕೆ 70 ಲಕ್ಷ ಟನ್ ಕಲ್ಲಿದ್ದಲು ಬೇಕಾಗುತ್ತದೆ. 21 ಕೋಟಿ ಟನ್ ಕಲ್ಲಿದ್ದಲು ಅಲ್ಲಿ ಲಭ್ಯವಿದ್ದು, 30 ವರ್ಷಗಳವರೆಗೆ ಬಳಸಬಹುದಾಗಿದೆ.

**ಯೂನಿಟ್‌ಗೆ ಒಂದು ರೂಪಾಯಿ ಉಳಿತಾಯ**

- ಛತ್ತೀಸಗಢದ ಗೋದ್ನಾದಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಮಾಡುವುದರಿಂದ, ಸುಮಾರು 1,500 ಕಿ.ಮೀ. ದೂರದಿಂದ ರಾಜ್ಯಕ್ಕೆ ಕಲ್ಲಿದ್ದಲು ಸಾಗಿಸಲು ಮಾಡುತ್ತಿದ್ದ ವೆಚ್ಚ ಉಳಿಯಲಿದೆ.
- ಒಂದು ಯೂನಿಟ್ ವಿದ್ಯುತ್ ಉತ್ಪಾದನೆಗೆ ತಗಲುವ ಒಟ್ಟು ವೆಚ್ಚದಲ್ಲಿ ಕಲ್ಲಿದ್ದಲು ಸಾಗಣೆಗೆ ₹1.50 ವ್ಯಯಿಸಬೇಕಾಗಿತ್ತು. ಈಗ ಆ ಹಣ ಉಳಿಯಲಿದೆ. ಅಲ್ಲಿಂದ ದಕ್ಷಿಣ ವಲಯದ ವಿದ್ಯುತ್ ಜಾಲದ ಮೂಲಕ ರಾಜ್ಯಕ್ಕೆ ವಿದ್ಯುತ್ ತರಲು ಒಂದು ಯೂನಿಟ್‌ಗೆ 50 ಪೈಸೆ ಪ್ರಸರಣ ವೆಚ್ಚವಾಗಲಿದೆ. ಈ ಎರಡೂ ವೆಚ್ಚಗಳಿಗೆ ಹೋಲಿಸಿದರೆ ಕಲ್ಲಿದ್ದಲು ಸಾಗಣೆಯಲ್ಲಿ ಯೂನಿಟ್‌ಗೆ ಒಂದು ರೂಪಾಯಿ ಉಳಿತಾಯವಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

## ❖ ಬೌದ್ಧರಿಗೆ ಅನ್ವಯವಾಗುವ ಕಾನೂನು ಪರಿಶೀಲನೆಗೆ ಸೂಚನೆ

ಸಂದರ್ಭ: **ಕೆಲ ಹಿಂದೂ ವೈಯಕ್ತಿಕ ಕಾನೂನುಗಳು ಭೌದ್ಧ ಧರ್ಮದವರಿಗೂ ಅನ್ವಯವಾಗುತ್ತಿದ್ದು, ಅವುಗಳಿಂದ ಧಾರ್ಮಿಕ ಆಚರಣೆಯ ಸ್ವಾತಂತ್ರ್ಯ ಸೇರಿದಂತೆ ಮೂಲಭೂತ ಹಕ್ಕುಗಳಿಗೆ ಚ್ಯುತಿ ಉಂಟಾಗುತ್ತಿದೆ ಎಂದು ಭೌದ್ಧ ಧರ್ಮೀಯರ ವೈಯಕ್ತಿಕ ಕಾನೂನು ಕ್ರಿಯಾ ಸಮಿತಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.**

- ಈ ಕುರಿತು ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ, ಈ ಅರ್ಜಿಯನ್ನು ಬೌದ್ಧರ ಗುಂಪಿನ ಪ್ರಾತಿನಿಧ್ಯ ಎಂದು ಪರಿಗಣಿಸಿ, ಪರಿಶೀಲಿಸುವಂತೆ ಕಾನೂನು ಆಯೋಗಕ್ಕೆ ಶುಕ್ರವಾರ ತಿಳಿಸಿದೆ.
- ಅಸ್ತಿತ್ವದಲ್ಲಿರುವ ಕೆಲ ಕಾನೂನು ನಿಬಂಧನೆಗಳು ಬೌದ್ಧ ಸಮುದಾಯದವರ ಮೂಲಭೂತ ಹಕ್ಕುಗಳು ಮತ್ತು ಸಾಂಸ್ಕೃತಿಕ ಆಚರಣೆಗಳಿಗೆ ವಿರುದ್ಧವಾಗಿವೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ. ಇದು ಸಾಂವಿಧಾನಿಕ ಮತ್ತು ಶಾಸನಬದ್ಧ ಬದಲಾವಣೆಗಳನ್ನು ಕೋರಿದ್ದು, ಪರಿಶೀಲಿಸುವಂತೆ ಪೀಠ ಆಯೋಗಕ್ಕೆ ಸೂಚಿಸಿದೆ.
- **ಹಿಂದೂ ವಿವಾಹ ಕಾಯ್ದೆ (1955), ಹಿಂದೂ ಉತ್ತರಾಧಿಕಾರ ಕಾಯ್ದೆ (1956), ಹಿಂದೂ ಅಪ್ರಾಪ್ತ ವಯಸ್ಕ ಮತ್ತು ಪಾಲನಾ ಕಾಯ್ದೆ (1956) ಮತ್ತು ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆಗಳು (1956) ಹಿಂದೂಗಳಂತೆಯೇ ಬೌದ್ಧರನ್ನು ನಿಯಂತ್ರಿಸುತ್ತಿವೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಅಲ್ಲದೆ, ಸಂವಿಧಾನದ 25ನೇ ವಿಧಿಯ 'ಹಿಂದೂ' ವ್ಯಾಖ್ಯಾನದೊಳಗೆ ಬೌದ್ಧರು, ಜೈನರು ಮತ್ತು ಸಿಖ್ಖರನ್ನೂ ಸೇರಿಸಲಾಗಿದೆ ಎಂದು ತಿಳಿಸಲಾಗಿದೆ.**
- ವಿಚಾರಣೆಯ ಆರಂಭದಲ್ಲಿ ಈ ಅರ್ಜಿಯ ಸ್ವರೂಪವನ್ನು ಪ್ರಶ್ನಿಸಿದ ಸಿಜೆಐ, 'ಸಂವಿಧಾನ ಮತ್ತು ವೈಯಕ್ತಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಆದೇಶವನ್ನು ನೀವು ನಿರೀಕ್ಷಿಸುತ್ತಿದ್ದೀರಾ? ಸಂವಿಧಾನದ ಮೂಲ ರಚನೆಯ ತಿದ್ದುಪಡಿಯನ್ನೂ ಬಯಸುತ್ತಿದ್ದೀರಾ? ಈ ಸಂಬಂಧ ನೀವು ಸರ್ಕಾರಿ ಪ್ರಾಧಿಕಾರ ವನ್ನು ಸಂಪರ್ಕಿಸಿದ್ದೀರಾ?' ಎಂದು ಕೇಳಿತು.ಈ ಸಂಬಂಧ ಬೌದ್ಧ ಸಮುದಾಯದವರು ಹಲವು ಬಾರಿ ಮನವಿಗಳನ್ನು ಸಲ್ಲಿಸಿದ್ದಾರೆ ಎಂದು ಅರ್ಜಿದಾರರ ಪರ ವಕೀಲರು ಪೀಠದ ಗಮನಕ್ಕೆ ತಂದರು.
- ಆಗ ಪ್ರತಿಕ್ರಿಯಿಸಿದ ಪೀಠ, 'ಕಾನೂನು ಆಯೋಗವು ದೇಶದ ಏಕೈಕ ಕಾನೂನು ತಜ್ಞ ಸಂಸ್ಥೆ. ಅದು ಸಾಮಾನ್ಯವಾಗಿ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯ ನೇತೃತ್ವದಲ್ಲಿ ಇರುತ್ತದೆ. ಈ ರೀತಿಯ ಅರ್ಜಿಗಳನ್ನು ಪರಿಶೀಲಿಸಿ, ಅಗತ್ಯವಿದ್ದರೆ ಸಾಂವಿಧಾನಿಕ ತಿದ್ದುಪಡಿಗಳಿಗೆ ಶಿಫಾರಸು ಮಾಡುತ್ತದೆ' ಎಂದು ಹೇಳಿತು.

**------------------------------------------ಶುಭವಂದನೆಗಳು------------------------------------------**